24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 69 | ನವದೆಹಲಿ | ಬೆಲೆ ₹10 | ಸೆಪ್ಟಂಬರ್ 4 2026 ಶುಕ್ರವಾರ



ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು

ಪ್ರಜಾಸೇವಾ ಇಲಾಖೆ



ಡಾ. ಜಿ. ಪರಮೇಶ್ವರ
ಮಾನ್ಯ ಉಪ ಮುಖ್ಯಮಂತ್ರಿಗಳು

# ಪ್ರಜಾಸೇವೆ ಉದ್ಘಾಟನೆ

## ಅಹವಾಲು ನಿಮ್ಮದು, ಪರಿಹಾರ ನಮ್ಮದು

ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಡಿ.ಕೆ. ಶಿವಕುಮಾರ್**
ಅವರಿಂದ ಉದ್ಘಾಟನೆ







**ದಿನಾಂಕ:**
05.09.2026

**ಸಮಯ:**
ಬೆಳಿಗ್ಗೆ 10.30 ಗಂಟೆಗೆ

**ಸ್ಥಳ:** ಕೂಡ್ಲಿಗಿ ಶಾಸಕರ ಕಛೇರಿ ಮುಂಭಾಗ
ಗುಡೆಕೋಟೆ ರಸ್ತೆ, ಕೂಡ್ಲಿಗಿ, ವಿಜಯನಗರ ಜಿಲ್ಲೆ

ಪ್ರತಿ ತಿಂಗಳ ಮೊದಲ ಹಾಗೂ ಮೂರನೇ ಶನಿವಾರ ರಾಜ್ಯದ ಎಲ್ಲಾ ಜಿಲ್ಲೆ, ತಾಲ್ಲೂಕು ಹಾಗೂ ಹೋಬಳಿ ಮಟ್ಟದಲ್ಲಿ ಆಯಾ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶಾಸಕರ ಅಧ್ಯಕ್ಷತೆಯಲ್ಲಿ ಪ್ರಜಾಸೇವೆ ಆಂದೋಲನಾ ಸಭೆಗಳು ನಡೆಯಲಿದ್ದು, ಜನರಿಂದ ಅಹವಾಲು ಸ್ವೀಕರಿಸಿ ಅರ್ಹ ಅರ್ಜಿಗಳಿಗೆ ಪರಿಹಾರ ಒದಗಿಸಲಾಗುವುದು

**ಘನ ಉಪಸ್ಥಿತಿ**

**ಶ್ರೀ ಕೆ. ಎಸ್. ಬಸವಂತಪ್ಪ**
ಮಾನ್ಯ ಮುಜರಾಯಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ

**ಶ್ರೀ ಈ. ತುಕಾರಾಮ್**
ಮಾನ್ಯ ಸಂಸದರು
(ಲೋಕಸಭೆ) ಬಳ್ಳಾರಿ

**ಉಪಸ್ಥಿತಿ**

**ಶ್ರೀ ವೈ.ಎಂ. ಸತೀಶ್**
ಮಾನ್ಯ ಶಾಸಕರು
(ವಿಧಾನ ಪರಿಷತ್ತು)

**ಅಧ್ಯಕ್ಷತೆ**


**ಡಾ. ಶ್ರೀನಿವಾಸ್ ಎನ್.ಟಿ.**
ಮಾನ್ಯ ಶಾಸಕರು
(ವಿಧಾನಸಭೆ) ಕೂಡ್ಲಿಗಿ ಕ್ಷೇತ್ರ

## ಬಾಗಿಲಿಗೆ ಬಂತು ಸರಕಾರ, ಸೇವೆಗೆ ಇರಲಿ ಸಹಕಾರ

**ಸರ್ವರಿಗೂ ಆದರದ ಸ್ವಾಗತ**

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

## ನಿತ್ಯ ಪಂಚಾಂಗ 4.09.2026 ಶುಕ್ರವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಗ್ರೀಷ್ಮ ಋತು, ಚಾಂದ್ರಮಾನ ಶ್ರಾವಣ–ಬಾದ್ರಪದ ಮಾಸ

ಶ್ರಾವಣ ಬಹುಳ, ಅಷ್ಟಮಿ,
ರೋಹಿಣಿ ನಕ್ಷತ್ರ, ಆರೀ ಕೃಷ್ಣ ಜನ್ಮಾಷ್ಟಮಿ,
ದಕ್ಷ ಸಾಚರ್ಣಿ ಮನ್ವಾದಿ, ಕಾಲಾಷ್ಟಮಿ,
ಬಾರಂದೂರಾಶ್ರಮ ಕೃಷ್ಣಾಷ್ಟಮಿ, ಮನ್ನಾರ್ ಕೃಷ್ಣ ಜಯಂತಿ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |

# ಸೆ.10: ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ

### ಡಿಕೆಶಿ-ಕೆ.ಎನ್.ರಾಜಣ್ಣ ನಡುವೆ ಹೋರಾಟ ಸಾಧ್ಯತೆ

**ಬೆಂಗಳೂರು, ಸೆ.3:** ಕಳೆದ ಬಾರಿ ರಾಜಕೀಯ ಜಿದ್ದಾಜಿದ್ದಿಗೆ ಕಾರಣವಾಗಿದ್ದ ಅಪೆಕ್ಸ್ ಬ್ಯಾಂಕ್ ಚುನಾವಣೆ ಇದೀಗ ಮತ್ತೆ ಕದನ ಕುತೂಹಲ ಕೆರಳಿಸಿದೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಹಕಾರಿ ಧುರೀಣ ಕೆ.ಎನ್. ರಾಜಣ್ಣ ನಡುವೆ ರಾಜಕೀಯ ಜಿದ್ದಾಜಿದ್ದಿಗೆ ವೇದಿಕೆ ಸಜ್ಜಾಗುವ ನಿರೀಕ್ಷೆ ಇದೆ.

ಅಪೆಕ್ಸ್ ಬ್ಯಾಂಕ್ ಚುನಾವಣೆಗೆ ದಿನಾಂಕ ನಿಗದಿಯಾಗಿದ್ದು, ಚುನಾವಣಾಧಿಕಾರಿ ಚುನಾವಣಾ ವೇಳಾಪಟ್ಟಿಯನ್ನು ಘೋಷಿಸಿದ್ದಾರೆ. ಸೆ.10 ರಂದು ಬ್ಯಾಂಕ್ ಅಧ್ಯಕ್ಷ, ಉಪಾಧ್ಯಕ್ಷ ಹುದ್ದೆಗಳಿಗೆ ಚುನಾವಣೆ ನಡೆಯಲಿದೆ. ಕಳೆದ ಬಾರಿ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಸ್ಥಾನವನ್ನು ತಮ್ಮ ಬೆಂಬಲಿಗರಿಗೆ ಕೊಡಿಸಲು ಆಗಿನ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಂದಾಗಿದ್ದರು.

ಈ ವಿಚಾರವಾಗಿ ಮಾಜಿ ಸಚಿವ ಕೆ.ಎನ್.ರಾಜಣ್ಣ ನಡುವೆ ಜಿದ್ದಾಜಿದ್ದಿ ನಡೆದಿತ್ತು. ರಾಜಣ್ಣ ಅಧ್ಯಕ್ಷರಾಗುವ ಸಾಧ್ಯತೆ ಹೆಚ್ಚಿದ್ದ ಹಿನ್ನೆಲೆಯಲ್ಲಿ ಚುನಾವಣೆಯೇ ರಾಜಕೀಯವಾಗಿ ಮಹತ್ವ ಪಡೆದುಕೊಂಡಿತ್ತು.

ಆ ಸಂದರ್ಭದಲ್ಲಿ ಡಿ.ಕೆ. ಶಿವಕುಮಾರ್ ಅವರು ಪಕ್ಷದ ವರಿಷ್ಠರ ಮೂಲಕ ಚುನಾವಣೆಯನ್ನು ಮುಂದೂಡಿಸುವಲ್ಲಿ ಯಶಸ್ವಿಯಾಗಿದ್ದರು. ಇದೇ ವೇಳೆ ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿಯ ವಿಚಾರವಾಗಿ ಕಾಂಗ್ರೆಸ್‌ನಲ್ಲಿ ಆಂತರಿಕ ಜಟಾಪಟಿ ಕೂಡ ಜೋರಾಗಿತ್ತು. ಹೀಗಾಗಿ ಅಪೆಕ್ಸ್ ಬ್ಯಾಂಕ್ ಚುನಾವಣೆ ಮತ್ತಷ್ಟು ರಾಜಕೀಯ ಮಹತ್ವ ಪಡೆದುಕೊಂಡಿತ್ತು.

ಆದರೆ ಇದೀಗ ಪಕ್ಷದೊಳಗಿನ ಹಲವು ಪ್ರಮುಖ ವಿಚಾರಗಳು ಶಮನಗೊಂಡಿರುವ ಹಿನ್ನೆಲೆಯಲ್ಲಿ ಚುನಾವಣೆ ನಡೆಸಲು ಸರ್ಕಾರ ಮುಂದಾಗಿದೆ. ಈ ಬಾರಿ ಚುನಾವಣೆ ನಡೆಯುವುದರಿಂದ ಮತ್ತೆ ಡಿ.ಕೆ. ಶಿವಕುಮಾರ್ ಬಣ ಹಾಗೂ ಕೆ.ಎನ್. ರಾಜಣ್ಣ ನಡುವೆ ರಾಜಕೀಯ ಪೈಪೋಟಿ ಎದುರಾಗಲಿದೆಯೇ ಎಂಬ ಪ್ರಶ್ನೆ ಮೂಡಿದೆ.

11 ನಿರ್ದೇಶಕರ ಬೆಂಬಲ ಹೊಂದಿದ್ದಾರೆ ಎನ್ನಲಾಗಿರುವ ಕೆ.ಎನ್. ರಾಜಣ್ಣ ಅಧ್ಯಕ್ಷ ಸ್ಥಾನದ ಪ್ರಬಲ ಆಕಾಂಕ್ಷಿ. ಬಿಜೆಪಿ ಹಾಗೂ ಜೆಡಿಎಸ್ ಬೆಂಬಲಿತ ನಿರ್ದೇಶಕರು ರಾಜಣ್ಣ ಅವರನ್ನು ಬೆಂಬಲಿಸಬಹುದು ಎಂದು ಹೇಳಲಾಗುತ್ತಿದೆ. ಇದೇ ತಿಂಗಳು 10ರಂದು ನಡೆಯುವ ಚುನಾವಣೆಯಲ್ಲಿ ಅಭ್ಯರ್ಥಿಯಾಗಿರುತ್ತಾರೋ ಅಥವಾ ತಮ್ಮ ಬೆಂಬಲಿಗರನ್ನು ಕಣಕ್ಕಿಳಿಸುತ್ತಾರೋ ಎಂಬ ಚರ್ಚೆಗಳಿವೆ. ಮತ್ತೊಂದೆಡೆ, ಕಾಂಗ್ರೆಸ್



ಪಕ್ಷದೊಳಗಿನ ಸಮೀಕರಣ ಈ ಚುನಾವಣೆಯಲ್ಲಿ ಯಾವ ರೀತಿಯ ಪರಿಣಾಮ ಬೀರುತ್ತದೆ ಎಂಬುದೂ ಗಮನಾರ್ಹವಾಗಿದೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈ ಹಿಂದೆ ತಮ್ಮ ಸಂಬಂಧಿ ಎಸ್.ರವಿ ಅವರನ್ನು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರನ್ನಾಗಿ ಮಾಡಲು ಆಸಕ್ತಿ ತೋರಿಸಿದ್ದರು. ಇತ್ತೀಚಿನ ಬೆಳವಣಿಗೆಯಲ್ಲಿ ರಾಜ್ಯದ ಪ್ರಮುಖ ಸಹಕಾರಿ ಸಂಸ್ಥೆಗಳಾದ ಸಹಕಾರ ಒಕ್ಕೂಟ ಮಹಾಮಂಡಲ ಕೆಎಂಎಫ್ ಮತ್ತು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಸ್ಥಾನಗಳು ಕಾಂಗ್ರೆಸ್‌ಪಾಲಿಗೆ ಪ್ರತಿಷ್ಠೆಯ ಪ್ರಶ್ನೆಗಳಾಗಿವೆ.

ಬಿಜೆಪಿ–ಜೆಡಿಎಸ್‌ನ ಪೈಪೋಟಿ ನಡುವೆ, ಕಾಂಗ್ರೆಸ್‌ನಲ್ಲೂ ಆಂತರಿಕವಾಗಿ ಸಾಕಷ್ಟು ಆಕಾಂಕ್ಷಿಗಳಿದ್ದಾರೆ. ರಾಜಣ್ಣ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ವಿರೋಧಿ ಬಣದಲ್ಲಿ ಗುರುತಿಸಿಕೊಂಡು ರಾಜಕೀಯವಾಗಿ ಸವಾಲಿನ ಸನ್ನಿವೇಶ ಸೃಷ್ಟಿಸಿದ್ದರು. ಸಚಿವರಾಗಿದ್ದ ಅವರು ರಾಜಕೀಯ ಬೆಳವಣಿಗೆಗಳಲ್ಲಿ ಅವಧಿಗೂ ಮುನ್ನವೇ ಮಾಜಿಯಾದರು. ಈಗ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ.

ಡಿ.ಕೆ.ಶಿವಕುಮಾರ್ ಅವರು ಸುಲಭಕ್ಕೆ ರಾಜಣ್ಣ ಅವರಿಗೆ ಅವಕಾಶ ಮಾಡಿಕೊಡುತ್ತಾರೋ ಅಥವಾ ತಮ್ಮ ಬೆಂಬಲಿಗರನ್ನು ಅಖಾಡಕ್ಕಿಳಿಸುತ್ತಾರೋ ಎಂಬುದು ಕಾದು ನೋಡಬೇಕಿದೆ.

ಕಳೆದ ಬಾರಿಯಂತೆ ಈ ಬಾರಿಯೂ ಅಪೆಕ್ಸ್ ಬ್ಯಾಂಕ್ ಚುನಾವಣೆ ರಾಜಕೀಯ ಜಿದ್ದಾಜಿದ್ದಿಗೆ ವೇದಿಕೆಯಾಗುತ್ತಾ ಅಥವಾ ಒಮ್ಮತದ ಮೂಲಕ ಅಧ್ಯಕ್ಷರ ಆಯ್ಕೆ ನಡೆಯಲಿದೆಯೇ ಎಂಬ ಕುತೂಹಲ ವ್ಯಕ್ತವಾಗಿದೆ.

## ಅಪೆಕ್ಸ್ ಬ್ಯಾಂಕ್ ಚುನಾವಣೆ: ಹೈಕೋರ್ಟ್‌ಗೆ ಸರ್ಕಾರ ಮಾಹಿತಿ

**ಬೆಂಗಳೂರು, ಸೆ.3:** ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣಾ ಪ್ರಕ್ರಿಯೆ ನಡೆಸಲು ಸಹಕಾರ ಚುನಾವಣಾ ಪ್ರಾಧಿಕಾರ ಚುನಾವಣಾ ಅಧಿಕಾರಿಯನ್ನು ನೇಮಿಸಿದೆ ಎಂದು ಸರ್ಕಾರ ಹೈಕೋರ್ಟ್‌ಗೆ ಮಾಹಿತಿ ನೀಡಿದೆ.

ಬ್ಯಾಂಕಿನ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲು ನಿರ್ದೇಶನ ನೀಡುವಂತೆ ಕೋರಿ ಬ್ಯಾಂಕಿನ ನಿರ್ದೇಶಕರೂ ಆಗಿರುವ ಮಾಜಿ ಶಾಸಕ ಬೆಳ್ಳಿ ಪ್ರಕಾಶ್ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಎಂ ಐ ಅರುಣ್ ಅವರ ಏಕಸದಸ್ಯ ಪೀಠದ ವಿಚಾರಣೆ ನಡೆಸಿತು.

ಈ ವೇಳೆ ಸರ್ಕಾರದ ಪರ ವಕೀಲರು, ಬ್ಯಾಂಕಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣಾ ಪ್ರಕ್ರಿಯೆ ನಡೆಸಲು ಸಹಕಾರ ಚುನಾವಣಾ ಪ್ರಾಧಿಕಾರ ಚುನಾವಣಾಧಿಕಾರಿಯನ್ನು ನೇಮಿಸಿದೆ ಎಂದರು. ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಗಳ ಚುನಾವಣೆಗೆ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ. ಅರ್ಜಿಗೆ ಸಂಬಂಧಿಸಿದಂತೆ ವಾದ ಮಂಡಿಸಲು ಕಾಲಾವಕಾಶ ಬೇಕೆಂದು ಅಪೆಕ್ಸ್ ಬ್ಯಾಂಕ್ ಪರ ವಕೀಲರು ಮನವಿ ಮಾಡಿದರು. ಇದನ್ನು ಪರಿಗಣಿಸಿದ ಪೀಠ ವಿಚಾರಣೆಯನ್ನು ಸೆಪ್ಟೆಂಬರ್ 8ಕ್ಕೆ ಮುಂದೂಡಿತು.

## ಬರಪರಿಸ್ಥಿತಿ ಚರ್ಚೆಗೆ ಸೆ.21ರಿಂದ 3 ದಿನ ವಿಶೇಷ ಅಧಿವೇಶನ

**ಬೆಂಗಳೂರು, ಸೆ.3:** ಬರ ಪರಿಸ್ಥಿತಿ, ಕಸ್ತೂರಿ ರಂಗನ್ ವರದಿ ಸೇರಿದಂತೆ ಹಲವು ಮಹತ್ವದ ವಿಷಯಗಳ ಕುರಿತು ಚರ್ಚಿಸಲು ರಾಜ್ಯ ವಿಧಾನಮಂಡಲದ ವಿಶೇಷ ಅಧಿವೇಶನವನ್ನು ಸೆಪ್ಟೆಂಬರ್ 21 ರಿಂದ ಮೂರು ದಿನಗಳ ಕಾಲ ಕರೆಯಲು ತೀರ್ಮಾನಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಾ.ಜಿ ಪರಮೇಶ್ವರ ತಿಳಿಸಿದರು.



ಬರ ಪರಿಸ್ಥಿತಿ ಕುರಿತು ಬಿಜೆಪಿ ನಾಯಕರು ಪಾದಯಾತ್ರೆ ಕೈಗೊಳ್ಳುತ್ತಿರುವ ಬೆನ್ನಲ್ಲೇ ವಿಶೇಷ ಅಧಿವೇಶನ ಕರೆಯಲು ತೀರ್ಮಾನಿಸಲಾಗಿದೆ. ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ರೈತರು ಸಂಕಷ್ಟದಲ್ಲಿದ್ದು, ಸದನದಲ್ಲಿ ಚರ್ಚಿಸಲು ಅವಕಾಶ ದೊರೆಯುತ್ತಿಲ್ಲ. ಈ ಬಾರಿ ನೂರು ವರ್ಷಗಳ ಬಳಿಕ ಭೀಕರ ಬರಗಾಲ ಎದುರಾಗಿದೆ. ರಾಜ್ಯದ ಆರ್ಥಿಕತೆ, ಆಹಾರ, ಬದುಕಿನ ಮೇಲೆ ಗಂಭೀರ ಪರಿಣಾಮ ಎದುರಾಗಿದೆ. ಜೊತೆಗೆ ಕಸ್ತೂರಿ ರಂಗನ್ ವರದಿ ವಿಷಯ ಮತ್ತೆ ಚರ್ಚೆಗೆ ಬಂದಿದೆ. ನಾಲ್ಕೈದು ಬಾರಿ ತಿರಸ್ಕರಿಸಲಾಗಿದೆ. ಈ ಎಲ್ಲಾ ವಿಷಯಗಳ ಕುರಿತು ಅಧಿವೇಶನದಲ್ಲಿ ಚರ್ಚಿಸಲಾಗುವುದು. ಪ್ರಶ್ನೋತ್ತರ ಸೇರಿದಂತೆ ಬೇರೆ ಯಾವುದೇ ಕಲಾಪ ಇರುವುದಿಲ್ಲ ಎಂದರು.

ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಮೇವು ಖರೀದಿ, ಮೇವಿನ ಬೀಜದ ಕಿಟ್ ದೊರಕಿಸಿಕೊಡಲು 25 ಕೋಟಿ ರೂ ಮೊತ್ತವನ್ನು ಪಶು ಸಂಗೋಪನಾ ಇಲಾಖೆಗೆ ಮಂಜೂರು ಮಾಡಲಾಗಿದೆ ಎಂದು ಡಾ. ಜಿ. ಪರಮೇಶ್ವರ್ ತಿಳಿಸಿದರು.

## ಕೆಪಿಎಸ್‌ಸಿ ಪಶುವೈದ್ಯಾಧಿಕಾರಿ ನೇಮಕ ಹಗರಣ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಅಮಾನತು

**ಬೆಂಗಳೂರು, ಸೆ.3:** ಪಶುವೈದ್ಯಕೀಯ ಅಧಿಕಾರಿಗಳ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೊಳಗಾಗಿದ್ದ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಅವರನ್ನು ಅಮಾನತುಗೊಳಿಸಿ ಸರ್ಕಾರ ಆದೇಶಿಸಿದೆ.



ನೇಮಕಾತಿ ಹಗರಣದ ತನಿಖೆ ನಡೆಸುತ್ತಿರುವ ಅಪರಾಧ ತನಿಖಾ ಇಲಾಖೆ (ಸಿಐಡಿ), ಎರಡು ದಿನಗಳ ವಿಚಾರಣೆಯ ನಂತರ ಆಗಸ್ಟ್ 29ರಂದು ಗಂಗ್ವಾರ್ ಅವರನ್ನು ಬಂಧಿಸಿತ್ತು. ಅವರನ್ನು ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲಾಗಿದ್ದು, ಆಗಸ್ಟ್ 30ರಂದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. 3ನೇ ದಿನ, ಸಿಐಡಿ 2016ರ ಬ್ಯಾಚ್‌ನ ಈ ಐಎಎಸ್ ಅಧಿಕಾರಿಯನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಬಂಧನಕ್ಕೂ ಮುನ್ನ, ಜ್ಞಾನೇಂದ್ರ ಕುಮಾರ್ ಅವರು ಆಗಸ್ಟ್ 20ರಿಂದ ಎರಡು ದಿನಗಳ ಕಾಲ ಸಂಪರ್ಕಕ್ಕೆ ಸಿಗದೆ ಸುದ್ದಿಯಾಗಿದ್ದರು.

ಜ್ಞಾನೇಂದ್ರ ಕುಮಾರ್ ಅವರು ಫೆಬ್ರವರಿ 2024 ರಿಂದ ಮಾರ್ಚ್ 2026 ರವರೆಗೆ ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್‌ಸಿ) ಪರೀಕ್ಷಾ ನಿಯಂತ್ರಕರಾಗಿ ಸೇವೆ ಸಲ್ಲಿಸಿದ್ದರು. ಅವರು 48 ಗಂಟೆಗಳಿಗಿಂತ ಹೆಚ್ಚು ಕಾಲ ಅಧಿಕೃತ ಕಸ್ಟಡಿಯಲ್ಲಿದ್ದಾರೆ ಎಂಬುದನ್ನು ಗಮನಿಸಿದ ಸರ್ಕಾರ ಅಧಿಕಾರಿಯ ನಡವಳಿಕೆಯು ಅಖಿಲ ಭಾರತ ಸೇವೆಗಳ (ನಡವಳಿಕೆ) ನಿಯಮಗಳು, 1968ರ ನಿಯಮ 3ರ ತೀವ್ರ ಉಲ್ಲಂಘನೆಯಾಗಿದೆ ಎಂಬುದನ್ನು ಗಮನಿಸಿ ಅಮಾನತು ಮಾಡಿ ಆದೇಶಿಸಿದೆ.

## ಕೆಆರ್‌ಐಡಿಎಲ್ ಅಧಿಕಾರಿಗಳಿಂದ ಲಂಚಕ್ಕೆ ಬೇಡಿಕೆ ಪ್ರಕರಣ, ತನಿಖೆಯಿಂದ ಸತ್ಯ ಹೊರಬರಲಿದೆ: ಸಚಿವ ಯು.ಟಿ.ಖಾದರ್

**ಬೆಂಗಳೂರು, ಸೆ. 3:** ಮಂಗಳೂರಿನ ಕೆಆರ್‌ಐಡಿಎಲ್ ಇಂಜಿನಿಯರ್‌ಗಳು ಲಂಚ ಕೇಳಿರುವ ಪ್ರಕರಣದ ಬಗ್ಗೆ ತನಿಖೆಗೆ ಮನವಿ ಮಾಡಿದ್ದೇನೆ ತನಿಖೆಯಲ್ಲಿ ಸತ್ಯಾಸತ್ಯತೆ ಹೊರಬರಲಿದೆ ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ಹೇಳಿದರು ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಶಾಸಕ ಮಿತ್ರರಿಗೆ ಅವರ ಸ್ನೇಹಿತರು ಬಂದು



ಅಧಿಕಾರಿಗಳು ಉಸ್ತುವಾರಿ ಸಚಿವರು ಹಾಗೂ ಸಚಿವರ ಹೆಸರು ಹೇಳಿ ಹಣ ಕೇಳುತ್ತಿದ್ದಾರೆ ಹೀಗೆ ಮಾಹಿತಿ ಕೊಟ್ಟಾಗ ನನ್ನ ಹಾಗೂ ಗ್ರಾಮೀಣ ಸಚಿವರ ಹೆಸರನ್ನ ಕೆಡಿಸಬಾರದೆಂದು ನಮ್ಮ ಬಗ್ಗೆ ಕಾಳಜಿ ವಹಿಸಿ ಶಾಸಕರು ತಕ್ಷಣ ಪತ್ರ ಬರೆದಿದ್ದಾರೆ. ಹೀಗಾಗಿ ಅವರಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಗ್ರಾಮೀಣಾಭಿವೃದ್ಧಿ ಸಚಿವರಿಗೆ ಮಾತಾಡಿದ್ದೇನೆ. ತನಿಖೆ ಆಗಬೇಕು ಎಂದಿದ್ದೇನೆ. ತನಿಖೆ ಮಾಡೋದಾಗಿ ಅವರು ಹೇಳಿದ್ದಾರೆ

ಸಿಎಂಗೂ ನಾನು ಮನವಿ ಮಾಡಿಕೊಟ್ಟಿದ್ದೇನೆ. ಸತ್ಯಾಸತ್ಯತೆ ಬಗ್ಗೆ ತನಿಖೆ ಆಗಬೇಕು ಎಂದು ಹೇಳಿದರು.

ಇಂಜಿನಿಯರ್ ತಪ್ಪಿದೆಯಾ ಶಾಸಕರ ಅನುಯಾಯಿಗಳು ಹೇಳಿದ್ದು ಸತ್ಯ, ಸುಳ್ಳಾ ಗೊತ್ತಾಗಬೇಕು. ನಮ್ಮ ಇಂಜಿನಿಯರ್‌ಗಳು ಈರೀತಿ ಯಾರೂ ಮಾಡಿಲ್ಲ. ಯಾವುದೇ ಪಕ್ಷ ಇರಲಿ, ಕರಾವಳಿ ಭಾಗದಲ್ಲಿ ಹೀಗಿಲ್ಲ. ಹೀಗಾಗಿ ನಾನು ಯಾವುದೇ ಹೆಚ್ಚಿನ ಸ್ಪಷ್ಟನೆ ಕೊಡಲ್ಲ ಎಂದರು.

## ದಲಿತರು–ಶೋಷಿತರನ್ನು ಕಾಂಗ್ರೆಸ್ ವೋಟ್‌ಬ್ಯಾಂಕ್‌ನಂತೆ ಬಳಸಿಕೊಳ್ಳುತ್ತಿದೆ: ಬಿ.ವೈ.ವಿ. ವಾಗ್ದಾಳಿ

**ಬೆಂಗಳೂರು, ಸೆ.3:** ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯ, ರೈತರು ಮತ್ತು ಶೋಷಿತ ಸಮುದಾಯಗಳ ಸಮಸ್ಯೆಗಳ ಕುರಿತು ಜನಜಾಗೃತಿ ಮೂಡಿಸುವ ಉದ್ದೇಶದಿಂದ ಬಿಜೆಪಿ ಹಮ್ಮಿಕೊಂಡಿರುವ ಬಳ್ಳಾರಿ ಚಲೋ ಪಾದಯಾತ್ರೆಯ ಮೂರನೇ ದಿನದ ಕಾರ್ಯಕ್ರಮ ಗುರುವಾರ ಸಿಂಧನೂರಿನಲ್ಲಿ ಮುಕ್ತಾಯಗೊಂಡಿತು. ಗುಡದೂರಿನಿಂದ ಆರಂಭವಾದ ಪಾದಯಾತ್ರೆ ಸುಮಾರು 20 ಕಿ.ಮೀ. ಕ್ರಮಿಸಿ ಸಿಂಧನೂರು ತಲುಪಿತು.

ಗುಡದೂರಿನಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಹಸಿರು ಶಾಲು ಹಾಗೂ ಪಂಚೆ ತೊಟ್ಟು ಎತ್ತಿನಗಾಡಿಯಲ್ಲಿ ತೆರಳಿ, ನೇಗಿಲು ಹೊತ್ತು ಬಾರ್‌ಕೋಲು ಬೀಸುವ ಮೂಲಕ ಪಾದಯಾತ್ರೆಗೆ ಚಾಲನೆ ನೀಡಿದರು. ರೈತರ ಬದುಕು ಮತ್ತು ಕೃಷಿಯ ಸಂಕೇತಗಳೊಂದಿಗೆ ಆರಂಭವಾದ ಪಾದಯಾತ್ರೆಗೆ ಮಾರ್ಗದುದ್ದಕ್ಕೂ ಕಾರ್ಯಕರ್ತರು ಹಾಗೂ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಯಿತು. ಪಾದಯಾತ್ರೆ ಆರಂಭಕ್ಕೂ ಮುನ್ನ ಮಾಧ್ಯಮಗಳೊಂದಿಗೆ ಮಾತನಾಡಿದ ವಿಜಯೇಂದ್ರ, ಕಾಂಗ್ರೆಸ್ ಸರ್ಕಾರದ ವೈಫಲ್ಯ, ಭ್ರಷ್ಟಾಚಾರ ಹಾಗೂ ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ಜನರ ಮುಂದಿಡಲು ಬಿಜೆಪಿ ಈ ಹೋರಾಟ ನಡೆಸುತ್ತಿದೆ ಎಂದರು.

**ಎಸ್ಸಿಪಿ–ಟಿಎಸ್‌ಪಿ ಹಣದ ಬಳಕೆಗೆ ಆಕ್ಷೇಪ**

ದಲಿತರು ಮತ್ತು ಶೋಷಿತ ಸಮುದಾಯಗಳನ್ನು ಕಾಂಗ್ರೆಸ್ ಓಟ್ ಬ್ಯಾಂಕಾಗಿ ಬಳಸಿಕೊಳ್ಳುತ್ತಿದೆ ಎಂದು ವಿಜಯೇಂದ್ರ ಆರೋಪಿಸಿದರು. ಎಸ್‌ಸಿಪಿ–ಟಿಎಸ್‌ಪಿ ಯೋಜನೆಗಳಿಗೆ ಮೀಸಲಾದ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಲಾಗುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ ಅವರು, ಈ ಹಣವನ್ನು ದಲಿತರ ಅಭಿವೃದ್ಧಿಗೆ ಸಮರ್ಪಕವಾಗಿ ಬಳಸಬೇಕು ಎಂದು ಆಗ್ರಹಿಸಿದರು.

**ರೈತರ ಆತ್ಮಹತ್ಯೆ ಕುರಿತು ಸರ್ಕಾರದ ವಿರುದ್ಧ ವಾಗ್ದಾಳಿ**

ರಾಜ್ಯದಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗುತ್ತಿದ್ದರೂ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುತ್ತಿಲ್ಲ ಎಂದು ವಿಜಯೇಂದ್ರ ಟೀಕಿಸಿದರು. ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ 3,655 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, ಕಲ್ಯಾಣ ಕರ್ನಾಟಕದಲ್ಲೇ 937 ಪ್ರಕರಣಗಳು ನಡೆದಿವೆ ಎಂದು ಅವರು ಹೇಳಿದರು. ಕಲಬುರಗಿ ಜಿಲ್ಲೆಯಲ್ಲಿ 295, ರಾಯಚೂರಿನಲ್ಲಿ 169, ಬೀದರ್‌ನಲ್ಲಿ 220 ಹಾಗೂ ಕೊಪ್ಪಳದಲ್ಲಿ 80ಕ್ಕೂ ಹೆಚ್ಚು ರೈತರ ಆತ್ಮಹತ್ಯೆ ಪ್ರಕರಣಗಳು ನಡೆದಿವೆ ಎಂದು ಅಂಕಿ–ಅಂಶಗಳನ್ನು ಉಲ್ಲೇಖಿಸಿದರು.ಪ್ರಿಯಾಂಕ್ ಖರ್ಗೆ ಅವರೇ, ಕಲಬುರಗಿ ಜಿಲ್ಲೆಯಲ್ಲೇ 295 ರೈತರು ಆತ್ಮಹತ್ಯೆ ಮಾಡಿಕೊಂಡಿರುವ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ. ಅನ್ನದಾತನ ಸಂಕಷ್ಟಕ್ಕೆ ಸರ್ಕಾರ ಸ್ಪಂದಿಸಬೇಕು ಎಂದು ವಿಜಯೇಂದ್ರ ಹೇಳಿದರು.

**5 ಲಕ್ಷ ರೂ.ವರೆಗಿನ ಬೆಳೆಸಾಲ ಮನ್ನಾಕ್ಕೆ ಆಗ್ರಹ**

ರಾಜ್ಯದ 190ಕ್ಕೂ ಹೆಚ್ಚು ತಾಲೂಕುಗಳಲ್ಲಿ ಬರದ ಪರಿಸ್ಥಿತಿ ನಿರ್ಮಾಣವಾಗಿರುವ ಹಿನ್ನೆಲೆಯಲ್ಲಿ ಬರಪೀಡಿತ ರೈತರ 5 ಲಕ್ಷದವರೆಗೆ ಬೆಳೆಸಾಲ ಮನ್ನಾ ಮಾಡಬೇಕು ಎಂದು ವಿಜಯೇಂದ್ರ ಆಗ್ರಹಿಸಿದರು.

**ಪಾದಯಾತ್ರೆ ತಡೆಯುವ ಬದಲು ರೈತರ ಸಮಸ್ಯೆ ಪರಿಹರಿಸಿ**

ಪಾದಯಾತ್ರೆಗೆ ಕಪ್ಪು ಬಾವುಟ ಪ್ರದರ್ಶಿಸುವಂತೆ ಕಾಂಗ್ರೆಸ್ ಮುಖಂಡರು ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ವಿಜಯೇಂದ್ರ ವಿರೋಧ ವ್ಯಕ್ತಪಡಿಸುವ ಬದಲು ರೈತರ ಸಮಸ್ಯೆಗಳಿಗೆ ಸರ್ಕಾರ ಪರಿಹಾರ ನೀಡಬೇಕು ಎಂದು ಹೇಳಿದರು. ಕಪ್ಪು ಬಾವುಟ ತೋರಿಸುವುದಕ್ಕಿಂತ ಮೊದಲು ರೈತರ ಕಣ್ಣೀರು ಒರೆಸುವ ಕೆಲಸ ಮಾಡಿ. ಎಂದರು. 3ನೇ ದಿನದ ಪಾದಯಾತ್ರೆಯಲ್ಲಿ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ್, ಶಾಸಕರಾದ ಸಿ.ಸಿ.ಪಾಟೀಲ್, ಸುನಿಲ್ ಕುಮಾರ್, ರವಿಕುಮಾರ್, ಹರೀಶ್ ಪೂಂಜ, ಶೈಲೇಂದ್ರ ಬೆಲ್ದಾಳೆ, ಮಾಜಿ ಸಚಿವ ಬಿ. ಶ್ರೀರಾಮುಲು, ಸ್ಥಳೀಯ ಮುಖಂಡರಾದ ಕರಿಯಪ್ಪ ರೈತ ಮೋರ್ಚಾ ಅಧ್ಯಕ್ಷ ನಡಹಳ್ಳಿ ಸೇರಿದಂತೆ ಮಾಜಿ ಶಾಸಕರು, ಸ್ಥಳೀಯ ಮುಖಂಡರು, ಕಾರ್ಯಕರ್ತರು ಹಾಗೂ ರೈತರು ಭಾಗವಹಿಸಿದ್ದರು. ಗುಡದೂರಿನಲ್ಲಿ ನೇಗಿಲು ಹೊತ್ತು ಆರಂಭವಾದ ಮೂರನೇ ದಿನದ ಪಾದಯಾತ್ರೆ, ರೈತರೊಂದಿಗೆ ಹೆಜ್ಜೆ ಹಾಕಿ, ಸಿಂಧನೂರಿನಲ್ಲಿ ಅಂಬೇಡ್ಕರ್, ಕನಕದಾಸರಿಗೆ ಗೌರವ ಸಲ್ಲಿಸಿ ಸಾರ್ವಜನಿಕ ಸಮಾರಂಭದೊಂದಿಗೆ ಅಂತ್ಯಗೊಂಡಿತು.

### ಹೋರಾಟಕ್ಕೆ ಹೆದರಿ ವಿಶೇಷ ಅಧಿವೇಶನಕ್ಕೆ ಕರೆ

**ಬೆಂಗಳೂರು ಆ.3:** ನಮ್ಮ ಹೋರಾಟಕ್ಕೆ ಬೆಚ್ಚಿಬಿದ್ದ ಮುಖ್ಯಮಂತ್ರಿಗಳು ಹೋರಾಟಕ್ಕೆ ಮಣಿದು ವಿಧಾನಮಂಡಲದ ವಿಶೇಷ ಅಧಿವೇಶನ ಕರೆದಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ. 3ನೇ ದಿನದ ಬಳ್ಳಾರಿ ಚಲೋ ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಅವರು ಗುರುವಾರ ಮಾಧ್ಯಮಗಳ ಜೊತೆ ಮಾತನಾಡಿದರು. ರಾಜ್ಯದ ರೈತರ ಸಮಸ್ಯೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಬೇಕು. 5 ಲಕ್ಷದವರೆಗಿನ ಕೃಷಿ ಸಾಲ ಮನ್ನಾ ಮಾಡುವಂತೆ ಆಗ್ರಹಿಸಿದ್ದೆ. ಅದಕ್ಕಾಗಿ ವಿಶೇಷ ಅಧಿವೇಶನ ಕರೆಯುವಂತೆ ಒತ್ತಾಯಿಸಿದ್ದೆ ಎಂದು ತಿಳಿಸಿದರು.




ಅಧಿವೇಶನದಲ್ಲಿ ಸಮಗ್ರ ಚರ್ಚೆ ಮಾಡಬೇಕು. ಚರ್ಚೆ ಮಾಡಿ ಕೇವಲ ಕೇಂದ್ರಕ್ಕೆ ಪತ್ರ ಬರೆಯುವುದಲ್ಲ. ಪರಿಹಾರವನ್ನೂ ಸರಕಾರ ಕೊಡಬೇಕು ಎಂದು ಒತ್ತಾಯಿಸಿದರು. ಜಮೀನು ಹೊಡೆದುಕೊಳ್ಳಲು ಹೊರಟಿದ್ದರು. ಬಿಜೆಪಿ ಹೋರಾಟಕ್ಕೆ ಮಣಿದು ಆ ಮಸೂದೆಯನ್ನು ಹಿಂದಕ್ಕೆ ಪಡೆದಿದ್ದಾರೆ ಎಂದು ಹೇಳಿದರು.

## ಪಾದಯಾತ್ರೆ ಮಧ್ಯೆ ರೈತ ಮಹಿಳೆಯರ ಅಕ್ಕರೆಯ ಸತ್ಕಾರ



ಪಾದಯಾತ್ರೆಯಲ್ಲಿ ಕುನ್ನಟಗಿ ಗ್ರಾಮದ ಮೂಲಕ ನಾವು ನಡೆಯುತ್ತಿದ್ದಾಗ, ಊಟದ ಸಮಯವಾದದ್ದರಿಂದ ಅಲ್ಲಿನ ರೈತ ಮಹಿಳೆಯರು ಬಹಳ ಪ್ರೀತಿಯಿಂದ ಕರೆದು, ತಾವು ತಂದಿದ್ದ ಬುತ್ತಿಯನ್ನು ತಮ್ಮ ಕೈಯಾರೆ ನಮಗೆ ಉಣಬಡಿಸಿದರು. ರೈತರೊಂದಿಗೆ, ಅವರ ಹೊಲದಲ್ಲಿ ಅಕ್ಕರೆಯಿಂದ ನೀಡಿದ ಅವರ ಮನೆಯೂಟದ ಸವಿಯನ್ನು, ಆ ಸಂತೃಪ್ತಿಯನ್ನು ವರ್ಣಿಸಲು ಸಾಧ್ಯವಿಲ್ಲ. ಮಣ್ಣನ್ನೇ ನಂಬಿ ಸರಳವಾಗಿ ಬದುಕುವ ರೈತರ ಮತ್ತು ತಾಯಂದಿರ ಅಪ್ಯಾಯತೆ ಮತ್ತು ವಾತ್ಸಲ್ಯ ದಣಿವನ್ನು ದೂರ ಮಾಡಿದ್ದಷ್ಟೇ ಅಲ್ಲ, ಹೊಸ ಚೈತನ್ಯ ತುಂಬಿದೆ. ನಮ್ಮ ರೈತ ತಾಯಂದಿರ ಋಣ ತೀರಿಸಲು, ಅವರ ನೆಮ್ಮದಿಗಾಗಿ, ಅನ್ನದಾತರ ಹಕ್ಕಿಗಾಗಿ ಇನ್ನಷ್ಟು ಬದ್ಧತೆಯಿಂದ ನಮ್ಮ ಹೋರಾಟ ಮುಂದುವರಿಯಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹೇಳಿದ್ದಾರೆ.

## ಕಾವೇರಿ ಜಲಾನಯನ ಪ್ರಕರಣ: ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯದ ಪರ ವಕಾಲತ್ತು ವಹಿಸಲು ಕಪಿಲ್ ಸಿಬಲ್‌ಗೆ ಮನವಿ



**ನವದೆಹಲಿ, ಸೆ.3:** ದೆಹಲಿಯ ಸುಪ್ರಿಂ ಕೋರ್ಟ್ ನ್ಯಾಯಾಲಯದ ಆವರಣದಲ್ಲಿ, ಆದಿಚುಂಚನಗಿರಿ ಮಠದ ಜಗದ್ಗುರು ಡಾ.ನಿರ್ಮಲಾನಂದ ನಾಥ ಮಹಾಸ್ವಾಮೀಜಿ ಮಾರ್ಗದರ್ಶನ ಹಾಗೂ ಸುಪ್ರಿಂ ಕೋರ್ಟಿನ ನಿವೃತ್ತ ನ್ಯಾಯಮೂರ್ತಿ ಎನ್.ಗೋಪಾಲಗೌಡರ ಮಾರ್ಗದರ್ಶನದಲ್ಲಿ, ಸುಪ್ರಿಂ ಕೋರ್ಟಿನ ಹಿರಿಯ ನ್ಯಾಯವಾದಿ ಕಪಿಲ್ ಸಿಬಲ್ ಅವರನ್ನು, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ನಿಶ್ಚಲಾನಂದ ಸ್ವಾಮೀಜಿ ಹಾಗೂ ಕಾವೇರಿ ನದಿ ನೀರು ರಕ್ಷಣಾ ಸಮಿತಿಯ ರಾಜ್ಯಾಧ್ಯಕ್ಷ ಹಾಗೂ ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್‌ನ ಅಧ್ಯಕ್ಷ ಎಚ್.ಕೆ.ರಾಮು ನೇತೃತ್ವದಲ್ಲಿ ಭೇಟಿ ಮಾಡಿ, ಸುಪ್ರಿಂ ಕೋರ್ಟ್‌ನಲ್ಲಿ ರಿಟ್ ಅರ್ಜಿ ಮನವಿಯ ಬಗ್ಗೆ ಹಿರಿಯ ನ್ಯಾಯವಾದಿ ಕಪಿಲ್ ಸಿಬಲ್ ಅವರಿಗೆ ವಹಿಸಿ, CWC ಹಾಗೂ ಸುಪ್ರೀಂ ಕೋರ್ಟ್‌ನ 2018ರ ಆದೇಶವನ್ನು ಮರುಪರಿಶೀಲಿಸಿ ನಮ್ಮ ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ಹಾಗೂ ಮಳೆ ಇಲ್ಲದ ಸಂದರ್ಭದಲ್ಲಿ ವರ್ಷಪೂರ್ತಿ, ಮಾಹೆವಾರು ನೀರು ಇರಲಿ, ಇಲ್ಲದಿದ್ದರೂ ಹಾಗೂ ಮಳೆ ಇರಲಿ, ಇಲ್ಲದಿರಲಿ ಇಂತಿಷ್ಟು ಪ್ರಮಾಣದಲ್ಲಿ ತಮಿಳುನಾಡಿಗೆ ಹರಿಸಲು ಮಾಡಿರುವ ಆದೇಶವನ್ನು ಸರಿಪಡಿಸಿ ಕೊಡಲು ಹಾಗೂ ಬೆಂಗಳೂರಿನ ನಗರ ಮತ್ತು 7 ಜಿಲ್ಲೆಗಳಿಗೆ ಕುಡಿಯುವ ನೀರಿನ ಸೌಲಭ್ಯ ಹಾಗೂ ಜನ–ಜಾನುವಾರುಗಳಿಗೆ ನೀರು ಸರಬರಾಜಿಗೆ 70 ಟಿಎಂಸಿ ನೀರನ್ನು ಹಂಚಿಕೆಯಲ್ಲಿ CWC ಮತ್ತು ಸುಪ್ರಿಂ ಕೋರ್ಟ್ ಆದೇಶದಲ್ಲಿ ಹೆಚ್ಚುವರಿಯಾಗಿ ಹಂಚಿಕೆ ಮಾಡಿಕೊಡಬೇಕೆಂದು ಕೋರುತ್ತಾ, ಮೇಕೆದಾಟು ಯೋಜನೆಯನ್ನು ಜಾರಿಗೊಳಿಸಬೇಕೆಂದು ಮೇಲ್ಮನವಿ ಮಾಡಿದ್ದನ್ನು ಕೋರ್ಟಿನ ಮುಂದೆ ವಾದ ಮಂಡಿಸಿ ನಮ್ಮ ಪರ ವಕಾಲತ್ತನ್ನು ವಹಿಸುವಂತೆ ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ಸುಪ್ರಿಂ ಕೋರ್ಟಿನ ನ್ಯಾಯವಾದಿ ಬ್ರಿಜೇಶ್ ಕಾಳಪ್ಪ, ಗುರುದತ್ ಅಂಕೋಲ್ಕರ್, ವಿಧಾನ ಪರಿಷತ್ತಿನ ಮಾಜಿ ಸದಸ್ಯ ಅ.ದೇವೇಗೌಡ, ಲಗ್ಗೆರೆ ನಗರಸಭೆಯ ಮಾಜಿ ಅಧ್ಯಕ್ಷ ಅಂದಾನಪ್ಪ, ದೆಹಲಿ ಕನ್ನಡ ಸಂಘದ ಮಾಜಿ ಅಧ್ಯಕ್ಷ ಸಿ.ಎಂ.ನಾಗರಾಜು ಹಾಗೂ ಕರ್ನಾಟಕ ದವರೇ ಆದ ವಕೀಲ ಅನಂತನಾರಾಯಣ ಭಟ್ ಹಾಜರಿದ್ದರು.

## ವೈಯಕ್ತಿಕ ದ್ವೇಷ ಬಿಟ್ಟು ಕೇಂದ್ರ ಸಚಿವರಾಗಿ ಕೆಲಸ ಮಾಡಿ ಎಚ್.ಡಿ.ಕುಮಾರಸ್ವಾಮಿಗೆ ಚಲುವರಾಯಸ್ವಾಮಿ ತಾಕೀತು

**ಬೆಂಗಳೂರು, ಸೆ.3:** ಕೇಂದ್ರ ಸಚಿವರಾಗಿ ಎಚ್. ಡಿ.ಕುಮಾರಸ್ವಾಮಿ ದೆಹಲಿಯಲ್ಲಿ ಕೆಲಸ ಮಾಡುವುದು ಬಿಟ್ಟು ಪ್ರತಿದಿನ ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿ ತಮ್ಮ ಹೊಟ್ಟೆಕಿಚ್ಚನ್ನು ತೋರಿಸಿಕೊಳ್ಳುತ್ತಿರುವುದು ಸರಿಯಲ್ಲ ಜಲ ಸಂಪನ್ಮೂಲ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದ್ದಾರೆ.

ದೆಹಲಿಯಲ್ಲಿ ಕುಳಿತು ಕೆಲಸ ಮಾಡುವುದು ಬಿಟ್ಟು ವೈಯಕ್ತಿಕ ದ್ವೇಷ ಸಾಧಿಸುತ್ತಿದ್ದಾರೆ. ದೆಹಲಿಗೆ ಹೋಗಿ ರಾಜ್ಯದ ಅಭಿವೃದ್ಧಿಗೆ ಪೂರಕವಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಮಾಜಿ ಮುಖ್ಯಮಂತ್ರಿಯಾಗಿ ಕುಮಾರಸ್ವಾಮಿಯವರು ಬಾಯಿಗೆ ಬಂದಂತೆ ಮಾತನಾಡುವ ಬದಲು ಜವಾಬ್ದಾರಿಯುತವಾಗಿ ನಡೆದುಕೊಳ್ಳಲಿ ಎಂದು ಕಿವಿ ಮಾತು ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಲುವರಾಯಸ್ವಾಮಿ ಕಾವೇರಿ ನೀರನ್ನು ತಮಿಳುನಾಡಿಗೆ ಬಿಡಲು ದೆಹಲಿಗೆ ಹೋಗಿದ್ದಾರೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ. ಇಂತಹ ಹದ್ದುಮೀರಿದ ಮಾತುಗಳಿಗೆ ಉತ್ತರ ನೀಡುವುದು ಬೇಡ ಎಂದುಕೊಂಡಿದ್ದೆ. ಆದರೆ ಕೆಲವೊಮ್ಮೆ ಪ್ರತಿಕ್ರಿಯಿಸಬೇಕಾಗುತ್ತದೆ. ದೆಹಲಿಗೆ ಯಾರಾದರೂ ನೀರು ಬಿಡಲು ಹೋಗುತ್ತಾರೆಯೇ ಎಂದು ಪ್ರಶ್ನಿಸಿದರು. ಎಲ್ಲಿ ಯಾವ ವಿಚಾರವನ್ನು



ಹೇಗೆ ಮಾತನಾಡಬೇಕು ಎಂಬುದನ್ನು ಮರೆತು ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ದೆಹಲಿಯಲ್ಲಿ ಜಲಶಕ್ತಿ ಸಚಿವರು, ಎಲ್ಲಾ ರಾಜ್ಯಗಳ ನೀರಾವರಿ ಸಚಿವರುಗಳನ್ನು ಕರೆದು ಚರ್ಚೆ ಮಾಡಿದ್ದಾರೆ. ಕುಮಾರಸ್ವಾಮಿಯವರು ಪ್ರಮುಖ ಖಾತೆಯ ಕೇಂದ್ರ ಸಚಿವರಾಗಿ ದೆಹಲಿಯಲ್ಲಿ ಉತ್ತಮ ಕೆಲಸ ಮಾಡುವ ಬದಲು ಬೆಂಗಳೂರಿಗೆ ಬಂದು ಪತ್ರಿಕಾಗೋಷ್ಠಿ ಮಾಡುತ್ತಿದ್ದಾರೆ.

ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿರುವುದಕ್ಕೆ ಕುಮಾರಸ್ವಾಮಿಯವರಿಗೆ ಹೊಟ್ಟೆನೋವು ಬಂದಿದ್ದು ಸಹಿಸಿಕೊಳ್ಳಲಾಗುತ್ತಿಲ್ಲ, ಇದಕ್ಕೆ ಮದ್ದಿಲ್ಲ ಎಂದು ಹೇಳಿದರು.

ಹಿಂದೆ ದೇವೇಗೌಡರು ಮತ್ತು ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗಲೂ ತಮಿಳುನಾಡಿಗೆ ಕಾವೇರಿ ನೀರು ಬಿಟ್ಟಿದ್ದಾರೆ. ನಾವು ರೈತರ ರಕ್ಷಣೆಗೆ ಬದ್ಧರಾಗಿದ್ದೇವೆ. ಸುಪ್ರೀಂಕೋರ್ಟ್ ಸಿಡಬ್ಲ್ಯೂಆರ್‌ಸಿ, ಸಿಡಬ್ಲ್ಯೂಎಂಎ ಮುಂದೆ ರಾಜ್ಯ ಸರ್ಕಾರ ಸಮರ್ಥ ವಾದ ಮಂಡಿಸಿದೆ ಎಂದರು.

ತಮಿಳುನಾಡು 22 ಸಾವಿರ ಕ್ಯೂಸೆಕ್ ನೀರು ಹರಿಸುವಂತೆ ಕೇಳಿದಾಗ ರಾಜ್ಯದ ಪ್ರಬಲ ವಾದಗಿಂದಾಗಿಯೇ ಸಮಿತಿಗಳು ಕಡಿಮೆ ನೀರು ಬಿಡುವಂತೆ ನಿರ್ಧರಿಸಲು ಸಾಧ್ಯವಾಗಿದೆ. ಇದೇ 8ರಂದು ನಡೆಯುವ ಮತ್ತೊಂದು ವಿಚಾರಣೆಯಲ್ಲಿ ನೀರನ್ನು ಸಂಪೂರ್ಣ ನಿಲ್ಲಿಸಲು ಆದೇಶಿಸುವಂತೆ ನಾವು ಒತ್ತಡ ಹಾಕುತ್ತಿದ್ದೇವೆ ಎಂದರು.ಕೆಪಿಎಸ್‌ಸಿ ಅಕ್ರಮಗಳ ತನಿಖೆಗೆ ನಾವ್ಯಾರೂ ಅಡ್ಡಿಪಡಿಸಿಲ್ಲ. ಆದರೆ ಕೆಪಿಎಸ್‌ಸಿಗೆ ಸಾಹುಕಾರ್ ಶಿವಶಂಕರಪ್ಪ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದು ಯಾರು ಎಂಬುದಕ್ಕೆ ಮೊದಲು ಉತ್ತರ ನೀಡಲಿ. ಬಿಜೆಪಿಯವರು ಶಿವಶಂಕರಪ್ಪ ಅವರನ್ನು ಅಧ್ಯಕ್ಷರನ್ನಾಗಿ ಕೂರಿಸಿದ್ದರು. ಅವರಿಂದಾದ ಭ್ರಷ್ಟಾಚಾರದ ಹೊಣೆಗಾರಿಕೆಯನ್ನು ಬಿಜೆಪಿಯವರೇ ಹೊತ್ತುಕೊಳ್ಳಬೇಕು ಎಂದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

ಸೆಪ್ಟೆಂಬರ್ 4 2026 ಶುಕ್ರವಾರ

## ಒಳಪುಟಗಳಲ್ಲಿ

ನಟ ದುನಿಯಾ ವಿಜಯ್-ನಾಗರತ್ನ ದಾಂಪತ್ಯ ಜೀವನಕ್ಕೆ ತೆರೆ: ಎರಡು ಕೋಟಿ ಜೀವನಾಂಶ - ಪು.5

# ಮೋದಿ ಸಂಪುಟ ಪುನಾರಚನೆಗೆ ವೇದಿಕೆ ಸಿದ್ಧ

## ಯುವ ಮುಖಗಳು, ಮಿತ್ರಪಕ್ಷಗಳಿಗೆ ಆದ್ಯತೆ, ಹಲವು ಸಚಿವರ ಖಾತೆ ಬದಲಾವಣೆಯೂ ಖಚಿತ

**ನವದೆಹಲಿ, ಸೆ.3: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟದಲ್ಲಿ ಮತ್ತೊಂದು ಮಹತ್ವದ ಪುನರ್‌ರಚನೆ ನಡೆಯುವ ಸಾಧ್ಯತೆ ಕುರಿತು ರಾಜಕೀಯ ವಲಯದಲ್ಲಿ ಚರ್ಚೆ ತೀವ್ರಗೊಂಡಿದೆ. ಮುಂಬರುವ ವಿಧಾನಸಭಾ ಚುನಾವಣೆಗಳು, ಸಚಿವರ ಕಾರ್ಯಕ್ಷಮತೆ, ಪ್ರಾದೇಶಿಕ ಸಮತೋಲನ ಹಾಗೂ ಮಿತ್ರಪಕ್ಷಗಳ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು ಸಂಪುಟಕ್ಕೆ ಹೊಸ ಮುಖಗಳನ್ನು ಸೇರ್ಪಡೆ ಮಾಡುವ ಸಾಧ್ಯತೆ ಇದೆ.**



ಪ್ರಸ್ತುತ ಕೇಂದ್ರ ಸಚಿವ ಸಂಪುಟದಲ್ಲಿ ಸುಮಾರು 69 ಸಚಿವರಿದ್ದಾರೆ. ಗರಿಷ್ಠ 81 ಸಚಿವರಿಗೆ ಅವಕಾಶವಿದೆ. ಹೀಗಾಗಿ ಹೆಚ್ಚುವರಿ ಸಚಿವರನ್ನು ಸೇರ್ಪಡೆಗೊಳಿಸಲು ಸರ್ಕಾರಕ್ಕೆ ಅವಕಾಶವಿದೆ. ಆದರೆ ಕೇವಲ ಖಾಲಿಸ್ಥಾನಗಳನ್ನು ತುಂಬುವುದಕ್ಕಿಂತ ರಾಜಕೀಯ ಮತ್ತು ಆಡಳಿತಾತ್ಮಕ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಪುನರ್‌ರಚನೆ ಮಾಡುವ ಸಾಧ್ಯತೆಯೇ ಹೆಚ್ಚಾಗಿದೆ.

ಇತ್ತೀಚೆಗೆ ಬಿಜೆಪಿ ತನ್ನ ರಾಷ್ಟ್ರೀಯ ಸಂಘಟನೆಯಲ್ಲಿ ದೊಡ್ಡ ಮಟ್ಟದ ಬದಲಾವಣೆ ಮಾಡಿದೆ. ನಿತಿನ್ ನಬೀನ್ ನೇತೃತ್ವದ ಹೊಸ ರಾಷ್ಟ್ರೀಯ ತಂಡದಲ್ಲಿ 65 ಮಂದಿ ಇದ್ದು, ಅದರಲ್ಲಿ 51 ಹೊಸಮುಖಗಳಿಗೆ ಅವಕಾಶ ನೀಡಲಾಗಿದೆ. ಹಿರಿಯ ನಾಯಕರಿಗೆ ವಿವಿಧ ಸಂಘಟನಾ ಜವಾಬ್ದಾರಿಗಳನ್ನು ನೀಡುವುದರ ಜತೆಗೆ ಯುವ ಮುಖಗಳು ಮತ್ತು ಹೊಸ ಪೀಳಿಗೆಯ ನಾಯಕರಿಗೆ ಆದ್ಯತೆ ನೀಡಲಾಗಿದೆ.

ಈ ಸಂಘಟನಾ ಪುನರ್‌ವಿನ್ಯಾಸದ ನಂತರ ಈಗ ಸರ್ಕಾರದ ತಂಡದಲ್ಲೂ ಇದೇ ರೀತಿಯ ಬದಲಾವಣೆ ಸಾಧ್ಯ ಎಂಬ ಚರ್ಚೆ ನಡೆಯುತ್ತಿದೆ. 2027ರ ವಿಧಾನಸಭಾ ಚುನಾವಣೆಗಳು ಹಾಗೂ 2029ರ ಲೋಕಸಭಾ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಸಂಘಟನೆ + ಸರ್ಕಾರ ಎರಡನ್ನೂ ಚುನಾವಣೆಗೆ ಸಜ್ಜುಗೊಳಿಸುವ ತಂತ್ರದ ಭಾಗವಾಗಿರಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.

ಸಂಪುಟ ಪುನರ್‌ರಚನೆಯಲ್ಲಿ ಪೀಳಿಗೆಯ ಬದಲಾವಣೆ ಪ್ರಮುಖ ಅಂಶವಾಗುವ ಸಾಧ್ಯತೆ ಇದೆ. 2024ರಲ್ಲಿ ಮೋದಿ 3.0 ಸರ್ಕಾರ ಅಧಿಕಾರಕ್ಕೆ ಬಂದಾಗ ಸಚಿವರ ಪೈಕಿ ಶೇ.65ಕ್ಕೂ ಹೆಚ್ಚು ಮಂದಿ 51ರಿಂದ 70 ವರ್ಷದೊಳಗಿನವರಾಗಿದ್ದರು. ಶೇ.24ರಷ್ಟು ಮಂದಿ 31–50ರ ವಯೋಮಾನದವರಾಗಿದ್ದರು. ಈಗ 70 ವರ್ಷ ಮೇಲ್ಪಟ್ಟ ಸಚಿವರೂ ಇದ್ದಾರೆ. ಹೀಗಾಗಿ ಅನುಭವ ಹೊಂದಿರುವ ಹಿರಿಯ ನಾಯಕರ ಜತೆಗೆ ಯುವ ಸಂಸದರಿಗೆ ಹೆಚ್ಚಿನ ಜವಾಬ್ದಾರಿ ನೀಡುವ ಚಿಂತನೆ ಇದೆ ಎನ್ನಲಾಗಿದೆ. ಇದು ಕೇವಲ ವಯಸ್ಸಿನ ಆಧಾರದ ಬದಲಾವಣೆ ಆಗದೆ, ಮುಂದಿನ ಒಂದು ದಶಕದ ಬಿಜೆಪಿ ನಾಯಕತ್ವವನ್ನು ರೂಪಿಸುವ ಪ್ರಯತ್ನವಾಗಿಯೂ ಕಾಣಬಹುದು.

### ಮಹಿಳೆಯರಿಗೆ ಪ್ರಾತಿನಿಧ್ಯ ಹೆಚ್ಚಳ

ಸಂಪುಟ ಪುನರ್‌ರಚನೆಯಲ್ಲಿ ಮಹಿಳಾ ಪ್ರಾತಿನಿಧ್ಯವೂ ಮತ್ತೊಂದು ಪ್ರಮುಖ ಮಾನದಂಡವಾಗಬಹುದು. ಬಿಜೆಪಿ ತನ್ನ ಸಂಘಟನಾ ತಂಡದಲ್ಲಿ ಮಹಿಳೆಯರು, ಯುವಕರು ಹಾಗೂ ವಿವಿಧ ಸಾಮಾಜಿಕ ವರ್ಗಗಳಿಗೆ ಪ್ರಾತಿನಿಧ್ಯ ನೀಡುವ ಪ್ರಯತ್ನ ಮಾಡಿರುವ ಹಿನ್ನೆಲೆಯಲ್ಲಿ, ಸರ್ಕಾರದಲ್ಲೂ ಈ ಸಮತೋಲನವನ್ನು ಮತ್ತಷ್ಟು ಬಲಪಡಿಸುವ ನಿರೀಕ್ಷೆ ಇದೆ.

### ಮಿತ್ರಪಕ್ಷಗಳಿಗೂ ಹೆಚ್ಚುವರಿ ಸ್ಥಾನ

ಮೋದಿ 3.0 ಸರ್ಕಾರವು ಎನ್‌ಡಿಎ ಮೈತ್ರಿಕೂಟದ ಆಧಾರದ ಮೇಲೆ ಮುಂದುವರಿಯುತ್ತಿರುವುದರಿಂದ ಸಂಪುಟ ಪುನರ್‌ರಚನೆಯಲ್ಲಿ ಮಿತ್ರಪಕ್ಷಗಳ ಪಾತ್ರವೂ ಮಹತ್ವದ್ದಾಗಿದೆ. ವಿಶೇಷವಾಗಿ ಮಹಾರಾಷ್ಟ್ರ, ಪಂಜಾಬ್ ಸೇರಿದಂತೆ ಪ್ರಮುಖ ರಾಜ್ಯಗಳ ರಾಜಕೀಯ ಸಮೀಕರಣ ಗಮನದಲ್ಲಿರಬಹುದು.

ಮಹಾರಾಷ್ಟ್ರದಲ್ಲಿ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆಗೆ ಲೋಕಸಭೆಯಲ್ಲಿ 13 ಸಂಸದರು ಇರುವ ಹಿನ್ನೆಲೆಯಲ್ಲಿ ಹೆಚ್ಚುವರಿ ಸಚಿವ ಸ್ಥಾನಕ್ಕಾಗಿ ಬೇಡಿಕೆ ಬರುವ ಸಾಧ್ಯತೆ ಕುರಿತು ಚರ್ಚೆ ನಡೆದಿದೆ. ಶಿಂಧೆ ಪುತ್ರ ಶ್ರೀಕಾಂತ್ ಶಿಂಧೆ ಅವರ ಹೆಸರು ಸಚಿವ ಸ್ಥಾನಕ್ಕೆ ಸಂಬಂಧಿಸಿದ ಊಹಾಪೋಹಗಳಲ್ಲಿ ಕೇಳಿಬರುತ್ತಿದೆ. ಆದರೆ ಇದುವರೆಗೆ ಅಧಿಕೃತ ನಿರ್ಧಾರ ಪ್ರಕಟವಾಗಿಲ್ಲ.

ಇದೇ ವೇಳೆ ಬಿಹಾರದಲ್ಲಿ ಜೆಡಿಯು ಸೇರಿದಂತೆ ಎನ್‌ಡಿಎ ಮಿತ್ರಪಕ್ಷಗಳಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡುವ ಸಾಧ್ಯತೆಯೂ ಚರ್ಚೆಯಲ್ಲಿದೆ. ಮೇ ತಿಂಗಳ ವರದಿಗಳಲ್ಲಿಯೂ ಜೆಡಿಯು, ಟಿಡಿಪಿ, ಎನ್‌ಸಿಪಿ ಹಾಗೂ ಇತರ ಮಿತ್ರಪಕ್ಷಗಳಿಗೆ ಹೆಚ್ಚಿನ ಪ್ರಾತಿನಿಧ್ಯ ಸಿಗಬಹುದು ಎಂಬ ನಿರೀಕ್ಷೆ ವ್ಯಕ್ತವಾಗಿತ್ತು.

### ಒಂದಕ್ಕಿಂತ ಹೆಚ್ಚು ಖಾತೆ ಹೊಂದಿರುವ ಸಚಿವರ ಮೇಲೂ ಗಮನ

ಪ್ರಸ್ತುತ ಹಲವು ಹಿರಿಯ ಸಚಿವರು ಒಂದಕ್ಕಿಂತ ಹೆಚ್ಚು ಖಾತೆಗಳನ್ನು ನಿರ್ವಹಿಸುತ್ತಿದ್ದಾರೆ. ಅಮಿತ್ ಶಾ, ಜೆ.ಪಿ. ನಡ್ಡಾ, ಶಿವರಾಜ್ ಸಿಂಗ್ ಚೌಹಾಣ್, ಮನೋಹರ್ ಲಾಲ್, ಎಚ್.ಡಿ. ಕುಮಾರಸ್ವಾಮಿ, ಅಶ್ವಿನಿ ವೈಷ್ಣವ್, ಜ್ಯೋತಿರಾದಿತ್ಯ ಸಿಂಧಿಯಾ, ಕಿರಣ್ ರಿಜಿಜು ಮತ್ತು ಮನ್ಸುಖ್ ಮಾಂಡವಿಯಾ ಸೇರಿದಂತೆ ಹಲವು ಸಚಿವರ ಬಳಿ ಒಂದಕ್ಕಿಂತ ಹೆಚ್ಚು ಜವಾಬ್ದಾರಿಗಳಿವೆ. ಹೊಸ ಸಚಿವರನ್ನು ನೇಮಿಸುವ ಮೂಲಕ ಕೆಲವು ಸಚಿವರ ಮೇಲಿರುವ ಹೆಚ್ಚುವರಿ ಹೊರೆ ಕಡಿಮೆ ಮಾಡುವುದು ಹಾಗೂ ಪ್ರಮುಖ ಸಚಿವಾಲಯಗಳ ಕೆಲಸವನ್ನು ಹೆಚ್ಚು ಪರಿಣಾಮಕಾರಿಯಾಗಿ ಹಂಚಿಕೆ ಮಾಡುವುದು ಪುನರ್‌ರಚನೆಯ ಉದ್ದೇಶಗಳಲ್ಲೊಂದಾಗಬಹುದು.

### ಕೆಲವರಿಗೆ ಕೊಕ್ ಅಥವಾ ಖಾತೆ ಬದಲಾವಣೆ

ಸಂಪುಟ ಪುನರ್‌ರಚನೆಯ ಸಂದರ್ಭದಲ್ಲಿ ಕಾರ್ಯಕ್ಷಮತೆ ಕೂಡ ಪ್ರಮುಖ ಮಾನದಂಡವಾಗಬಹುದು. ಉತ್ತಮ ಪ್ರದರ್ಶನ ನೀಡದ ಸಚಿವರನ್ನು ಕೈಬಿಡುವುದು, ಕೆಲವರ ಖಾತೆ ಬದಲಿಸುವುದು ಅಥವಾ ಸಂಘಟನಾ ಜವಾಬ್ದಾರಿಗೆ ಕಳುಹಿಸುವ ಸಾಧ್ಯತೆಯ ಬಗ್ಗೆ ರಾಜಕೀಯ ವಲಯದಲ್ಲಿ ಚರ್ಚೆ ಇದೆ. ಅಶ್ವಿನಿ ವೈಷ್ಣವ್ ಪ್ರಮುಖ ಐದು ಸಚಿವರಲ್ಲಿ ಒಬ್ಬರಾಗಿ ಬಡ್ತಿ ಪಡೆಯಬಹುದು, ನಿತಿನ್ ಗಡ್ಕರಿ ಖಾತೆ ಬದಲಾಗಬಹುದು, ಪ್ರಹ್ಲಾದ್ ಜೋಶಿ ಅವರಿಂದ ಶಿಕ್ಷಣ ಖಾತೆ ಮರಳಿ ಪಡೆಯಬಹುದು ಎನ್ನಲಾಗುತ್ತಿದೆ. ರೈಲ್ವೆ ರಾಜ್ಯ ಸಚಿವ ರವನೀತ್ ಸಿಂಗ್ ಬಿಟ್ಟು ಅವರ ರಾಜ್ಯಸಭಾ ಅವಧಿ ಜೂನ್ 21ರಂದು ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಸಚಿವ ಸ್ಥಾನದಿಂದ ಹೊರಬಂದಿದ್ದಾರೆ. ಅಲ್ಪಸಂಖ್ಯಾತ ವ್ಯವಹಾರಗಳ ರಾಜ್ಯ ಸಚಿವ ಜಾರ್ಜ್ ಕುರಿಯನ್ ಅವರ ರಾಜ್ಯಸಭಾ ಅವಧಿಯೂ ಮುಕ್ತಾಯಗೊಂಡಿದ್ದು, ಮರುನಾಮನಿರ್ದೇಶನವಾಗದ ಹಿನ್ನೆಲೆಯಲ್ಲಿ ಅವರು ಸಚಿವ ಸಂಪುಟದಿಂದ ಹೊರಬಂದಿದ್ದಾರೆ. ಈ ಸ್ಥಾನಗಳಿಗೆ ಹೊಸ ಮುಖಗಳನ್ನು ತರುವ ಅವಕಾಶವೂ ಈಗ ಕೇಂದ್ರ ಸರ್ಕಾರದ ಮುಂದಿದೆ.

## ಮೂರು ದಿನವಲ್ಲ, ಏಳು ದಿನಗಳ ಅಧಿವೇಶನ ಅಗತ್ಯ



ಬೆಂಗಳೂರು, ಸೆ.3: ಬರಗಾಲಕ್ಕೆ ಪರಿಹಾರ, ನೈಸ್ ಟೋಲ್, ಗೃಹಲಕ್ಷ್ಮಿ ಹಣ ಬಾಕಿ, ಕಸ್ತೂರಿ ರಂಗನ್ ವರದಿ ಮೊದಲಾದ ವಿಷಯಗಳು ಚರ್ಚೆಯಾಗಬೇಕಿದೆ. ಆದ್ದರಿಂದ ಮೂರು ದಿನಗಳ ಬದಲು ಏಳು ದಿನಗಳ ಅಧಿವೇಶನ ನಡೆಸಬೇಕು. ಈ ಎಲ್ಲ ವಿಷಯಗಳ ಬಗ್ಗೆ ಸುದೀರ್ಘವಾದ ಚರ್ಚೆ ಮಾಡಬೇಕು ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಆಗ್ರಹಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಉದ್ಯಾನಗಳಲ್ಲಿ ಶೇ.5 ರಷ್ಟು ಭೂಮಿಯನ್ನು ಮೂಲಸೌಕರ್ಯಕ್ಕೆ ಬಳಸುವ ಮಸೂದೆ ಹಿಂಪಡೆದಿರುವುದು ಬಿಜೆಪಿಯ ಹೋರಾಟಕ್ಕೆ ಸಿಕ್ಕ ಮತ್ತೊಂದು ಜಯ. ಮುಂದೆಯೂ ಉದ್ಯಾನಗಳನ್ನು ಬಳಸುವುದಕ್ಕೆ ಬಿಜೆಪಿ ಅವಕಾಶ ನೀಡುವುದಿಲ್ಲ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ಪಾರ್ಕ್ ಉಳಿಸಿ, ಬೆಂಗಳೂರು ರಕ್ಷಿಸಿ ಎಂಬ ಅಭಿಯಾನ ಮಾಡುವುದಾಗಿ ಬಿಜೆಪಿ ಘೋಷಿಸಿತ್ತು. ಈಗ ಕಾಂಗ್ರೆಸ್ ಮಸೂದೆಯನ್ನು ಹಿಂಪಡೆದಿದೆ. ಈ ಮೂಲಕ, ಸಚಿವ ನಾಗೇಂದ್ರ ರಾಜೀನಾಮೆ ಸೇರಿ ಒಂದೇ ತಿಂಗಳಲ್ಲಿ ಬಿಜೆಪಿಗೆ ಎರಡು ಜಯ ಸಿಕ್ಕಂತಾಗಿದೆ. ಇದು ಶಾರ್ಟ್‌ಟರ್ಮ್ ಮುಖ್ಯಮಂತ್ರಿ ಮತ್ತು ಯೂಟರ್ನ್ ಸರ್ಕಾರ ಎಂದು ಟೀಕಿಸಿದರು.

# ಖರ್ಗೆ ಸಭೆ ಬಳಿಕ ಶುದ್ಧೀಕರಣ ವಿವಾದ: 24 ದಿನವಾದರೂ ಎಫ್‌ಐಆರ್ ಇಲ್ಲ; ನಡ್ಡಾಗೆ ಪತ್ರ ಬರೆದ ಖರ್ಗೆ

**ನವದೆಹಲಿ, ಸೆ.3:** ಉತ್ತರಾಖಂಡದ ಹಲ್ದ್ವಾನಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಹಾಗೂ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಸಾರ್ವಜನಿಕ ಸಭೆಯ ಬಳಿಕ ರಾಮಲೀಲಾ ಮೈದಾನದಲ್ಲಿ ನಡೆದ ಶುದ್ಧೀಕರಣದ ವಿಚಾರವಾಗಿ ರಾಜಕೀಯ ವಾಕ್ಸಮರ ಮುಂದುವರಿದಿದೆ. ಪ್ರಕರಣದಲ್ಲಿ ಇನ್ನೂ ಎಫ್‌ಐಆರ್ ದಾಖಲಾಗದಿರುವುದನ್ನು ಪ್ರಶ್ನಿಸಿರುವ ಖರ್ಗೆ, ಕೇಂದ್ರ ಸಚಿವ ಹಾಗೂ ರಾಜ್ಯಸಭೆಯ ಸದನದ ನಾಯಕ ಜೆ.ಪಿ. ನಡ್ಡಾ ಅವರಿಗೆ ಪತ್ರ ಬರೆದು ಕೂಡಲೇ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.



ಆಗಸ್ಟ್ 8ರಂದು ಹಲ್ದವಾನಿಯಲ್ಲಿ ಖರ್ಗೆ ಸಾರ್ವಜನಿಕ ಸಭೆ ನಡೆಸಿದ್ದರು. ಸಭೆ ನಡೆದ ರಾಮಲೀಲಾ ಮೈದಾನದಲ್ಲಿ ಬಳಿಕ ಕೆಲವರು ಶುದ್ಧೀಕರಣ ವಿಧಿ ನಡೆಸಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು. ಈ ಘಟನೆ ನಡೆದು 24 ದಿನಗಳಾದರೂ ಸಂಬಂಧಪಟ್ಟ ವ್ಯಕ್ತಿಗಳು ಹಾಗೂ ಸಂಘಟನೆಗಳ ವಿರುದ್ಧ ಎಫ್‌ಐಆರ್ ದಾಖಲಾಗಿಲ್ಲ ಎಂದು ಖರ್ಗೆ ಪತ್ರದಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಆಗಸ್ಟ್ 13ರಂದು ರಾಜ್ಯಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಗಿದ್ದ ಸಂದರ್ಭದಲ್ಲಿ ನಡ್ಡಾ ಅವರು ಘಟನೆ ಬಗ್ಗೆ ತನಿಖೆ ನಡೆಸುವುದಾಗಿ ಹಾಗೂ ಬಿಜೆಪಿ ಇಂತಹ ಚಟುವಟಿಕೆಗಳನ್ನು ಬೆಂಬಲಿಸುವುದಿಲ್ಲ ಎಂದು ಭರವಸೆ ನೀಡಿದ್ದರು. ಇದೇ ಭರವಸೆಯನ್ನು ಇದೀಗ ಖರ್ಗೆ ತಮ್ಮ ಪತ್ರದಲ್ಲಿ ನೆನಪಿಸಿದ್ದಾರೆ. ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್‌ಸಿಂಗ್ ಧಾಮಿ ಅವರಿಗೆ ನಿರ್ದೇಶನ ನೀಡಿ, ಶುದ್ಧೀಕರಣ ನಡೆಸಿದ ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಅವರು ನಡ್ಡಾ ಅವರನ್ನು ಆಗ್ರಹಿಸಿದ್ದಾರೆ.

ಈ ಪ್ರಕರಣ ಕೇವಲ ತಮ್ಮ ವೈಯಕ್ತಿಕ ವಿಚಾರ ಅಥವಾ ಕಾಂಗ್ರೆಸ್ ಅಧ್ಯಕ್ಷನಾಗಿ ತಮ್ಮ ಸ್ಥಾನಕ್ಕೆ ಸಂಬಂಧಿಸಿದ್ದಲ್ಲ ಎಂದು ಖರ್ಗೆ ಹೇಳಿದ್ದಾರೆ. ಪ್ರತಿನಿತ್ಯ ತಾರತಮ್ಯದ ವಾಸ್ತವವನ್ನು ಎದುರಿಸುತ್ತಿರುವ ಕೋಟ್ಯಂತರ ಜನರ ಭಾವನೆಗಳಿಗೆ ಇದು ಸಂಬಂಧಿಸಿದೆ ಎಂದು ಅವರು ಹೇಳಿದ್ದಾರೆ. ಇಂತಹ ಕೃತ್ಯ ಎಸಗುವವರಿಗೆ ಕಾನೂನಿನ ಮೂಲಕ ಪಾಠ ಕಲಿಸುವ ಅಗತ್ಯವಿದೆ ಎಂದು ಒತ್ತಿ ಹೇಳಿದ್ದಾರೆ.

ಖರ್ಗೆ ಅವರು ದಲಿತ ಸಮುದಾಯಕ್ಕೆ ಸೇರಿದ ನಾಯಕನಾಗಿರುವ ಹಿನ್ನೆಲೆಯಲ್ಲಿ ಈ ಘಟನೆ ಅವಮಾನಕಾರಿ ಎಂದು ಕಾಂಗ್ರೆಸ್ ಆರೋಪಿಸಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೂಡ ಈ ಶುದ್ಧೀಕರಣವನ್ನು ಅಸ್ಪೃಶ್ಯತೆಯೊಂದಿಗೆ ಹೋಲಿಸಿ, ಸಂಬಂಧಪಟ್ಟವರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಆಗ್ರಹಿಸಿದ್ದರು.

# ಸರಕಾರದ ಪರ ಮಾತನಾಡಲು ವಕ್ತಾರರ ನೇಮಕ: ರಾಜ್ಯ ಸಚಿವ ಸಂಪುಟ ತೀರ್ಮಾನ

ಬೆಂಗಳೂರು, ಸೆ.3: ರಾಜ್ಯ ಸರಕಾರದ ಪರ ಅಧಿಕೃತವಾಗಿ ಮಾತನಾಡಲು ಹಾಗೂ ಮಾಧ್ಯಮಗಳ ಪ್ರಶ್ನೆಗಳಿಗೆ ಉತ್ತರಿಸಲು ನೂತನ ವಕ್ತಾರರನ್ನು ನೇಮಕ ಮಾಡಲು ರಾಜ್ಯ ಸಚಿವ ಸಂಪುಟ ಮಹತ್ವದ ತೀರ್ಮಾನ ಕೈಗೊಂಡಿದೆ.

ವಿಧಾನಸೌಧದಲ್ಲಿ ಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಚಿವ ಸಂಪುಟದ ಬಳಿಕ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಸರಕಾರದ ಪರವಾಗಿ ಅಧಿಕೃತವಾಗಿ ಮಾತನಾಡಲು ಹಾಗೂ ಮಾಧ್ಯಮಗಳ ಪ್ರಶ್ನೆಗಳಿಗೆ ಉತ್ತರಿಸಲು ನನ್ನ ನೇತೃತ್ವದಲ್ಲಿ ಸಚಿವರಾದ ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ, ಸಂತೋಷ್ ಲಾಡ್, ಯು.ಟಿ.ಖಾದರ್, ಈಶ್ವರ್ ಖಂಡ್ರೆ, ಹೆಚ್.ಸಿ. ಬಾಲಕೃಷ್ಣ ಮತ್ತು ಲಕ್ಷ್ಮಣ ಸವದಿ ಅವರನ್ನೊಳಗೊಂಡ ವಕ್ತಾರರ ಸಮಿತಿಯನ್ನು ರಚಿಸಲಾಗಿದೆ ಎಂದರು.

**ರಾಜಕೀಯ ವ್ಯವಹಾರ ಸಮಿತಿ**

ಅದೇ ರೀತಿ, ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಉಪಮುಖ್ಯಮಂತ್ರಿ, ಕೆ.ಎಚ್.ಮುನಿಯಪ್ಪ, ಕೆ.ಜೆ. ಜಾರ್ಜ್, ಪ್ರಿಯಾಂಕ್ ಖರ್ಗೆ, ಕೃಷ್ಣ ಭೈರೇಗೌಡ, ಡಾ.ಯತೀಂದ್ರ ಸಿದ್ದರಾಮಯ್ಯ, ಯು.ಟಿ. ಖಾದರ್, ಲಕ್ಷ್ಮಣ ಸವದಿ, ಸತೀಶ್ ಜಾರಕಿಹೊಳಿ ಹಾಗೂ ಎಂ.ಬಿ.ಪಾಟೀಲ್ ಅವರನ್ನೊಳಗೊಂಡ 'ರಾಜಕೀಯ ವ್ಯವಹಾರಗಳ ಸಮಿತಿ' ರಚಿಸಲಾಗಿದೆ ಎಂದು ಪರಮೇಶ್ವರ್ ತಿಳಿಸಿದರು.

# ಇಸ್ರೋದಿಂದ ಆಕಾಶ ಕಣ್ಣು ಇಓಎಸ್–05 ಉಡಾವಣೆ

**ಶ್ರೀಹರಿಕೋಟಾ, ಸೆ.3:** ಭಾರತದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಮತ್ತೊಂದು ಮಹತ್ವದ ಮೈಲುಗಲ್ಲು ಸಾಧಿಸಲು ಸಜ್ಜಾಗಿದೆ. ಭೂಮಿಯ ಮೇಲಿನ ವಿಶಾಲ ಪ್ರದೇಶಗಳನ್ನು ನಿರಂತರವಾಗಿ ವೀಕ್ಷಿಸುವ ಸಾಮರ್ಥ್ಯ ಹೊಂದಿರುವ EOS-05 ಭೂ ವೀಕ್ಷಣಾ ಉಪಗ್ರಹವನ್ನು GSLV–F17 ರಾಕೆಟ್ ಮೂಲಕ ಶುಕ್ರವಾರ ಬೆಳಗಿನ ಜಾವ 2.55ಕ್ಕೆ ಉಡಾವಣೆ ಮಾಡಲು ಸಿದ್ಧತೆ ಪೂರ್ಣಗೊಂಡಿದೆ.

ಆಂಧ್ರಪ್ರದೇಶದ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಎರಡನೇ ಉಡಾವಣಾ ಪ್ಯಾಡ್‌ನಿಂದ ಉಡಾವಣೆ ನಡೆಯಲಿದೆ. EOS–05 ಅನ್ನು ಭಾರತದ ಮೊದಲ ಜಿಯೋಸಿಂಕ್ರೋನಸ್ ಕಕ್ಷೆಯಿಂದ ಚಿತ್ರಣ ನಡೆಸುವ ಭೂ ವೀಕ್ಷಣಾ ಉಪಗ್ರಹ ಎಂದು ಇಸ್ರೋ ವಿವರಿಸಿದೆ. ಭೂಮಿಯಿಂದ ಸುಮಾರು 36,000 ಕಿ.ಮೀ. ಎತ್ತರದ ಜಿಯೋಸಿಂಕ್ರೋನಸ್ ಕಕ್ಷೆಯಲ್ಲಿ ಕಾರ್ಯನಿರ್ವಹಿಸುವ ಈ ಉಪಗ್ರಹ, ನಿರ್ದಿಷ್ಟ ಭೌಗೋಳಿಕ ಪ್ರದೇಶಗಳ ಮೇಲೆ ನಿರಂತರ ನಿಗಾ ಇರಿಸಲು ನೆರವಾಗಲಿದೆ.

ಸಾಂಪ್ರದಾಯಿಕ ಕಡಿಮೆ ಭೂಕಕ್ಷೆಯ ಉಪಗ್ರಹಗಳಂತೆ ಆಗಾಗ್ಗೆ ಮಾತ್ರ ಪ್ರದೇಶವೊಂದರ ಮೇಲಿಂದ ಹಾದುಹೋಗುವ ಬದಲು, ನಿರ್ದಿಷ್ಟ ಪ್ರದೇಶದ ಮೇಲೆ ಪುನರಾವರ್ತಿತ ಹಾಗೂ ಹೆಚ್ಚು ನಿರಂತರ ವೀಕ್ಷಣೆ ಸಾಧ್ಯವಾಗಲಿದೆ.



### ಉಪಗ್ರಹದ ಮಹತ್ವಗಳೇನು?

EOS–05ನಿಂದ ಲಭ್ಯವಾಗುವ ಚಿತ್ರಗಳು ಹಾಗೂ ದತ್ತಾಂಶವನ್ನು ಹಲವು ಕ್ಷೇತ್ರಗಳಲ್ಲಿ ಬಳಸಿಕೊಳ್ಳಬಹುದು. ವಿಶೇಷವಾಗಿ ಹವಾಮಾನ ಪರಿಸ್ಥಿತಿಗಳ ನಿಗಾವಹಿಸಲು, ಚಂಡಮಾರುತಗಳ ಚಲನೆ ಪತ್ತೆ ಹಚ್ಚಲು, ಪ್ರವಾಹ ಮತ್ತು ಇತರ ನೈಸರ್ಗಿಕ ವಿಕೋಪಗಳ ಮೇಲ್ವಿಚಾರಣೆ ನಡೆಸಲು, ಕಾಡ್ಗಿಚ್ಚು ಪತ್ತೆ ಹಾಗೂ ನಿರ್ವಹಣೆ, ಕೃಷಿ ಪ್ರದೇಶಗಳ ಮೌಲ್ಯಮಾಪನ, ಅರಣ್ಯ ಮತ್ತು ನೈಸರ್ಗಿಕ ಸಂಪನ್ಮೂಲಗಳ ಮೇಲ್ವಿಚಾರಣೆ, ಪರಿಸರ ಬದಲಾವಣೆಗಳ ಅಧ್ಯಯನ, ಸೂಕ್ಷ್ಮ ಪ್ರದೇಶಗಳ ಕಾರ್ಯತಂತ್ರದ ವೀಕ್ಷಣೆ ಹಾಗೂ ವಿಪತ್ತು ನಿರ್ವಹಣೆ, ಕೃಷಿ, ಪರಿಸರ ಸಂರಕ್ಷಣೆ ಸೇರಿದಂತೆ ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದಲೂ ಈ ಉಪಗ್ರಹ ಮಹತ್ವ ಪಡೆದುಕೊಂಡಿದೆ.

EOS-05 ಅನ್ನು ಹೊತ್ತೊಯ್ಯಲಿರುವ GSLV-F17, ಭಾರತದ ಜಿಯೋಸಿಂಕ್ರೋನಸ್ ಸ್ಯಾಟಲೈಟ್ ಲಾಂಚ್ ವೆಹಿಕಲ್‌ನ 19ನೇ ಹಾರಾಟವಾಗಿದೆ. ಉಡಾವಣೆಯ ಬಳಿಕ ರಾಕೆಟ್ ಉಪಗ್ರಹವನ್ನು ನೇರವಾಗಿ ಅಂತಿಮ ಜಿಯೋಸಿಂಕ್ರೋನಸ್ ಕಕ್ಷೆಗೆ ಕಳುಹಿಸುವ ಬದಲು ಮೊದಲು Sub-Geosynchronous Transfer Orbitನಲ್ಲಿ ಇರಿಸಲಿದೆ. ನಂತರ ಉಪಗ್ರಹದಲ್ಲಿರುವ ಸ್ವಂತ ಪ್ರೊಪಲ್ಷನ್ ವ್ಯವಸ್ಥೆಯ ನೆರವಿನಿಂದ ಗುರಿ ಕಕ್ಷೆಗೆ ಏರಲಿದೆ.

ಕಳೆದ ಜನವರಿಯಲ್ಲಿ PSLV-C62/EOS-N1 ಉಡಾವಣೆಯಲ್ಲಿ ವೈಫಲ್ಯ ಎದುರಾದ ಬಳಿಕ ಸುಮಾರು ಏಳು ತಿಂಗಳ ಅಂತರದ ನಂತರ ಇಸ್ರೋ ಪ್ರಮುಖ ಉಪಗ್ರಹ ಉಡಾವಣೆಗೆ ಮರಳುತ್ತಿದೆ. ಹೀಗಾಗಿ GSLV-F17/EOS-05 ಮಿಷನ್ ಯಶಸ್ಸು ಇಸ್ರೋದ ಉಡಾವಣಾ ಸಾಮರ್ಥ್ಯದ ಮೇಲಿನ ವಿಶ್ವಾಸವನ್ನು ಮತ್ತಷ್ಟು ಬಲಪಡಿಸುವ ನಿರೀಕ್ಷೆಯಿದೆ.

# 2030ರ ವೇಳೆಗೆ ಕರ್ನಾಟಕದ ವಿದ್ಯುತ್ ಸಾಮರ್ಥ್ಯ 66 ಗೀಗಾವ್ಯಾಟ್‌ಗೆ ಹೆಚ್ಚಳ: ಇಂಧನ ಇಲಾಖೆ ಅಪರ ಮುಖ್ಯಕಾರ್ಯದರ್ಶಿ ಗೌರವ್ ಗುಪ್ತ



ಬೆಂಗಳೂರು ರೇಸ್ ಕೋರ್ಸ್ ರಸ್ತೆಯ ಶಕ್ತಿ ಭವನದಲ್ಲಿ ಗುರುವಾರ ಸಿಎಂ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ವಿದ್ಯುತ್ ನಿಗಮದ ನಿರ್ದೇಶಕರ ಮಂಡಳಿ ಸಭೆಯಲ್ಲಿ ಸಚಿವ ಕೆ ಜೆ ಜಾರ್ಜ್, ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಗೌರವ್ ಗುಪ್ತಾ, ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ರಾಮ್‌ಪ್ರಸಾತ್ ಮನೋಹರ್ ಮತ್ತಿತರರು ಹಾಜರಿದ್ದರು.

**ನವದೆಹಲಿ, ಸೆ.3:** ಕರ್ನಾಟಕದ ಒಟ್ಟು ಸ್ಥಾಪಿತ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಪ್ರಸ್ತುತ ಇರುವ 39 ಗೀಗಾವ್ಯಾಟ್‌ನಿಂದ 2030ರ ವೇಳೆಗೆ 66 ಗೀಗಾವ್ಯಾಟ್‌ಗೆ ಹೆಚ್ಚಿಸುವ 10 ವರ್ಷಗಳ ಕಾರ್ಯತಂತ್ರವನ್ನು ಕರ್ನಾಟಕ ರೂಪಿಸಿದೆ ಎಂದು ಇಂಧನ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಹೇಳಿದರು.

ಹೊಸದಿಲ್ಲಿಯ ಯಶೋಭೂಮಿಯಲ್ಲಿ ನಡೆಯುತ್ತಿರುವ 'ಭಾರತ್ ಎಲೆಕ್ಟ್ರಿಸಿಟಿ, ಪವರ್‌ಜೆನ್ ಇಂಡಿಯಾ ಮತ್ತು ಇಂಡಿಯನ್ ಯುಟಿಲಿಟಿ ವೀಕ್ 2026ರ ಫೋಕಸ್ ಸ್ಟೇಟ್ ಸೆಷನ್‌ನಲ್ಲಿ ಮಾತನಾಡಿದ ಅವರು, ವಿದ್ಯುತ್ ಸಾಮರ್ಥ್ಯ ಹೆಚ್ಚಳದ ಗುರಿ ಸಾಧಿಸಲು ರಾಜ್ಯವು ನವೀಕರಿಸಬಹುದಾದ ಇಂಧನ ಮೂಲಗಳಿಗೆ ಆದ್ಯತೆ ನೀಡಲಿದೆ. ಕರ್ನಾಟಕದಲ್ಲಿ 39 ಗೀಗಾವ್ಯಾಟ್‌ಗಿಂತ ಹೆಚ್ಚಿನ ಸ್ಥಾಪಿತ ವಿದ್ಯುತ್ ಸಾಮರ್ಥ್ಯವಿದ್ದು, ರಾಜ್ಯದ ಒಟ್ಟು ವಿದ್ಯುತ್ ಉತ್ಪಾದನೆಯಲ್ಲಿ ಮೂರನೇ ಎರಡರಷ್ಟು ಪಾಲು ಜಲವಿದ್ಯುತ್ ಮತ್ತು ಇತರೆ ನವೀಕರಿಸಬಹುದಾದ ಇಂಧನ ಮೂಲಗಳಿಂದ ಬರುತ್ತಿದೆ. ನವೀಕರಿಸ ಬಹುದಾದ ಇಂಧನ ಸಾಮರ್ಥ್ಯವನ್ನು ಮತ್ತಷ್ಟು ಬಲಪಡಿಸಲು ರಾಜ್ಯವು ಸಜ್ಜಾಗುತ್ತಿದೆ. ಈ ಪ್ರಯತ್ನವು ರಾಷ್ಟ್ರದ ನವೀಕರಿಸಬಹುದಾದ ಇಂಧನ ಉತ್ಪಾದನೆ ಹೆಚ್ಚಳದ ಗುರಿ ಸಾಧನೆಗೆ ನೇರವಾಗಿ ಕೊಡುಗೆ ನೀಡಲಿದೆ ಎಂದು ಹೇಳಿದರು.

ತ್ವರಿತಗತಿಯಲ್ಲಿ ಆಗುತ್ತಿರುವ ಕೈಗಾರಿಕಾ ವಿಸ್ತರಣೆ, ಎಲೆಕ್ಟ್ರಿಕ್ ವಾಹನಗಳ ವ್ಯಾಪಕ ಬಳಕೆ ಹಾಗೂ ಬೆಂಗಳೂರು, ಮೈಸೂರು ಮತ್ತು ಮಂಗಳೂರಿನಲ್ಲಿ ಬೃಹತ್ ಡೇಟಾಸೆಂಟರ್‌ಗಳ ಅಭಿವೃದ್ಧಿಯಿಂದಾಗಿ ಮುಂದಿನ ಒಂದು ದಶಕದಲ್ಲಿ ರಾಜ್ಯದ ವಿದ್ಯುತ್ ಬೇಡಿಕೆ ದ್ವಿಗುಣಗೊಳ್ಳುವ ನಿರೀಕ್ಷೆಯಿದೆ. ಈ ಬೇಡಿಕೆಯನ್ನು ಸಮರ್ಥವಾಗಿ ನಿರ್ವಹಿಸಲು, ಕೇಂದ್ರ ವಿದ್ಯುತ್ ಪ್ರಾಧಿಕಾರ (ಸಿಇಎ) ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಅನುಮೋದಿಸಿರುವ 'ಸಂಪನ್ಮೂಲ ಸಮರ್ಪಕ' ಯೋಜನೆ ಜಾರಿಗೊಳಿಸಿರುವ ಆರಂಭಿಕ ರಾಜ್ಯಗಳ ಪೈಕಿ ಕರ್ನಾಟಕವೂ ಒಂದಾಗಿದೆ ಎಂದು ಅವರು ತಿಳಿಸಿದರು.

ನವೀಕರಿಸಬಹುದಾದ ಇಂಧನ ಮೂಲಗಳ ಹೆಚ್ಚಳ, ಗ್ರಿಡ್‌ನ ಸ್ಥಿರತೆ ಮತ್ತು ಇಂಧನ ಸಂಗ್ರಹಣೆ ವ್ಯವಸ್ಥೆಗೆ ರಾಜ್ಯ ಒತ್ತು ನೀಡಿದ್ದು, 2,000 ಮೆಗಾವ್ಯಾಟ್ ಸಾಮರ್ಥ್ಯದ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಅನುಷ್ಠಾನಕ್ಕೂ ಸಜ್ಜಾಗಿದೆ. ವಿದ್ಯುತ್ ಗ್ರಿಡ್ ಸ್ಥಿರತೆ ಕಾಯ್ದುಕೊಳ್ಳಲು ಕೆಪಿಟಿಸಿಎಲ್‌ನ ಪ್ರಮುಖ ಉಪಕೇಂದ್ರಗಳಲ್ಲಿ ದೊಡ್ಡ ಪ್ರಮಾಣದ ಬ್ಯಾಟರಿ ಎನರ್ಜಿ ಸ್ಟೋರೇಜ್ ಸಿಸ್ಟಮ್‌ಗಳನ್ನು (ಬಿಇಎಸ್‌ಎಸ್) ಅಳವಡಿಸಲಾಗುತ್ತಿದೆ ಎಂದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಶೇ.3ಕ್ಕಿಂತಲೂ ಕಡಿಮೆ ಪ್ರಸರಣ ನಷ್ಟದೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಅಲ್ಲದೇ, ಸಾವಿರಾರು ಕಿಲೋಮೀಟರ್‌ಗಳಷ್ಟು ಹೊಸ ಪ್ರಸರಣ ಮಾರ್ಗಗಳು ಹಾಗೂ ಸೂಪರ್–ಗ್ರಿಡ್ ಉಪ ಕೇಂದ್ರಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ ಎಂದು ತಿಳಿಸಿದರು.

### 3 ಲಕ್ಷ ಕೋಟಿ ರೂ. ಹೂಡಿಕೆ ನಿರೀಕ್ಷೆ

ಇಂಧನ ಸಂಗ್ರಹಣೆ ಮತ್ತು ಪ್ರಸರಣ ಕ್ಷೇತ್ರಗಳಲ್ಲಿ ಖಾಸಗಿಯವರ ಪಾಲ್ಗೊಳ್ಳುವಿಕೆಯನ್ನು ರಾಜ್ಯ ಸರ್ಕಾರ ಉತ್ತೇಜಿಸುತ್ತಿದ್ದು, ಮುಂದಿನ ನಾಲ್ಕರಿಂದ ಐದು ವರ್ಷಗಳಲ್ಲಿ ವಿದ್ಯುತ್ ವಲಯದಲ್ಲಿ 2ರಿಂದ 3 ಲಕ್ಷ ಕೋಟಿ ರೂ. ಖಾಸಗಿ ಹೂಡಿಕೆಯನ್ನು ಆಕರ್ಷಿಸುವ ನಿರೀಕ್ಷೆಯಿದೆ ಎಂದು ಗೌರವ್‌ಗುಪ್ತ ಹೇಳಿದರು. ಭೂಮಿಗೆ ಸಂಬಂಧಿಸಿದ ನಿಯಮಗಳು ಮತ್ತು ಯೋಜನೆಗಳ ಅನುಮೋದನಾ ಪ್ರಕ್ರಿಯೆ ಸೇರಿದಂತೆ ಹೂಡಿಕೆದಾರರಿಂದ ಬಂದಿರುವ ಸಲಹೆ–ಅಭಿಪ್ರಾಯಗಳಿಗೆ ರಾಜ್ಯ ಸರ್ಕಾರ ಸ್ಪಂದಿಸುತ್ತಿದೆ. ಈ ಹಿನ್ನೆಲೆಯಲ್ಲಿ ನಿಯಮಗಳು ಮತ್ತು ಪ್ರಕ್ರಿಯೆಗಳನ್ನು ಸರಳಗೊಳಿಸಲಾಗುತ್ತಿದ್ದು, ಅವುಗಳನ್ನು ಆನ್‌ಲೈನ್ ವ್ಯವಸ್ಥೆಗೆ ತರಲಾಗುತ್ತಿದೆ. ಇದರಿಂದ ಹೂಡಿಕೆದಾರರಿಗೆ ಯೋಜನೆಗ ಅನುಷ್ಠಾನಗೊಳಿಸಲು ಸುಲಭವಾಗಲಿದೆ. ಇಂತಹ ಪಾರದರ್ಶಕ ಮತ್ತು ಸರಳೀಕೃತ ವ್ಯವಸ್ಥೆಯಿಂದ ಕರ್ನಾಟಕದ ವಿದ್ಯುತ್ ಕ್ಷೇತ್ರದಲ್ಲಿ ಹೆಚ್ಚಿನ ಹೂಡಿಕೆದಾರರು ಪಾಲ್ಗೊಳ್ಳಲು ಅನುಕೂಲವಾಗಲಿದೆ ಎಂದರು.

# ನಶಾಮುಕ್ತ ಭಾರತ ಅಭಿಯಾನ: ಕರ್ನಾಟಕ ಸೇರಿ ದಕ್ಷಿಣ ಭಾರತದ 30 ಸ್ಥಳಗಳಲ್ಲಿ ಇ.ಡಿ. ದಾಳಿ

**ಬೆಂಗಳೂರು, ಸೆ.3:** ನಶಾ ಮುಕ್ತ ಭಾರತ (ಮಾದಕ ವಸ್ತು ಮುಕ್ತ ಭಾರತ) ಅಭಿಯಾನದಡಿ ಜಾರಿ ನಿರ್ದೇಶನಾಲಯ (ಇ.ಡಿ.) ದಕ್ಷಿಣ ಭಾರತದ ವಿವಿಧೆಡೆ ಗುರುವಾರ ಶೋಧ ಕಾರ್ಯಾಚರಣೆ ನಡೆಸಿದೆ. ಕೇರಳ, ಕರ್ನಾಟಕ, ತಮಿಳುನಾಡು ಹಾಗೂ ತೆಲಂಗಾಣ ರಾಜ್ಯಗಳ ಒಟ್ಟು 30 ಸ್ಥಳಗಳಲ್ಲಿ ಏಕಕಾಲದಲ್ಲಿ ಈ ದಾಳಿ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಪ್ರಕರಣಗಳನ್ನು 2002ರ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ ಅಡಿಯಲ್ಲಿ ಇ.ಡಿ. ತನಿಖೆ ನಡೆಸುತ್ತಿದೆ.




ತಮಿಳುನಾಡಿನ ಚೆನ್ನೈನಲ್ಲಿ 7 ಸ್ಥಳಗಳು, ರಾಮನಾಥಪುರಂನಲ್ಲಿ 2, ನಾಗಪಟ್ಟಣಂ ಮತ್ತು ವೇಲಾಂಕಣ್ಣಿಯಲ್ಲಿ 6 ಹಾಗೂ ತಿರುನೆಲ್ವೇಲಿಯಲ್ಲಿ, ಕರ್ನಾಟಕದ ಕೋಲಾರ, ಮಾಲೂರು ಮತ್ತು ಹೊಸಕೋಟೆ, ತೆಲಂಗಾಣದ ಕೆಲ ಪ್ರದೇಶಗಳಲ್ಲಿ ಹಾಗೂ ಕೇರಳದ ಕೊಚ್ಚಿ, ಕೋಯಿಕ್ಕೋಡ್ ಮತ್ತು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಆರೋಪಿಗಳಿಗೆ ಸಂಬಂಧಿಸಿದ ತಲಾ ನಾಲ್ಕು ಸ್ಥಳಗಳಲ್ಲೂ ಇ.ಡಿ. ಅಧಿಕಾರಿಗಳು ದಾಳಿ ನಡೆಸಿದ್ದಾರೆ.

# ಖಾಸಗಿ ಬೈಕ್‌ಗಳಿಗೂ ಟ್ಯಾಕ್ಸಿ ಸೇವೆಗೆ ಅವಕಾಶ ನೀಡಿ: ರಾಜ್ಯಗಳಿಗೆ ಗಡ್ಕರಿ ಮನವಿ




**ನವದೆಹಲಿ, ಸೆ.3:** ಖಾಸಗಿ ದ್ವಿಚಕ್ರ ವಾಹನಗಳಾದ ಬೈಕ್ ಹಾಗೂ ಸ್ಕೂಟರ್‌ಗಳನ್ನು ಬಳಸಿಕೊಂಡು ಪ್ರಯಾಣಿಕರನ್ನು ಸಾಗಿಸುವ ಬೈಕ್ ಟ್ಯಾಕ್ಸಿ ಸೇವೆಗೆ ಅವಕಾಶ ನೀಡುವಂತೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ರಾಜ್ಯ ಸರ್ಕಾರಗಳಿಗೆ ಮನವಿ ಮಾಡಿದ್ದಾರೆ. ಈ ವ್ಯವಸ್ಥೆಯಿಂದ ದೇಶದಲ್ಲಿ 8 ಕೋಟಿ ಜನರಿಗೆ ಉದ್ಯೋಗ ಹಾಗೂ ಜೀವನೋಪಾಯದ ಅವಕಾಶಗಳು ಸೃಷ್ಟಿಯಾಗಬಹುದು ಎಂದು ಅವರು ಹೇಳಿದ್ದಾರೆ.

ಮಹಾರಾಷ್ಟ್ರದಲ್ಲಿ ಸುರಕ್ಷಾ ಎಂಬ ಪ್ರಾಯೋಗಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಸಂದರ್ಭದಲ್ಲಿ ಮಾತನಾಡಿದ ಗಡ್ಕರಿ, ಕೇಂದ್ರ ಸರ್ಕಾರ ಖಾಸಗಿ ದ್ವಿಚಕ್ರ ವಾಹನಗಳನ್ನು ಬೈಕ್ ಟ್ಯಾಕ್ಸಿಯಾಗಿ ಬಳಸಲು ಅವಕಾಶ ಕಲ್ಪಿಸಿದೆ. ಆದರೆ ಸಾರಿಗೆ ಕ್ಷೇತ್ರ ರಾಜ್ಯಗಳ ವ್ಯಾಪ್ತಿಯಲ್ಲಿರುವುದರಿಂದ ಕೆಲವು ರಾಜ್ಯಗಳು ಇನ್ನೂ ಅನುಮತಿ ನೀಡಿಲ್ಲ ಎಂದು ಹೇಳಿದರು. ರಾಜ್ಯಗಳು ಬೈಕ್ ಟ್ಯಾಕ್ಸಿಗೆ ಅನುಮತಿ ನೀಡಬೇಕು; ಇದರಿಂದ ವಿಶೇಷವಾಗಿ ಗ್ರಾಮೀಣ ಪ್ರದೇಶದ ಜನರಿಗೆ ಹೆಚ್ಚುವರಿ ಆದಾಯದ ಮೂಲ ದೊರೆಯಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕೇಂದ್ರದ ಮಾರ್ಗಸೂಚಿಗಳ ಅಡಿಯಲ್ಲಿ ರಾಜ್ಯಗಳು ಖಾಸಗಿ ಮೋಟಾರ್‌ಸೈಕಲ್‌ಗಳನ್ನು ಪ್ರಯಾಣಿಕರ ಸಾಗಣೆಗೆ ಬಳಸುವ ಅಗ್ರಿಗೇಟರ್ ಸೇವೆಗಳಿಗೆ ಅನುಮತಿ ನೀಡಬಹುದು. ಆದರೆ ರಾಜ್ಯ ಸರ್ಕಾರಗಳು ತಮ್ಮದೇ ಷರತ್ತುಗಳು, ಶುಲ್ಕ ಹಾಗೂ ನಿಯಮಗಳನ್ನು ವಿಧಿಸಬಹುದಾಗಿದೆ. ಹೀಗಾಗಿ ಕೇಂದ್ರದ ಅನುಮತಿ ಇದ್ದರೂ ದೇಶಾದ್ಯಂತ ಬೈಕ್ ಟ್ಯಾಕ್ಸಿ ಸೇವೆ ತಕ್ಷಣವೇ ಒಂದೇ ರೀತಿಯಲ್ಲಿ ಜಾರಿಗೆ ಬರುವುದಿಲ್ಲ; ಆಯಾ ರಾಜ್ಯಗಳ ನಿರ್ಧಾರ ನಿರ್ಣಾಯಕವಾಗಲಿದೆ.

ಬೈಕ್ ಟ್ಯಾಕ್ಸಿಗಳು ಕಡಿಮೆ ವೆಚ್ಚದ ಹಾಗೂ ತ್ವರಿತ ಪ್ರಯಾಣದ ಆಯ್ಕೆಯಾಗಿದ್ದು, ನಗರ ಪ್ರದೇಶಗಳಲ್ಲಿ ಕೊನೆಯ ಮೈಲಿ ಸಂಪರ್ಕಕ್ಕೆ ಸಹಕಾರಿಯಾಗಬಹುದು. ಆದರೆ ಪ್ರಯಾಣಿಕರ ಸುರಕ್ಷತೆ, ವಿಮೆ, ಚಾಲಕರ ಪರವಾನಗಿ ಮತ್ತು ರಾಜ್ಯವಾರು ನಿಯಮಗಳ ಏಕರೂಪತೆಯಂತಹ ವಿಚಾರಗಳು ಮುಂದುವರಿದ ಸವಾಲುಗಳಾಗಿವೆ ಎಂದರು.

ಇದೇ ವೇಳೆ ಸಂಚಾರ ನಿಯಮ ಉಲ್ಲಂಘಿಸುವ ಚಾಲಕರ ವಿರುದ್ಧ ನೆಗೆಟಿವ್ ಪಾಯಿಂಟ್ ವ್ಯವಸ್ಥೆ ಜಾರಿಗೆ ತರಲು ಸರ್ಕಾರ ಮುಂದಾಗಿದೆ ಎಂದು ಗಡ್ಕರಿ ತಿಳಿಸಿದ್ದಾರೆ. ಪದೇಪದೇ ನಿಯಮ ಉಲ್ಲಂಘಿಸುವ ಚಾಲಕರಿಗೆ ಅಂಕಗಳನ್ನು ನೀಡಲಾಗುತ್ತದೆ. ನಿಗದಿತ ಮಟ್ಟದಲ್ಲಿ ನೆಗೆಟಿವ್ ಪಾಯಿಂಟ್‌ಗಳು ಸಂಗ್ರಹವಾದರೆ ಚಾಲನಾ ಪರವಾನಗಿ ಅಮಾನತು ಅಥವಾ ರದ್ದುಗೊಳಿಸುವ ಕ್ರಮ ಕೈಗೊಳ್ಳುವ ಉದ್ದೇಶ ಹೊಂದಲಾಗಿದೆ. ಪದೇಪದೇ ನಿಯಮ ಉಲ್ಲಂಘಿಸುವವರ ಮೇಲೆ ಕಠಿಣ ಕ್ರಮ ಕೈಗೊಂಡು ರಸ್ತೆ ಸುರಕ್ಷತೆ ಹೆಚ್ಚಿಸುವುದು ಇದರ ಗುರಿಯಾಗಿದೆ.

# ನೋಯ್ಡಾ ಪ್ರತಿಭಟನೆ: ಯೋಗಿ ಸರ್ಕಾರಕ್ಕೆ ಕೋರ್ಟ್ ತರಾಟೆ



**ಅಲಹಾಬಾದ್, ಸೆ.3:** ನೋಯ್ಡಾದ ಕಾರ್ಮಿಕರ ಪ್ರತಿಭಟನೆಗೆ ಸಂಬಂಧಿಸಿದಂತೆ ದೆಹಲಿ ವಿಶ್ವವಿದ್ಯಾಲಯದ ಪದವೀಧರೆ ಹಾಗೂ ಸಾಮಾಜಿಕ ಕಾರ್ಯಕರ್ತೆ ಆಕೃತಿ ಚೌಧರಿ ಅವರನ್ನು ರಾಷ್ಟ್ರೀಯ ಭದ್ರತಾ ಕಾಯ್ದೆ(ಎನ್‌ಎಸ್‌ಎ) ಅಡಿ ಸುಮಾರು ಐದು ತಿಂಗಳು ಬಂಧನದಲ್ಲಿಟ್ಟಿದ್ದ ಉತ್ತರ ಪ್ರದೇಶದ ಯೋಗಿ ಸರ್ಕಾರಕ್ಕೆ ಅಲಹಾಬಾದ್ ಹೈಕೋರ್ಟ್ ಛೀಮಾರಿ ಹಾಕಿದೆ. ಆಕೃತಿ ವಿರುದ್ಧದ ಎನ್ ಎಸ್‌ಎ ಬಂಧನ ಆದೇಶವನ್ನು ರದ್ದುಪಡಿಸಿರುವ ನ್ಯಾಯಾಲಯ, ಆಕೆಯ ಬಂಧನಕ್ಕೆ ರಾಜ್ಯ ನೀಡಿದ ವಿವರಣೆಯನ್ನು ರಾಜ್ಯದ ಕಟ್ಟುಕಥೆ ಎಂದು ಕಟುವಾಗಿ ಟೀಕಿಸಿದೆ.

ನ್ಯಾಯಮೂರ್ತಿಗಳಾದ ಅತುಲ್ ಶ್ರೀಧರನ್ ಮತ್ತು ಅಚಲ್ ಸಚ್‌ದೇವ್ ವಿಭಾಗೀಯ ಪೀಠ ಈ ಆದೇಶ ನೀಡಿದೆ. ಆಕೃತಿಯನ್ನು ಬೇರೆ ಯಾವುದೇ ಪ್ರಕರಣದಲ್ಲಿ ಬಂಧನದಲ್ಲಿಡುವ ಅಗತ್ಯವಿಲ್ಲದಿದ್ದರೆ ತಕ್ಷಣ ಬಿಡುಗಡೆ ಮಾಡುವಂತೆ ಸೂಚಿಸಿರುವ ಕೋರ್ಟ್, ಆಕೃತಿಗೆ 5 ಲಕ್ಷ ಪರಿಹಾರ ನೀಡುವಂತೆಯೂ ಆದೇಶಿಸಿದೆ.

2026ರ ಏಪ್ರಿಲ್‌ನಲ್ಲಿ ನೋಯ್ಡಾ ಕೈಗಾರಿಕಾ ಪ್ರದೇಶದಲ್ಲಿ ಕಾರ್ಮಿಕರು ವೇತನ ಹೆಚ್ಚಳ ಹಾಗೂ ಉತ್ತಮ ಕೆಲಸದ ಪರಿಸ್ಥಿತಿಗಾಗಿ ಪ್ರತಿಭಟನೆ ನಡೆಸಿದ್ದರು. ಪ್ರತಿಭಟನೆ ಬಳಿಕ ಹಿಂಸಾಚಾರ, ಕಲ್ಲುತೂರಾಟ, ಬೆಂಕಿ ಹಚ್ಚುವಿಕೆ ಹಾಗೂ ಸಾರ್ವಜನಿಕ ಆಸ್ತಿಗೆ ಹಾನಿಯಾದ ಘಟನೆಗಳು ನಡೆದಿದ್ದವು.

ಈ ಹಿಂಸಾಚಾರಕ್ಕೆ ಪ್ರತಿಭಟನಾಕಾರರನ್ನು ಪ್ರಚೋದಿಸುವಲ್ಲಿ ಆಕೃತಿ ಚೌಧರಿ ಪ್ರಮುಖ ಪಾತ್ರ ವಹಿಸಿದ್ದರು ಎಂಬುದು ಪೊಲೀಸರ ಆರೋಪ. ಆದರೆ ಆಕೃತಿ ತಮ್ಮ ವಿರುದ್ಧದ ಆರೋಪಗಳನ್ನು ನಿರಾಕರಿಸಿದ್ದು, ತಾವು ಕಾರ್ಮಿಕರ ಹೋರಾಟಕ್ಕೆ ಬೆಂಬಲ ಸೂಚಿಸಲು ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಸಾಮಾಜಿಕ ಕಾರ್ಯಕರ್ತೆ ಮಾತ್ರ, ಪ್ರತಿಭಟನೆಯ ಸಂಘಟಕಿಯಲ್ಲ ಎಂದು ನ್ಯಾಯಾಲಯದಲ್ಲಿ ವಾದಿಸಿದ್ದರು.

ಈ ಪ್ರಕರಣಕ್ಕೆ ಸಂಬಂಧಿಸಿ ಆಕೃತಿ ವಿರುದ್ಧ ಹಲವು ಎಫ್‌ಐಆರ್‌ಗಳು ದಾಖಲಾಗಿದ್ದವು. ಅವುಗಳಲ್ಲಿ ಗಲಭೆ, ಬೆಂಕಿ ಹಚ್ಚುವಿಕೆ, ಸಾರ್ವಜನಿಕ ಆಸ್ತಿಗೆ ಹಾನಿ, ಹಿಂಸಾಚಾರಕ್ಕೆ ಪ್ರಚೋದನೆ ಸೇರಿದಂತೆ ಗಂಭೀರ ಆರೋಪಗಳನ್ನು ಪೊಲೀಸರು ದಾಖಲಿಸಿದ್ದರು. ಬಳಿಕ ಉತ್ತರ ಪ್ರದೇಶ ಪೊಲೀಸರು ಆಕೃತಿ ವಿರುದ್ಧ ಎನ್ ಎಸ್‌ಎ ಅಡಿ ಕೇಸ್ ಹಾಕಿ ಬಂಧಿಸಿದ್ದರು. ಆಕೃತಿ ವಿರುದ್ಧ ಎನ್ ಎಸ್‌ಎ ಹೇರಲು ರಾಜ್ಯ ಸರ್ಕಾರ ಆಧರಿಸಿರುವ ಸಾಕ್ಷ್ಯಗಳ ಬಗ್ಗೆ ಹೈಕೋರ್ಟ್ ಆರಂಭದಿಂದಲೇ ಗಂಭೀರ ಪ್ರಶ್ನೆಗಳನ್ನು ಎತ್ತಿತು. ಆಕೆ ಪ್ರತಿಭಟನಾಕಾರರಿಗೆ ಕಲ್ಲುತೂರಾಟ ಅಥವಾ ವಾಹನಗಳಿಗೆ ಬೆಂಕಿ ಹಚ್ಚುವಂತೆ ಕರೆ ನೀಡಿದ್ದಾಳೆ ಎಂಬುದನ್ನು ತೋರಿಸುವ ವಿಡಿಯೊ, ಸಂದೇಶ ಅಥವಾ ಇತರ ದೃಢ ಸಾಕ್ಷ್ಯ ಎಲ್ಲಿದೆ ಎಂದು ನ್ಯಾಯಪೀಠ ಪ್ರಶ್ನಿಸಿತು.

ರಾಜ್ಯ ಸರ್ಕಾರ ಸಾಕ್ಷಿಗಳ ಹೇಳಿಕೆಗಳನ್ನು ಉಲ್ಲೇಖಿಸಿತು. ಆದರೆ ಆ ಹೇಳಿಕೆಗಳನ್ನು ಬೆಂಬಲಿಸುವ ವಿಡಿಯೊ ಸಾಕ್ಷ್ಯವನ್ನು ನ್ಯಾಯಾಲಯ ಕೇಳಿತು. ಸರ್ಕಾರದ ಪರ ವಕೀಲರು ವಿಡಿಯೊ ಇದೆ ಎಂದು ತಿಳಿಸಿದ ಹಿನ್ನೆಲೆಯಲ್ಲಿ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಸೂಚಿಸಲಾಯಿತು. ಆದರೆ ಆರೋಪಕ್ಕೆ ಸಂಬಂಧಿಸಿದ ದೃಢ ವಿಡಿಯೊ ಸಾಕ್ಷ್ಯವನ್ನು ರಾಜ್ಯ ಸಮರ್ಪಕವಾಗಿ ಹಾಜರುಪಡಿಸಲು ವಿಫಲವಾಯಿತು ಎಂದು ವರದಿಗಳು ತಿಳಿಸಿವೆ.

ಆಕೃತಿಯನ್ನು ಏಪ್ರಿಲ್ 12ರಂದು ಬೆಳಗ್ಗೆ 10.56ಕ್ಕೆ ಬಂಧಿಸಲಾಗಿತ್ತು ಎಂದು ರಾಜ್ಯ ಸರ್ಕಾರ ತಿಳಿಸಿತು. ಅದೇ ವೇಳೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಅಡಿ ಅಗತ್ಯ ನೋಟಿಸ್ ನೀಡಲಾಗಿದೆ ಎಂದು ಸರ್ಕಾರ ವಾದಿಸಿತು. ಆದರೆ, ಸೆಕ್ಷನ್ 130ರ ಅಡಿ ನೋಟಿಸ್ ನೀಡುವ ಮೊದಲು ಅಗತ್ಯವಿರುವ ಸೆಕ್ಷನ್ 126ರ ಪ್ರಕ್ರಿಯೆ ಪಾಲಿಸಲಾಗಿತ್ತೇ ಎಂದು ನ್ಯಾಯಪೀಠ ಪ್ರಶ್ನಿಸಿತು. ಸೆಕ್ಷನ್ 126ರ ನೋಟಿಸ್ ನೀಡಿರಲಿಲ್ಲ ಎಂಬುದನ್ನು ಸರ್ಕಾರವೇ ಒಪ್ಪಿಕೊಂಡಿತು.

ಪೊಲೀಸರ ಜನರಲ್ ಡೈರಿ ದಾಖಲೆಯಲ್ಲಿರುವ ಸಮಯ ಹಾಗೂ ನೋಟಿಸ್ ಸಿದ್ಧಪಡಿಸಿದ ಸಮಯವನ್ನು ಹೋಲಿಸಿದ ಕೋರ್ಟ್, ಮೊದಲು ಆಕೃತಿಯನ್ನು ಬಂಧಿಸಿ, ಬಳಿಕ ನೋಟಿಸ್ ಸಿದ್ಧಪಡಿಸಲಾಗಿತ್ತೇ ಎಂಬ ಗಂಭೀರ ಪ್ರಶ್ನೆ ಎತ್ತಿತು. ಈ ಪ್ರಕ್ರಿಯೆಯಲ್ಲಿನ ಅಸಂಗತತೆಗಳು ಕೂಡ ಬಂಧನದ ಕಾನೂನುಬದ್ಧತೆಯ ಮೇಲೆ ಅನುಮಾನ ಮೂಡಿಸಿದವು.

ಪ್ರಕರಣದ ಸಮಯಕ್ರಮವೂ ಕೋರ್ಟ್‌ನ ಗಮನ ಸೆಳೆಯಿತು. ಆಕೃತಿಯನ್ನು ಏಪ್ರಿಲ್ 12ರಂದು ಬಂಧಿಸಲಾಗಿತ್ತು. ಆದರೆ ಕಾರ್ಮಿಕರ ಪ್ರತಿಭಟನೆಗೆ ಸಂಬಂಧಿಸಿದ ಪ್ರಮುಖ ಹಿಂಸಾಚಾರದ ಘಟನೆ ಏಪ್ರಿಲ್ 13ರಂದು ನಡೆದಿತ್ತು ಎಂದು ವರದಿಯಾಗಿದೆ. ಹೀಗಾಗಿ, ಆಕೃತಿ ಬಂಧನದಲ್ಲಿದ್ದ ನಂತರ ನಡೆದ ಹಿಂಸಾಚಾರಕ್ಕೆ ಆಕೆಯನ್ನೇ ಹೊಣೆ ಮಾಡುವ ರಾಜ್ಯದ ವಾದದ ಬಗ್ಗೆ ನ್ಯಾಯಾಲಯ ಅಸಮಾಧಾನ ವ್ಯಕ್ತಪಡಿಸಿತು.

# ಬಾರ್ ಕೌನ್ಸಿಲ್ ಪ್ರಮುಖ ನಿರ್ಧಾರಗಳಿಗೆ ಎಜಿ, ಎಸ್‌ಜಿ ಸಮ್ಮತಿ ಕಡ್ಡಾಯ

**ನವದೆಹಲಿ, ಸೆ.3:** ಬಾರ್ ಕೌನ್ಸಿಲ್ ಆಫ್ ಇಂಡಿಯಾ (ಬಿಸಿಐ) ನೂತನ ಚುನಾವಣೆ ನಡೆಯುವವರೆಗೆ ಪ್ರಸ್ತುತ ಅಧ್ಯಕ್ಷ ಮನನ್ ಕುಮಾರ್ ಮಿಶ್ರಾ ಅವರು ಕೇವಲ ಹಂಗಾಮಿ (ಪ್ರೊ ಟೆಮ್) ಅಧ್ಯಕ್ಷರಾಗಿ ಮಾತ್ರ ಮುಂದುವರಿಯಲಿದ್ದಾರೆ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಅಲ್ಲದೆ, ಬಿಸಿಐ ಕೈಗೊಳ್ಳುವ ಯಾವುದೇ ಪ್ರಮುಖ ನೀತಿ ನಿರ್ಧಾರಗಳಿಗೆ ಅಟಾರ್ನಿ ಜನರಲ್ ಮತ್ತು ಸಾಲಿಸಿಟರ್ ಜನರಲ್ ಅವರ ಸಲಹೆ ಮತ್ತು ಸಮ್ಮತಿ ಪಡೆಯುವುದು ಕಡ್ಡಾಯ ಎಂದು ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠ ಮಹತ್ವದ ಆದೇಶ ನೀಡಿದೆ.

ಬಿಸಿಐ ಪದಾಧಿಕಾರಿಗಳ ವಿರುದ್ಧ 2020ರಲ್ಲಿ ಸ್ಥಾಪಿಸಲಾದ ಪರ್ಲ್‌ಫಸ್ಟ್ ಟ್ರಸ್ಟ್‌ಗೆ ಸಂಬಂಧಿಸಿದಂತೆ ಗಂಭೀರ ಆರೋಪಗಳು ಕೇಳಿಬಂದಿವೆ. ಬಿಸಿಐನ ಆರ್ಥಿಕ ಸಂಪನ್ಮೂಲಗಳನ್ನು ಈ ಹೊಸ ಟ್ರಸ್ಟ್‌ಗೆ ವರ್ಗಾಯಿಸಲಾಗಿದೆ ಮತ್ತು ಹಾಲಿ ಪದಾಧಿಕಾರಿಗಳು ತಮ್ಮ ಬಿಸಿಐ ಅಧಿಕಾರಾವಧಿ ಮುಗಿದರೂ ಈ ಟ್ರಸ್ಟ್‌ನ ಕಾಯಂ ಟ್ರಸ್ಟಿಗಳಾಗಿ ಮುಂದುವರಿಯುವಂತೆ ನಿಯಮ ರೂಪಿಸಿಕೊಂಡಿದ್ದಾರೆ ಎಂದು ಹಿರಿಯ ವಕೀಲ ಗೋಪಾಲ್ ಶಂಕರನಾರಾಯಣನ್ ನ್ಯಾಯಾಲಯದ ಗಮನಕ್ಕೆ ತಂದರು.

ಕಳೆದ 12 ವರ್ಷಗಳಿಂದ ಮನನ್ ಕುಮಾರ್ ಮಿಶ್ರಾ ಅವರೇ ಬಿಸಿಐ ಅಧ್ಯಕ್ಷರಾಗಿ ಮುಂದುವರಿಯುತ್ತಿದ್ದು, ಇದು ಅಧಿಕಾರದ ಕೇಂದ್ರೀಕರಣವಾಗಿದೆ ಎಂದು ವಕೀಲೆ ಶೋಭಾ ಗುಪ್ತಾ ವಾದಿಸಿದರು. ನಿಯಮಗಳ ಪ್ರಕಾರ ಅಧ್ಯಕ್ಷರ ಅಧಿಕಾರಾವಧಿ ಕೇವಲ ಎರಡು ವರ್ಷಗಳಾಗಿದ್ದರೂ, 2025ರ ಏಪ್ರಿಲ್‌ನಲ್ಲಿ ಹೊರಡಿಸಿದ ಅಧಿಸೂಚನೆ ಮೂಲಕ ಅದನ್ನು 2030ರವರೆಗೆ ವಿಸ್ತರಿಸಲಾಗಿದೆ. ಜೊತೆಗೆ ಬಿಸಿಐನ ಅಚ್ಚರಿ ಮೂಡಿಸುವ ಕೋಟ್ಯಂತರ ರೂಪಾಯಿ ಖರ್ಚು-ವೆಚ್ಚಗಳ ಬಗ್ಗೆಯೂ ವಿಚಾರಣೆ ವೇಳೆ ತೀವ್ರ ಕಳವಳ ವ್ಯಕ್ತವಾಯಿತು.

ಈ ಆರೋಪಗಳ ಸುತ್ತ ನಡೆಯುತ್ತಿರುವ ನೆರಳು ಯುದ್ಧಕ್ಕೆ ಉತ್ತೇಜನ ನೀಡಲು ನ್ಯಾಯಾಲಯ ಬಯಸುವುದಿಲ್ಲ. ಆದರೆ ಬಿಸಿಐನ ಸಾಂಸ್ಥಿಕ ಸಮಗ್ರತೆ ಮತ್ತು ವಿಶ್ವಾಸಾರ್ಹತೆಯನ್ನು ಕಾಪಾಡುವ ನಿಟ್ಟಿನಲ್ಲಿ ಮಧ್ಯಪ್ರವೇಶ ಮಾಡುವುದು ಅನಿವಾರ್ಯವಾಗಿದೆ ಎಂದು ಪೀಠದ ಭಾಗವಾಗಿದ್ದ ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅಭಿಪ್ರಾಯಪಟ್ಟರು. ಹೀಗಾಗಿಯೇ ಬಿಸಿಐನ ಪದನಿಮಿತ್ತ ಸದಸ್ಯರಾಗಿರುವ ಉನ್ನತ ಕಾನೂನು ಅಧಿಕಾರಿಗಳನ್ನು (ಎಜಿ ಮತ್ತು ಎಸ್‌ಜಿ) ಪ್ರಮುಖ ನಿರ್ಧಾರಗಳ ಪ್ರಕ್ರಿಯೆಯಲ್ಲಿ ಕಡ್ಡಾಯವಾಗಿ ಸೇರಿಸಿಕೊಳ್ಳುವಂತೆ ಸೂಚಿಸಲಾಗಿದೆ ಎಂದರು. ಇತ್ತೀಚೆಗಷ್ಟೇ ಹೈದರಾಬಾದ್‌ನ ನಲ್ಸಾರ್ ಕಾನೂನು ವಿವಿಯ 2026ರ ಬ್ಯಾಚ್ ವಿದ್ಯಾರ್ಥಿಗಳ ವೃತ್ತಿಪರ ನೋಂದಣಿಯನ್ನು ರದ್ದುಗೊಳಿಸಲು ಬಿಸಿಐ ಮುಂದಾಗಿ ತೀವ್ರ ಟೀಕೆಗೆ ಗುರಿಯಾಗಿತ್ತು. ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದಕ್ಕೆ ಅವರನ್ನು ಪರಾವಲಂಬಿಗಳು ಎಂದು ಕೀಳಾಗಿ ನಿಂದಿಸಲಾಗಿತ್ತು. ಅಂತಿಮವಾಗಿ ದೇಶಾದ್ಯಂತ ವಿರೋಧ ವ್ಯಕ್ತವಾದಾಗ ಈ ವಿವಾದದಲ್ಲಿ ಮಿಶ್ರಾ ಅವರು ಕ್ಷಮೆಯಾಚಿಸಬೇಕಾಯಿತು ಎಂಬ ಅಂಶವನ್ನೂ ನ್ಯಾಯಾಲಯದಲ್ಲಿ ಉಲ್ಲೇಖಿಸಲಾಯಿತು.

ದೇಶದ ಎಲ್ಲ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ಮುಂದಿನ 15 ದಿನಗಳೊಳಗೆ ತಮ್ಮ ರಾಜ್ಯ ಬಾರ್ ಕೌನ್ಸಿಲ್‌ಗಳಿಗೆ ಇಬ್ಬರು ಮಹಿಳಾ ಸದಸ್ಯರನ್ನು ನಾಮನಿರ್ದೇಶನ ಮಾಡಬೇಕು. ತದನಂತರ ಒಂದು ತಿಂಗಳೊಳಗೆ ರಾಜ್ಯ ಬಾರ್ ಕೌನ್ಸಿಲ್‌ಗಳು ತಮ್ಮ ಹೊಸ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಬಿಸಿಐ ಪ್ರತಿನಿಧಿಯನ್ನು ಅಧಿಕೃತವಾಗಿ ಚುನಾವಣೆ ಮೂಲಕ ಆಯ್ಕೆ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ನಿರ್ದೇಶನ ನೀಡುವ ಮೂಲಕ ಬಾರ್ ಕೌನ್ಸಿಲ್‌ನ ಪಾರದರ್ಶಕತೆಗೆ ಮುನ್ನುಡಿ ಬರೆದಿದೆ.

# ಮಲ ಹೊರುವ ಪದ್ಧತಿ ವಿರೋಧಿಸಿ ವರ್ಷಪೂರ್ತಿ ಅಭಿಯಾನ

**ನವದೆಹಲಿ,ಸೆ.3:** ದೇಶದಲ್ಲಿ ಇಂದಿಗೂ ಮುಂದುವರಿದಿರುವ ಅಮಾನವೀಯ ಪದ್ಧತಿ ಮಲ ಹೊರುವ ಪದ್ಧತಿ ಅಂದರೆ ಕೈಯಿಂದ ಶೌಚಾಲಯ ಸ್ವಚ್ಛಗೊಳಿಸುವುದು ಮತ್ತು ಒಣ ಶೌಚಾಲಯಗಳನ್ನು ಸ್ವಚ್ಛಗೊಳಿಸುವುದು. ಆದರೆ ಕೇಂದ್ರದ ಮೋದಿ ಸರ್ಕಾರ ಈ ಪದ್ಧತಿ ಇಂದು ಆಚರಣೆಯಲ್ಲಿಲ್ಲ ಎಂದು ಹೇಳಿಕೊಳ್ಳುತ್ತಿದೆ. ಇಂತಹ ಸಂದರ್ಭದಲ್ಲಿ ಈ ಪದ್ಧತಿ ನಿರ್ಮೂಲನೆಗೆ ಆಗ್ರಹಿಸಿ ಸಫಾಯಿ ಕರ್ಮಚಾರಿ ಆಂದೋಲನ (ಎಸ್‌ಕೆಎ) ಎಂಬ ವರ್ಷಪೂರ್ತಿ ರಾಷ್ಟ್ರೀಯ ಅಭಿಯಾನಕ್ಕೆ ಚಾಲನೆ ನೀಡಿದೆ.

ಈ ಪದ್ಧತಿಯನ್ನು ರಾಷ್ಟ್ರೀಯ ಅವಮಾನ ಎಂದು ಕರೆಯಲಾಗಿದ್ದು, ಇದನ್ನು ಕ್ಷಿಪ್ರಾಗತಿಯಲ್ಲಿ ಕೊನೆಗಾಣಿಸಬೇಕು ಎಂದು ಸಂಘಟನೆ ಒತ್ತಾಯಿಸಿದೆ. ದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ದೇಶದ ವಿವಿಧ ರಾಜ್ಯಗಳಿಂದ ಬಂದಿದ್ದ ನೂರಾರು ಮಹಿಳಾ ಸಫಾಯಿ ಕರ್ಮಚಾರಿಗಳು, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳು ಹಾಗೂ ಮಾನವ ಹಕ್ಕುಗಳ ಹೋರಾಟಗಾರರು ಭಾಗವಹಿಸಿದ್ದರು.

ದೇಶದಲ್ಲಿ ಮಲ ಹೊರುವ ಪದ್ಧತಿಯೇ ಇಲ್ಲ ಎಂದು ಸರ್ಕಾರ ಸಂಸತ್ತಿನಲ್ಲಿ ಹೇಳಿಕೆ ನೀಡುತ್ತಿದೆ. ಆದರೆ, ನಾವು ಇಂದಿಗೂ ಪ್ರತಿದಿನ ಒಣ ಶೌಚಾಲಯಗಳನ್ನು ಸ್ವಚ್ಛಗೊಳಿಸಲು ಬಲವಂತಕ್ಕೊಳಗಾಗುತ್ತಿದ್ದೇವೆ. ಈ ಅಸ್ಪೃಶ್ಯತೆ ಮತ್ತು ಗುಲಾಮಗಿರಿಯಿಂದ ನಮಗೆ ಎಂದಿಗೆ ಮುಕ್ತಿ ಎಂದು ಸಫಾಯಿ ಕರ್ಮಚಾರಿ ಆಂದೋಲನದ ರಾಷ್ಟ್ರೀಯ ಸಂಚಾಲಕ ಬೆಜ್ವಾಡ ವಿಲ್ಸನ್ ಪ್ರಕಟಣೆಯಲ್ಲಿ ಪ್ರಶ್ನಿಸಿದ್ದಾರೆ.

# ಪಂಜಾಬ್ ಎಸ್‌ಐಆರ್ ರಾಘವ್ ಛಡ್ಡಾ ಹೆಸರು ಸ್ಥಳಾಂತರ

**ಅಮೃತಸರ, ಸೆ.3:** ಪಂಜಾಬ್‌ನ ಕರಡು ಮತದಾರರ ಪಟ್ಟಿಯಿಂದ ತಮ್ಮ ಹೆಸರನ್ನು ಸ್ಥಳಾಂತರಗೊಳಿಸಿದ ವಿಚಾರಕ್ಕೆ ಸಂಬಂಧಿಸಿದಂತೆ ಆಮ್ ಆದ್ಮಿ ಪಕ್ಷದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ರಾಜ್ಯಸಭಾ ಸದಸ್ಯ ರಾಘವ್ ಛಡ್ಡಾ, ನಾನು ಪಕ್ಷ ತೊರೆದಿದ್ದಕ್ಕೆ ಸೇಡಿನ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ.2022ರಲ್ಲಿ ಆಮ್ ಆದ್ಮಿ ಪಕ್ಷದ ಅಭ್ಯರ್ಥಿಯಾಗಿ ಪಂಜಾಬ್‌ನಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದ ರಾಘವ್ ಛಡ್ಡಾ, ಕಳೆದ ಏಪ್ರಿಲ್ ತಿಂಗಳಿನಲ್ಲಿ ಅವರು ಆಪ್‌ಗೆ ಅಧಿಕೃತವಾಗಿ ರಾಜೀನಾಮೆ ನೀಡಿ ಬಿಜೆಪಿಗೆ ಸೇರ್ಪಡೆಯಾಗಿದ್ದರು. ಪಕ್ಷಾಂತರ ಮಾಡಿದ ಕೆಲವೇ ತಿಂಗಳುಗಳಲ್ಲಿ ರಾಜ್ಯದ ಮತದಾರರ ಪಟ್ಟಿಯಿಂದಲೇ ಅವರ ಹೆಸರನ್ನು ಕೈಬಿಟ್ಟಿರುವುದು ಭಾರೀ ರಾಜಕೀಯ ವಾಕ್ಸಮರಕ್ಕೆ ಕಾರಣವಾಗಿದೆ.

ಚುನಾವಣಾ ಆಯೋಗವು ಇತ್ತೀಚೆಗೆ ಕೈಗೊಂಡಿದ್ದ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯ ಅಡಿಯಲ್ಲಿ ಪಂಜಾಬ್‌ನ ಕರಡು ಮತದಾರರ ಪಟ್ಟಿಯನ್ನು ಪರಿಷ್ಕರಿಸಲಾಗಿದೆ. ಆಗಸ್ಟ್ 13ರಂದು ಪ್ರಕಟವಾದ ಗೈರುಹಾಜರಿ, ಸ್ಥಳಾಂತರಗೊಂಡ, ಮೃತಪಟ್ಟ ಮತ್ತು ನಕಲಿ ಮತದಾರರ (ಎಎಸ್ ಡಿಡಿ) ಪಟ್ಟಿಯಲ್ಲಿ ಛಡ್ಡಾ ಅವರ ಹೆಸರಿದ್ದು, ಶಾಶ್ವತವಾಗಿ ಸ್ಥಳಾಂತರಗೊಂಡಿದ್ದಾರೆ ಎಂಬ ಕಾರಣವನ್ನು ನಮೂದಿಸಿ ಅವರ ಹೆಸರನ್ನು ಅಧಿಕೃತವಾಗಿ ಡಿಲೀಟ್ ಮಾಡಲಾಗಿದೆ. ಈ ಕುರಿತು ಆಕ್ರೋಶ ವ್ಯಕ್ತಪಡಿಸಿರುವ ರಾಘವ್ ಛಡ್ಡಾ, ನಾನು ರಾಷ್ಟ್ರೀಯ ಪಕ್ಷವಾದ ಬಿಜೆಪಿಗೆ ಸೇರ್ಪಡೆಯಾದಾಗಿನಿಂದ ಆಪ್ ನಾಯಕರು ಹತಾಶರಾಗಿದ್ದಾರೆ. ಆಡಳಿತ ಯಂತ್ರವನ್ನು ದುರ್ಬಳಕೆ ಮಾಡಿಕೊಂಡು, ಉದ್ದೇಶಪೂರ್ವಕವಾಗಿ ನನ್ನ ವಿರುದ್ಧ ಸೇಡು ತೀರಿಸಿಕೊಳ್ಳುವ ಯತ್ನವಾಗಿ ಈ ಕೃತ್ಯ ಎಸಗಲಾಗಿದೆ. ಮತದಾರರ ಪಟ್ಟಿಯಿಂದ ನನ್ನ ಹೆಸರು ತೆಗೆದುಹಾಕಿರುವುದು ಆಪ್‌ನ ಹತಾಶೆಯ ಪ್ರತೀಕವಷ್ಟೇ ಎಂದು ವಾಗ್ದಾಳಿ ನಡೆಸಿದ್ದಾರೆ.

# ಸ್ಟಾಲಿನ್‌ಗೆ ಶಾಕ್: ವಿವಿಪ್ಯಾಟ್ ಎಣಿಕೆ ಕೋರಿದ್ದ ಅರ್ಜಿ ವಜಾ



**ಚೆನ್ನೈ, ಸೆ.3:** ನಾಲ್ಕು ತಿಂಗಳ ಹಿಂದೆ ನಡೆದ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಕೊಳತ್ತೂರು ಕ್ಷೇತ್ರದಲ್ಲಿ ಟಿವಿಕೆ ಅಭ್ಯರ್ಥಿ ವಿಎಸ್ ಬಾಬು ವಿರುದ್ಧ ಆಘಾತಕಾರಿ ಸೋಲು ಅನುಭವಿಸಿದ್ದ ಮಾಜಿ ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಅವರಿಗೆ ಮದ್ರಾಸ್ ಹೈಕೋರ್ಟ್‌ನಲ್ಲಿ ಗುರುವಾರ ದೊಡ್ಡ ಹಿನ್ನಡೆಯುಂಟಾಗಿದೆ. ಕೊಳತ್ತೂರು ಕ್ಷೇತ್ರದಲ್ಲಿ ಶೇ.100 ರಷ್ಟು ವಿವಿಪ್ಯಾಟ್ ಚೀಟಿಗಳನ್ನು ಎಣಿಕೆ ಮಾಡಬೇಕು, ವಿ ಎಸ್ ಬಾಬು ಆಯ್ಕೆಯನ್ನು ರದ್ದುಗೊಳಿಸಬೇಕು ಹಾಗೂ ತಮ್ಮನ್ನು ವಿಜೇತ ಅಭ್ಯರ್ಥಿ ಎಂದು ಘೋಷಿಸಬೇಕು ಎಂದು ಕೋರಿ ಸ್ಟಾಲಿನ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಕೊಳತ್ತೂರು ಕ್ಷೇತ್ರದಲ್ಲಿ ಟಿವಿಕೆ ಅಭ್ಯರ್ಥಿ ವಿ ಎಸ್ ಬಾಬು ಅವರು 82,997 ಮತಗಳನ್ನು ಪಡೆದರೆ, ಸ್ಟಾಲಿನ್ 74,202 ಮತಗಳನ್ನು ಗಳಿಸಲಷ್ಟೇ ಶಕ್ತರಾಗಿದ್ದರು. ಈ ಮೂಲಕ ಬಾಬು ಅವರು 8,795 ಮತಗಳ ಅಂತರದಿಂದ ಗೆಲುವು ಸಾಧಿಸಿದರು. 2011ರಲ್ಲಿ ಕ್ಷೇತ್ರ ರಚನೆಯಾದಂದಿನಿಂದ ಸತತ ಮೂರು ಚುನಾವಣೆಗಳಲ್ಲಿ ಜಯಗಳಿಸಿದ್ದ ಸ್ಟಾಲಿನ್, ಈ ಬಾರಿ ಎರಡನೇ ಸ್ಥಾನಕ್ಕೆ ಕುಸಿದರು.

ಸ್ಟಾಲಿನ್ ಅವರ ರಿಟ್ ಅರ್ಜಿಯ ಅರ್ಹತೆಯನ್ನು ಪ್ರಶ್ನಿಸಿದ್ದ ಚುನಾವಣಾ ಆಯೋಗವು, ಚುನಾವಣಾ ಫಲಿತಾಂಶವನ್ನು ಜನಪ್ರತಿನಿಧಿ ಕಾಯ್ದೆಯಡಿಯ ಚುನಾವಣಾ ಅರ್ಜಿಯ ಮೂಲಕವೇ ಪ್ರಶ್ನಿಸಬೇಕು ಮತ್ತು ನಿಗದಿತ ಕಾಲಮಿತಿಯೊಳಗೆ ಆ ಮಾರ್ಗವನ್ನೇ ಅನುಸರಿಸಬೇಕಿತ್ತು ಎಂದು ವಾದಿಸಿತ್ತು.

ಆದರೆ ಸ್ಟಾಲಿನ್ ಪರ ವಕೀಲರು, ಮೇ 4 ರಂದು ಫಲಿತಾಂಶ ಪ್ರಕಟವಾದ ತಕ್ಷಣ (ಮೇ 7 ರಂದು) 14 ಇವಿಎಂ ಸೆಟ್‌ಗಳ ಪರಿಶೀಲನೆಗೆ ಅರ್ಜಿ ಸಲ್ಲಿಸಿದ್ದರೂ, ಚುನಾವಣಾ ಆಯೋಗವು ಪರಿಶೀಲನೆ ನಡೆಸಲು ಜುಲೈ 29 ರವರೆಗೆ ವಿಳಂಬ ಮಾಡಿತು. ಈ ವಿಳಂಬದ ಕಾರಣದಿಂದಾಗಿ ಕಾನೂನಾತ್ಮಕ ಕಾಲಮಿತಿಯೊಳಗೆ ಚುನಾವಣಾ ಅರ್ಜಿ ಸಲ್ಲಿಸಲು ಸಾಧ್ಯವಾಗಲಿಲ್ಲ ಹಾಗೂ ಇವಿಎಂ ಪರಿಶೀಲನೆ ವೇಳೆ ತಾಂತ್ರಿಕ ದೋಷಗಳು ಮತ್ತು ಅಕ್ರಮಗಳು ಕಂಡುಬಂದಿದ್ದರೂ ಜಿಲ್ಲಾ ಚುನಾವಣಾಧಿಕಾರಿ ಅದನ್ನು ಪರಿಗಣಿಸದೆ ಯಾಂತ್ರಿಕವಾಗಿ ಆದೇಶ ಹೊರಡಿಸಿದ್ದಾರೆ ಎಂದು ಹೈಕೋರ್ಟ್ ಮೆಟ್ಟಿಲೇರಿದ್ದರು.

# ಎಂಇಟಿ ಸಂಸ್ಥೆಯ ಶೈಕ್ಷಣಿಕ ಸಲಹಾ ಮಂಡಳಿ ಸದಸ್ಯರಾಗಿ ಸುನೀಲ್ ಲೋಬೊ ನೇಮಕ



**ಮುಂಬಯಿ, ಸೆ.3:** ರಾಷ್ಟ್ರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಲ್ಲೊಂದಾದ ಬೃಹನ್ಮುಂಬಯಿಯಲ್ಲಿನ ಎಂಇಟಿ ಇನ್‌ಸ್ಟಿಟ್ಯೂಟ್ ಆಫ್ ಪೋಸ್ಟ್ ಗ್ರಾಜ್ಯುಯೇಟ್ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್ ಸಂಸ್ಥೆಯ ಶೈಕ್ಷಣಿಕ ಸಲಹಾ ಮಂಡಳಿಯ ಸದಸ್ಯರಾಗಿ ಮಂಗಳೂರು ಮೂಲದ ಸುನೀಲ್ ಲೋಬೊ ಅವರನ್ನು 2026-27ನೇ ಶೈಕ್ಷಣಿಕ ವರ್ಷಗಳ ಜಾರಿಗೆ ಬರುವಂತೆ ಮೂರು ವರ್ಷಗಳ ಅವಧಿಗೆ ನೇಮಕಾತಿ ಮಾಡಿದೆ.


ಕರ್ನಾಟಕ ಕರಾವಳಿಯ ಮಂಗಳೂರು ದೇರಬೈಲ್ ಅಲ್ಲಿನ ಹ್ಯೂಬರ್ಟ್ ಲೋಬೊ (ದಿವಂಗತರು) ಮತ್ತು ಬೆಳ್ತಂಗಡಿಯ ಸಿಲಿಯಾ ಲೋಬೊ (ನೀ ಸಿಕ್ವೇರಾ) ಅವರ ಸುಪುತ್ರರಾಗಿದ್ದು, ನಾಡಿನ ಹೆಸರಾಂತ ಧುರೀಣ ಎ.ಎಲ್ ಸಿಕ್ವೇರಾ ಅವರ ಮೊಮ್ಮಗ. ದೋಹಾ ಬ್ಯಾಂಕ್‌ನ ಭಾರತ ವಿಭಾಗದ ಕಾರ್ಪೊರೇಟ್ ಬ್ಯಾಂಕಿಂಗ್ ಮುಖ್ಯಸ್ಥರಾದ ಸುನೀಲ್ ಅವರ ವೃತ್ತಿಪರ ಅನುಭವ, ಆಡಳಿತಾತ್ಮಕ ಸಾಮರ್ಥ್ಯ ಮತ್ತು ಸಾಮಾಜಿಕ ಸೇವೆಯ ಹಿನ್ನೆಲೆಯು ಎಂಇಟಿ ಸಂಸ್ಥೆಯ ಶೈಕ್ಷಣಿಕ ಸಲಹಾ ಮಂಡಳಿಗೆ ಮಹತ್ವದ ಕೊಡುಗೆ ನೀಡಲಿದೆ ಎಂದು ನಿರೀಕ್ಷಿಸಲಾಗಿದೆ.

ಕಾರ್ಪೊರೇಟ್ ಹಾಗೂ ಇನ್ವೆಸ್ಟ್‌ಮೆಂಟ್ ಬ್ಯಾಂಕಿಂಗ್, ವೆಲ್ತ್ ಮ್ಯಾನೇಜ್‌ಮೆಂಟ್ ಮತ್ತು ಬ್ಯಾಂಕಿಂಗ್ ಕಾರ್ಯಾಚರಣೆ ಕ್ಷೇತ್ರಗಳಲ್ಲಿ 25ಕ್ಕೂ ಹೆಚ್ಚು ವರ್ಷಗಳ ಅನುಭವ ಹೊಂದಿರುವ ಸುನಿಲ್ ಲೋಬೊ ಅವರ ದೀರ್ಘಕಾಲದ ಬ್ಯಾಂಕಿಂಗ್ ಅನುಭವ ಹಾಗೂ ಸಂಸ್ಥೆ ಮತ್ತು ಸಮಾಜದ ಅಭಿವೃದ್ಧಿಗೆ ನೀಡುತ್ತಿರುವ ಕೊಡುಗೆಯನ್ನು ಪರಿಗಣಿಸಿ ಈ ಜವಾಬ್ದಾರಿಯನ್ನು ನೀಡಲಾಗಿದೆ. ಸಂಸ್ಥೆಯ ಪರಿಣಾಮಕಾರಿ ಆಡಳಿತ, ಶೈಕ್ಷಣಿಕ ಹಾಗೂ ಸಾಂಸ್ಥಿಕ ಅಭಿವೃದ್ಧಿಗೆ ಅವರು ತಮ್ಮ ಅನುಭವ ಮತ್ತು ಮಾರ್ಗದರ್ಶನ ನೀಡಲಿದ್ದಾರೆ ಎನ್ನಲಾಗಿದೆ.

ಸಾಮಾಜಿಕ ಹಾಗೂ ಸಮುದಾಯ ಕ್ಷೇತ್ರದಲ್ಲೂ ಸಕ್ರಿಯರಾಗಿರುವ ಅವರು ಕೆನರಾ ಕ್ಯಾಥೋಲಿಕ್ ಅಸೋಸಿಯೇಶನ್ (ಕೆಸಿಎ) ಬಾಂದ್ರಾ ಸಂಸ್ಥೆಯ ಅಧ್ಯಕ್ಷರಾಗಿ ವಿವಿಧ ಶೈಕ್ಷಣಿಕ, ವೈದ್ಯಕೀಯ, ಸಮುದಾಯ ಮತ್ತು ಉದ್ಯಮಶೀಲತಾ ಕಾರ್ಯಕ್ರಮಗಳಿಗೆ ನೇತೃತ್ವ ನೀಡುತ್ತಿದ್ದಾರೆ. ಸುನಿಲ್ ಅವರು ಬಾಂಬೇ ವೈಎಂಸಿಯ 42ನೇ ಅಧ್ಯಕ್ಷರಾಗಿ 2023-24ರ ಅವಧಿಯಲ್ಲಿ ಸೇವೆ ಸಲ್ಲಿಸಿದ್ದು, 2009ರಿಂದ ಸಂಸ್ಥೆಯೊಂದಿಗೆ ವಿವಿಧ ಜವಾಬ್ದಾರಿಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಇದಲ್ಲದೆ, ವಿವಿಧ ಶೈಕ್ಷಣಿಕ ಹಾಗೂ ಸಾಮಾಜಿಕ ಸಂಸ್ಥೆಗಳಲ್ಲಿ ಟ್ರಸ್ಟಿಯಾಗಿ ಹಾಗೂ ವಿಲ್ಲಿಂಗ್‌ಟನ್ ಕ್ಯಾಥೊಲಿಕ್ ಜಿಮ್ಖಾನಾ, ದಿ. ಕ್ಯಾಥೊಲಿಕ್ ಜಿಮ್ಖಾನಾ ಲಿಮಿಟೆಡ್, ಮರೀನ್ ಡ್ರೈವ್ ಮತ್ತು ಬಾಂದ್ರಾ ಜಿಮ್ಖಾನಾ ಮುಂತಾದ ಸಂಸ್ಥೆಗಳಲ್ಲಿ ಆಡಳಿತಾತ್ಮಕ ಜವಾಬ್ದಾರಿಗಳನ್ನು ನಿರ್ವಹಿಸಿರುವರು.

## ಅಂತಾರಾಷ್ಟ್ರೀಯ ಶೈಕ್ಷಣಿಕ-ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ

# ಉಜಿರೆಯಲ್ಲಿ ಜಪಾನ್ ವಿದ್ಯಾರ್ಥಿಗಳ ಅಧ್ಯಯನ



**ಮುಂಬೈ, ಸೆ.3:** ಅಂತಾರಾಷ್ಟ್ರೀಯ ಶೈಕ್ಷಣಿಕ-ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದಡಿಯಲ್ಲಿ ಜಪಾನ್‌ನ 6 ವಿದ್ಯಾರ್ಥಿಗಳು ಈಗಾಗಲೇ ಉಜಿರೆಯ ಎಸ್.ಡಿ.ಎಂ. ಕಾಲೇಜಿಗೆ ಆಗಮಿಸಿ ವಿವಿಧ ಸಂಸ್ಥೆಗಳಿಗೆ ಭೇಟಿ ನೀಡಿ ಮಾಹಿತಿ ಕಲೆ ಹಾಕಿದರು.

ಪ್ರಥಮವಾಗಿ ಧರ್ಮಸ್ಥಳಕ್ಕೆ ಭೇಟಿ ನೀಡಿದ ತಂಡ ಡಿ.ವೀರೇಂದ್ರ ಹೆಗ್ಗಡೆಯವರು ಮತ್ತು ಹೇಮಾವತಿ ಹೆಗ್ಗಡೆಯವರನ್ನು ಭೇಟಿಯಾಗಿ ಆಶೀರ್ವಾ ದಗಳೊಂದಿಗೆ ಮಾಹಿತಿ, ಮಾರ್ಗದರ್ಶನ ಪಡೆದರು.

ದೇವಸ್ಥಾನ, ಮಂಜೂಷಾ ಮ್ಯೂಸಿಯಂ, ವಿಂಟೇಜ್ ಕಾರ್‌ಗಳ ಸಂಗ್ರಹಾಲಯ, ಅನ್ನಪೂರ್ಣ, ಬಾಹುಬಲಿಬೆಟ್ಟ, ಬಸದಿಯನ್ನು ಕುತೂಹಲದಿಂದ ವೀಕ್ಷಿಸಿದರು. ಇಬ್ಬರು ವಿದ್ಯಾರ್ಥಿಗಳಾದ ಗೊಟೊ ರೈಯೋಹೆ ಮತ್ತು ಇಕೆಡಾ ಅಕಾರಿ ಇನ್ನು ಒಂದು ತಿಂಗಳು ಉಜಿರೆಯ ಎಸ್.ಡಿ.ಎಂ. ಕಾಲೇಜಿನ ಪತ್ರಿಕೋದ್ಯಮ ವಿಭಾಗದಲ್ಲಿ ಒಂದು ತಿಂಗಳು ವಿಶೇಷ ಅಧ್ಯಯನ ನಡೆಸಲಿದ್ದಾರೆ.

ಎಸ್.ಡಿ.ಎಂ. ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿಗಳಾದ ಡಿ.ಹರ್ಷೇಂದ್ರ ಕುಮಾರ್ ಮತ್ತು ಪ್ರೊ.ಎಸ್. ಸತೀಶ್ಚಂದ್ರ, ಎಸ್.ಡಿ.ಎಂ. ಕಾಲೇಜಿನ ಪ್ರಾಂಶುಪಾಲ ಪ್ರೊ. ವಿಶ್ವನಾಥ ಪಿ. ಮತ್ತು ಸಿ.ಇ.ಓ. ಪೂರನ್‌ವರ್ಮ, ಮನೋರಮಾ ಭಟ್ ಜಪಾನ್ ವಿದ್ಯಾರ್ಥಿಗಳಿಗೆ ಪೂರಕ ಮಾಹಿತಿ, ಮಾರ್ಗದರ್ಶನ ನೀಡಿದರು.

ಎಸ್.ಡಿ.ಎಂ. ಕಾಲೇಜಿನ ವಾಣಿಜ್ಯ ವಿಭಾಗದ ಉಪನ್ಯಾಸಕಿ ಮಾಲಿನಿ ಅಂಚನ್ ಮತ್ತು ವಿದ್ಯಾರ್ಥಿಗಳಾದ ಕು. ಸಂಜನಾ ಮತ್ತು ಕು. ಸಿಂಚನಾ ಜಪಾನ್‌ನಲ್ಲಿ 11 ದಿನಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಇಲ್ಲಿನ ಯಕ್ಷಗಾನ, ಜಾನಪದ ಕಲೆಗಳು ಹಾಗೂ ಜೀವನಶೈಲಿ ಮತ್ತು ಸಂಸ್ಕೃತಿಯ ಪರಿಚಯ ಮಾಡಿಕೊಟ್ಟಿದ್ದರು.

# ಶಿಕ್ಷಕರು ಪ್ರೇರಣಾಶಕ್ತಿಯ ಶಾಶ್ವತತೆ ರೂಪಿಸುವ ಸಹೃದಯಿಗಳು

## ಶಿಕ್ಷಕರ ದಿನಾಚರಣೆ ವೇಳೆ ಅಧ್ಯಾಪಕರಿಗೆ ಅಭಿನಂದಿಸಿದ ಮೇಡಂ ಗ್ರೇಸ್ ಪಿಂಟೋ




**ಮುಂಬಯಿ, ಸೆ.3:** ಭಾರತದ ಮೊದಲ ಉಪರಾಷ್ಟ್ರಪತಿ ಡಾ| ಎಸ್.ರಾಧಾಕೃಷ್ಣನ್ ಅವರ ಜನ್ಮದಿನವನ್ನು ಶಿಕ್ಷಕರ ದಿನಾಚರಣೆಯಾಗಿ ಆಚರಿಸುವ ಸಂದರ್ಭದಲ್ಲಿ, ಬೋಧನಾ ವೃತ್ತಿಯ ಘನತೆ, ಹೊಣೆಗಾರಿಕೆ ಮತ್ತು ಅಪಾರ ಮಹತ್ವವನ್ನು ನಾವು ಸ್ಮರಿಸಿಕೊಳ್ಳುವುದು ಅತ್ಯಗತ್ಯ. ಅವರ ಜೀವನ ಮತ್ತು ಆದರ್ಶಗಳು ಶಿಕ್ಷಕರನ್ನು ಕೇವಲ ಶಿಕ್ಷಣ ನೀಡುವ ವ್ಯಕ್ತಿಗಳಾಗಿಸದೆ, ವ್ಯಕ್ತಿತ್ವ ಹಾಗೂ ಸಮಾಜವನ್ನು ರೂಪಿಸುವ ಶಕ್ತಿಶಾಲಿ ಪ್ರೇರಣಾಶಕ್ತಿ ಆಗಿ ಗುರುತಿಸಲು ನಮಗೆ ಸ್ಫೂರ್ತಿ ನೀಡುತ್ತದೆ.

ಹೆನ್ರಿ ಆಡಮ್ಸ್ ಅವರು ಶಿಕ್ಷಕರ ಪ್ರಭಾವ ಶಾಶ್ವತತೆಯ ವರೆಗೆ ಇರುತ್ತದೆ, ಅವರ ಪ್ರಭಾವ ಎಲ್ಲಿ ಕೊನೆಗೊಳ್ಳುತ್ತದೆ ಎಂಬುದನ್ನು ಅವರು ಎಂದಿಗೂ ತಿಳಿಯಲಾರರು ಎಂದು ಸೂಕ್ತ ಮತ್ತು ಸೂಕ್ಷ್ಮವಾಗಿ ಹೇಳಿದ್ದಾರೆ. ಪ್ರತಿಯೊಬ್ಬ ಶಿಕ್ಷಕರಿಗೂ ವಹಿಸಲ್ಪಟ್ಟಿರುವ ಅಸಾಧಾರಣ ಹೊಣೆಗಾರಿಕೆ ಮತ್ತು ಸೌಭಾಗ್ಯವನ್ನು ಈ ಮಾತುಗಳು ಪ್ರತಿಬಿಂಬಿಸುತ್ತವೆ. ಶಿಕ್ಷಕರು ನೀಡುವ ಒಂದು ಪಾಠ, ಪ್ರೋತ್ಸಾಹದ ಒಂದು ಮಾತು, ತಾಳ್ಮೆಯ ಒಂದು ನಡೆ ಅಥವಾ ಕರುಣೆಯ ಒಂದು ಕ್ಷಣವು ಯುವ ಮನಸ್ಸಿನ ಮೇಲೆ ಜೀವಮಾನವಿಡೀ ಉಳಿಯುವ ಅಚ್ಚಳಿಯದ ಗುರುತನ್ನು ಮೂಡಿಸಬಲ್ಲದು.

ತಂತ್ರಜ್ಞಾನವು ತನ್ನದೇ ಆದ ಪಾತ್ರವನ್ನು ವಹಿಸುತ್ತಿದ್ದರೂ, ಪ್ರತಿಯೊಬ್ಬ ಮಗುವಿನಲ್ಲೂ ಕುತೂಹಲವನ್ನು ಜಾಗೃತಗೊಳಿಸುವ, ಆತ್ಮವಿಶ್ವಾಸವನ್ನು ಬೆಳೆಸುವ, ಉತ್ತಮ ಗುಣನಡತೆಯನ್ನು ರೂಪಿಸುವ, ಧೈರ್ಯವನ್ನು ತುಂಬುವ ಹಾಗೂ ಹೊಸ ಸಾಧ್ಯತೆಗಳ ಬಾಗಿಲು ತೆರೆಯುವ ಅದ್ಭುತ ಸಾಮರ್ಥ್ಯ ಶಿಕ್ಷಕರಿಗಿದೆ. ಅವರ ಪಾತ್ರವು ಪಠ್ಯಕ್ರಮ ಪೂರ್ಣಗೊಳಿಸುವುದು ಅಥವಾ ವಿದ್ಯಾರ್ಥಿಗಳನ್ನು ಪರೀಕ್ಷೆಗಳಿಗೆ ಸಿದ್ಧಪಡಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಅವರು ನಾಳೆಯ ನಾಗರಿಕರು, ನಾಯಕರು, ನವೋದ್ಯಮಿಗಳು, ಪೋಷಕರು ಹಾಗೂ ಸಮಾಜ ಪರಿವರ್ತನೆಯ ಹರಿಕಾರರನ್ನು ರೂಪಿಸುತ್ತಿದ್ದಾರೆ. ಶಿಕ್ಷಕರ ನಿಜವಾದ ಸಾಧನೆಯನ್ನು ಕೇವಲ ಅಂಕಗಳು ಅಥವಾ ಶೈಕ್ಷಣಿಕ ಫಲಿತಾಂಶಗಳಿಂದ ಅಳೆಯಲು ಸಾಧ್ಯವಿಲ್ಲ. ಅವರು ವಿದ್ಯಾರ್ಥಿಗಳಲ್ಲಿ ಮೂಡಿಸುವ ಧೈರ್ಯ, ಬಿತ್ತುವ ಮೌಲ್ಯಗಳು, ಪೋಷಿಸುವ ಕನಸುಗಳು ಹಾಗೂ ಬೆಳೆಸುವ ಆತ್ಮವಿಶ್ವಾಸದಲ್ಲಿದೆ. ಒಂದು ಮಗು ಕಲಿತ ಪಾಠ ಅಥವಾ ಸೂತ್ರವನ್ನು ಮರೆತು ಬಿಡಬಹುದು. ಆದರೆ ತನ್ನ ಮೇಲೆ ನಂಬಿಕೆ ಇಟ್ಟ, ಪ್ರೋತ್ಸಾಹಿಸಿದ ಮತ್ತು ತನ್ನಲ್ಲಿರುವ ಸಾಮರ್ಥ್ಯವನ್ನು ಅರಿತುಕೊಳ್ಳಲು ನೆರವಾದ ಶಿಕ್ಷಕರನ್ನು ಅದು ಎಂದಿಗೂ ಮರೆಯಾಗದು.

ಶಿಕ್ಷಕರ ದಿನದಂದು, ಕೇವಲ ತಮ್ಮ ಮಾತುಗಳಿಂದ ಅಲ್ಲದೆ, ತಮ್ಮ ವ್ಯಕ್ತಿತ್ವ, ನಡವಳಿಕೆ ಮತ್ತು ಆದರ್ಶಪ್ರಾಯ ಜೀವನದ ಮೂಲಕ ಮುನ್ನಡೆಸುವ ಎಲ್ಲಾ ಶಿಕ್ಷಕರನ್ನು ಗೌರವಿಸೋಣ. ಅವರ ಪ್ರಭಾವ ತರಗತಿಯ ನಾಲ್ಕು ಗೋಡೆಗಳನ್ನು ಮೀರಿ, ಪೀಳಿಗೆಗಳಿಂದ ಭವಿಷ್ಯದ ತಲೆಮಾರುಗಳಿಗೆ ಹರಡುವ ಸಕಾರಾತ್ಮಕ ಬದಲಾವಣೆಯ ಅಲೆಗಳನ್ನು ಸೃಷ್ಟಿಸುತ್ತದೆ.

ಈ ಮಹತ್ತರ ಹಾಗೂ ಪವಿತ್ರ ಸೇವೆಯನ್ನು ಮುಂದುವರಿಸುತ್ತಿರುವ ಪ್ರತಿಯೊಬ್ಬ ಶಿಕ್ಷಕರಿಗೂ ದೇವರು ಜ್ಞಾನ, ಶಕ್ತಿ, ತಾಳ್ಮೆ ಮತ್ತು ಕೃಪೆಯನ್ನು ಕರುಣಿಸಲಿ. ಯುವ ಜೀವನಗಳನ್ನು ರೂಪಿಸಲು ತಮ್ಮ ಸಮಯ, ಹೃದಯ ಮತ್ತು ಸಮರ್ಪಣೆಯನ್ನು ಅರ್ಪಿಸುವ ಪ್ರತಿಯೊಬ್ಬ ಶಿಕ್ಷಕರಿಗೂ ನಮ್ಮ ಹೃತ್ಪೂರ್ವಕ ಅಭಿವಂದನೆಗಳು.

ಪ್ರತಿಯೊಬ್ಬ ಶಿಕ್ಷಕರ ಕೊಡುಗೆ ಕೇವಲ ಶಿಕ್ಷಣಕ್ಕೆ ಮಾತ್ರವಲ್ಲ ಮನಸ್ಸುಗಳನ್ನು ರೂಪಿಸುವ, ಕನಸುಗಳನ್ನು ಪೋಷಿಸುವ ಮತ್ತು ಭವಿಷ್ಯವನ್ನು ಕಟ್ಟುವ ಮಹತ್ತರ ಕಾರ್ಯದ ನಿಷ್ಠೆಯ ಕಾಯಕವಾಗಲಿ. ಒಂದೊಂದೂ ಮಗುವಿನ ಮೂಲಕ ಸಲ್ಲಿಸುವ ಅಮೂಲ್ಯ ಸೇವೆಯಾಗಲಿ ಎಂದು ನಾಡಿನ ಎಲ್ಲಾ ಶಿಕ್ಷಕರಿಗೂ ಹೃತ್ಪೂರ್ವಕ ಶಿಕ್ಷಕರ ದಿನಾಚರಣೆಯ ಶುಭಾಶಯಗಳನ್ನು ಕೋರುವೆನು ಎಂದು ರಾಯಾನ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ವ್ಯವಸ್ಥಾಪಕ ನಿರ್ದೇಶಕಿ ಡಾ| (ಮೇಡಂ) ಗ್ರೇಸ್ ಪಿಂಟೋ ತಿಳಿಸಿದರು.

### ಸಾರ್ವಜನಿಕರ ಹಿತಾಸಕ್ತಿ, ಭಾವನೆ ಗೌರವಿಸಿ ನಿರ್ಧಾರ: ಡಿಸಿಎಂ ಡಾ.ಜಿ. ಪರಮೇಶ್ವರ್

# ಜನಾಗ್ರಹಕ್ಕೆ ಮಣಿದ ಸರ್ಕಾರ: ಶೇ.5 ಉದ್ಯಾನವನ ಸಂರಕ್ಷಣೆ ತಿದ್ದುಪಡಿ ವಿಧೇಯಕ ವಾಪಸ್

**ಬೆಂಗಳೂರು,ಸೆ.3:** ರಾಜ್ಯದ ಉದ್ಯಾನ ಭೂಮಿಯ ಕೆಲವು ಭಾಗಗಳನ್ನು ಸಾರ್ವಜನಿಕ ಮೂಲಸೌಕರ್ಯ ಹಾಗೂ ಉಪಯುಕ್ತತೆ ಯೋಜನೆಗಳಿಗೆ ಬಳಸಲು ಅವಕಾಶ ನೀಡುವ ರಾಜ್ಯ ಶಾಸಕಾಂಗವು ಕಳೆದ ವಾರ ಅಂಗೀಕರಿಸಿದ್ದ ಕಾನೂನನ್ನು ಹಿಂಪಡೆಯಲು ರಾಜ್ಯ ಸಚಿವ ಸಂಪುಟ ಸಭೆ ನಿರ್ಧರಿಸಿದೆ.

ಈ ಮಸೂದೆಗೆ ಸಾರ್ವಜನಿಕ ವಲಯ ಮತ್ತು ವಿರೋಧ ಪಕ್ಷಗಳಿಂದ ವ್ಯಾಪಕ ವಿರೋಧ ಎದುರಿಸಿತ್ತು. ಸಂಪುಟ ಸಭೆಯಲ್ಲಿ ಮಸೂದೆಯನ್ನು ವಾಪಸ್ ಪಡೆಯಲು ತೀರ್ಮಾನಿಸಿದೆ.

ರಾಜ್ಯ ವಿಧಾನಸಭೆಯ ಎರಡೂ ಸದನಗಳು ಅಂಗೀಕರಿಸಿದ್ದ ಈ ಮಸೂದೆ, ಕಬ್ಬನ್ ಪಾರ್ಕ್ ಮತ್ತು ಲಾಲ್‌ಬಾಗ್ ಸೇರಿದಂತೆ ಬೆಂಗಳೂರಿನ ಪ್ರಮುಖ ಹಸಿರು ಉದ್ಯಾನಗಳನ್ನು ನಿಯಂತ್ರಿಸುವ 1975ರ ಕರ್ನಾಟಕ ಸರ್ಕಾರಿ ಉದ್ಯಾನಗಳ (ಸಂರಕ್ಷಣೆ) ಕಾಯ್ದೆಯ ತಿದ್ದುಪಡಿಯನ್ನು ಒಳಗೊಂಡಿತ್ತು, ತಿದ್ದುಪಡಿಯ ಪ್ರಕಾರ ಯಾವುದೇ ಉದ್ಯಾನ ಅಥವಾ ಗಾರ್ಡನ್‌ನ ಒಟ್ಟು ವಿಸ್ತೀರ್ಣದಲ್ಲಿ 5 ಪ್ರತಿಶತದಷ್ಟು ಭೂಮಿಯನ್ನು ಸಾರ್ವಜನಿಕ ಮೂಲಸೌಕರ್ಯ ಮತ್ತು ಉಪಯುಕ್ತತೆ ಯೋಜನೆಗಳಿಗೆ ಬಳಸಲು ಅಥವಾ ಹಸ್ತಾಂತರಿಸಲು ಅವಕಾಶ ಇತ್ತು.

ಈ ಮಸೂದೆಯನ್ನು ಸೂಕ್ತ ತಿದ್ದುಪಡಿಯೊಂದಿಗೆ ಮುಂದಿನ ಅಧಿವೇಶದಲ್ಲಿ ಮಂಡಿಸುವುದಾಗಿ



ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ ತಿಳಿಸಿದರು.

ಈ ತಿದ್ದುಪಡಿ ಹೆಬ್ಬಾಳ ಮತ್ತು ಕೇಂದ್ರ ರೇಷ್ಮೆ ಮಂಡಳಿಯನ್ನು ಸಂಪರ್ಕಿಸುವ ಉದ್ದೇಶಿತ ಸುಮಾರು 17 ಕಿ.ಮೀ. ಸುರಂಗ ರಸ್ತೆ ಯೋಜನೆಯ ಸಂದರ್ಭದಲ್ಲಿ ಮಹತ್ವದ್ದಾಗಿದ್ದು, ಈ ಯೋಜನೆಗೆ ತಾತ್ಕಾಲಿಕವಾಗಿ ಸುಮಾರು 6 ಎಕರೆ ಲಾಲ್‌ಬಾಗ್ ಭೂಮಿ ಮತ್ತು ಶಾಶ್ವತವಾಗಿ 1 ಎಕರೆ ಭೂಮಿಯ ಅಗತ್ಯವಿದೆ ಎಂದು ವರದಿಯಾಗಿದೆ.

ಲಾಲ್‌ಬಾಗ್ ಸುಮಾರು ಮೂರು ಶತಕೋಟಿ ವರ್ಷಗಳಷ್ಟು ಹಳೆಯದಾದ ಬೃಹತ್ ಪ್ರಾಚೀನ ಬಂಡೆಗೆ ನೆಲೆಯಾಗಿದೆ. ಇದು ಪ್ರಮುಖ ಪರಿಸರ ಮತ್ತು ಭೂವೈಜ್ಞಾನಿಕ ಪರಂಪರೆಯ ತಾಣವಾಗಿದೆ.

ನಾಗರಿಕ ಗುಂಪುಗಳು ಇದನ್ನು ರಿಯಲ್ ಎಸ್ಟೇಟ್‌ಗೆ ಬಳಸಬಾರದು ಎಂದು ಒತ್ತಾಯಿಸಿವೆ. ಲಾಲ್‌ಬಾಗ್‌ನಲ್ಲಿ ನಡೆದ ಪ್ರತಿಭಟನೆಗಳು ಮತ್ತು ನಾಗರಿಕರ ಒತ್ತಡದ ನಂತರ ಸರ್ಕಾರ ಮಸೂದೆ ಹಿಂಪಡೆಯಲಾಗಿದೆ ಎಂದರು.

# ನಟ ದುನಿಯಾ ವಿಜಯ್–ನಾಗರತ್ನ ದಾಂಪತ್ಯ ಜೀವನಕ್ಕೆ ತೆರೆ: ಎರಡು ಕೋಟಿ ಜೀವನಾಂಶ

**ಬೆಂಗಳೂರು, ಸೆ.3:**ಸ್ಯಾಂಡಲ್ ವುಡ್ ನಟ ದುನಿಯಾ ವಿಜಯ್ ಹಾಗೂ ಅವರ ಪತ್ನಿ ನಾಗರತ್ನ ಅವರ ದಾಂಪತ್ಯ ಜೀವನಕ್ಕೆ ಕೊನೆಗೂ ತೆರೆಬಿದ್ದಿದೆ.

ಹಲವು ವರ್ಷಗಳಿಂದ ಬೇರ್ಪಡಲು ಕಾನೂನು ಸಮರ ನಡೆಸುತ್ತಿತ್ತು. ಈ ಜೋಡಿಯ ವಿಚ್ಛೇದನ ಪ್ರಕರಣವನ್ನು ಹೈಕೋರ್ಟ್ ವಿಭಾಗೀಯ ಪೀಠ ಕ್ರೌರ್ಯದ ಆಧಾರದ ಮೇಲೆ ಮಂಜೂರು ಮಾಡಿ ಗುರುವಾರ ಮಹತ್ವದ ಆದೇಶ ಹೊರಡಿಸಿದೆ.

ನ್ಯಾಯಮೂರ್ತಿ ಡಿ.ಕೆ. ಸಿಂಗ್ ಹಾಗೂ ನ್ಯಾಯಮೂರ್ತಿ ಎಚ್. ಶಾಂತಿಭೂಷಣ್ ಅವರನ್ನೊಳಗೊಂಡ ವಿಭಾಗೀಯ ಪೀಠ ಈ ಪ್ರಕರಣದ ವಿಚಾರಣೆ ನಡೆಸಿ ಅಂತಿಮ ತೀರ್ಪು ನೀಡಿದೆ.

ವಿಚ್ಛೇದನ ಮಂಜೂರು ಮಾಡುವ



ಜೊತೆಗೆ, ನಾಗರತ್ನ ಅವರಿಗೆ ವಿಜಯ್ ಅವರ ಆರ್ಥಿಕ ಸ್ಥಿತಿಗತಿ ಆಧರಿಸಿ 2 ಕೋಟಿ ರೂ. ಗಳ ಜೀವನಾಂಶ ಪಾವತಿಸುವಂತೆ ಹೈಕೋರ್ಟ್ ನಿರ್ದೇಶನ ನೀಡಿದೆ.

ವಿಚ್ಛೇದನದ ವೇಳೆ ನಾಗರತ್ನ ಮತ್ತು ಮೂವರು ಮಕ್ಕಳ ಭವಿಷ್ಯ ಹಾಗೂ ಜೀವನ ನಿರ್ವಹಣೆಯ ಪ್ರಮುಖ ಅಂಶವನ್ನು ನ್ಯಾಯಾಲಯ ಗಂಭೀರವಾಗಿ ಪರಿಗಣಿಸಿದೆ.

ದುನಿಯಾ ವಿಜಯ್ ಅವರ ಪ್ರಸ್ತುತ ಸಾಮಾಜಿಕ ಸ್ಥಾನಮಾನ, ವೃತ್ತಿಪರ ಗಳಿಕೆ ಹಾಗೂ ಹಣಕಾಸಿನ ಸ್ಥಿತಿಗತಿಗಳನ್ನು ಕೂಲಂಕಷವಾಗಿ ಪರಾಮರ್ಶಿಸಿ 2 ಕೋಟಿ ಜೀವ ನಾಂಶದ ಮೊತ್ತವನ್ನು ನಿಗದಿಪಡಿಸಲಾಗಿದೆ ಎಂದು ಪೀಠ ತಿಳಿಸಿದೆ.

ನಾಗರತ್ನ ಜೊತೆ ದುನಿಯಾ ವಿಜಯ್ 1999ರಲ್ಲಿ ಮದುವೆ ಆಗಿ ಹಲವು ವರ್ಷಗಳ ಕಾಲ ಸಂಸಾರ ನಡೆಸಿದ್ದರೂ ನಂತರ ವೈಮನಸ್ಯ ಉಂಟಾಗಿ ತಾರಕಕ್ಕೇರಿತ್ತು. ಹಲವು ಬಾರಿ ಮಾಧ್ಯಮಗಳಲ್ಲಿ ಕೂಡ ಸುದ್ದಿಯಾಗಿತ್ತು.

ದುನಿಯಾ ವಿಜಯ್ 2013ರಲ್ಲಿ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಕೆ ಮಾಡಿದ್ದರು. ಹಲವು ವರ್ಷಗಳ ಕಾನೂನು ಸಮರ ಈಗ ಕೊನೆ ಆಗಿದೆ.

# ಎಸ್‌ಸಿಪಿ – ಎಸ್‌ಟಿಪಿ ಹಣ ವಾಪಸ್, ರಾಜಕೀಯದಲ್ಲೂ ಒಳಮೀಸಲಾತಿಗೆ ಡಿಎಸ್‌ಎಸ್ ಒತ್ತಾಯ: ಸಚಿವ ಮುನಿಯಪ್ಪಗೆ ಮನವಿ

**ಬೆಂಗಳೂರು, ಸೆ.3:** ಗ್ಯಾರಂಟಿ ಯೋಜನೆಗಳಿಗೆ ವರ್ಗಾಯಿಸಿರುವ ಎಸ್‌ಸಿಪಿ–ಎಸ್‌ಟಿಪಿ ಅನುದಾನವನ್ನು ಹಿಂಪಡೆಯಬೇಕು, ರಾಜಕೀಯದಲ್ಲೂ ಒಳಮೀಸಲಾತಿ ಜಾರಿಗೊಳಿಸಿ, ಪೌರಕಾರ್ಮಿಕರನ್ನು ಖಾಯಂಗೊಳಿಸಬೇಕೆಂದು ಒತ್ತಾಯಿಸಿ ಹೆಣ್ಣೂರ್ ಶ್ರೀನಿವಾಸ್ ದಲಿತ ಸಂಘರ್ಷ ಸಮಿತಿ ನಿಯೋಗ ಸಮಾಜ ಕಲ್ಯಾಣ ಸಚಿವ ಕೆ.ಎಚ್. ಮುನಿಯಪ್ಪ ಅವರಿಗೆ ಮನವಿ ಸಲ್ಲಿಸಿತು.





ಡಿಎಸ್‌ಎಸ್ ರಾಜ್ಯ ಸಂಚಾಲಕ ಹೆಣ್ಣೂರು ಶ್ರೀನಿವಾಸ್ ನೇತೃತ್ವದ ನಿಯೋಗ ಸಚಿವರನ್ನು ಭೇಟಿಯಾಗಿ ಸಮುದಾಯದ ಜ್ವಲಂತ ಸಮಸ್ಯೆಗಳು ಮತ್ತು ವಿವಿಧ ಜಿಲ್ಲೆಗಳ ಕುಂದು ಕೊರತೆಗಳ ಕುರಿತು ಚರ್ಚಿಸಿತು.

ಗ್ಯಾರಂಟಿ ಸೇರಿದಂತೆ ವಿವಿಧ ಯೋಜನೆಗಳಿಗೆ ವರ್ಗಾಯಿಸಿರುವ ಎಸ್‌ಸಿಪಿ–ಎಸ್‌ಟಿಪಿ ಹಣವನ್ನು ಹಿಂಪಡೆದು ಶೋಷಿತರ ಶಾಸನಬದ್ಧ ಅನುದಾನವನ್ನು ಸಮುದಾಯದ ಶ್ರೇಯೋಭಿವೃದ್ಧಿಗೆ ಬಳಕೆ ಮಾಡಬೇಕು. ಎಬಿಸಿಡಿ ವರ್ಗೀಕರಣದಂತೆ ರಾಜಕೀಯ ಕ್ಷೇತ್ರದಲ್ಲೂ ಒಳ ಮೀಸಲಾತಿ ಜಾರಿಗೊಳಿಸಬೇಕು ಮತ್ತು ಪಿಟಿಸಿಎಲ್ ಕಾಯ್ದೆಗೆ ಸಂಬಂಧಿಸಿದ ಜಮೀನುಗಳ ಬಿಡುಗಡೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ತಕ್ಷಣ ಖಾಯಂಗೊಳಿಸಬೇಕು ಎಂದು ಮನವಿ ಮಾಡಿದರು.

ಮನವಿ ಸ್ವೀಕರಿಸಿದ ಸಚಿವ ಮುನಿಯಪ್ಪ ಅವರು, ಬೇಡಿಕೆಗಳನ್ನು ಪರಿಶೀಲಿಸಿ ಸೂಕ್ತ ಕಾನೂನು ಮತ್ತು ಆಡಳಿತಾತ್ಮಕ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಈ ವೇಳೆ ಡಿಎಸ್‌ಎಸ್ ರಾಜ್ಯ ಮುಖಂಡರಾದ ಭೀಮ್ ಜ್ಯೋತಿ, ಮರೀಶ್ ನಾಗನ್ನವರ, ಸೂಲಿಕುಂಟೆ ರಮೇಶ, ಅಶೋಕ ಛಲವಾದಿ, ಫಕ್ಕೀರಪ್ಪ ಹಿರೇಸಲ್ಲಿಕೆರಿ ಸೇರಿದಂತೆ ವಿವಿಧ ಪದಾಧಿಕಾರಿಗಳು ಉಪಸ್ಥಿತರಿದ್ದರು.





ಮೂರನೇ ದಿನ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಗುರುವಾರ ಗುಡದೂರು ಮಸ್ಕಿ ತಾಲೂಕಿನಲ್ಲಿ ಬಿಜೆಪಿಯ 'ಬಳ್ಳಾರಿ ಚಲೋ'

# ವಿಪ್ರೋ-ಕವಾಸಾಕಿ ಸಂಸ್ಥೆಯಿಂದ 1000 ಕೋಟಿ ಹೂಡಿಕೆ, 1200 ಉದ್ಯೋಗ ಸೃಷ್ಟಿ: ಸಚಿವ ಎಂ.ಬಿ. ಪಾಟೀಲ್

**ಬೆಂಗಳೂರು, ಸೆ.3:** ಹೈಡ್ರಾಲಿಕ್ ಪಂಪ್ ತಯಾರಿಕೆಗೆ ಹೆಸರಾಗಿರುವ ವಿಪ್ರೋ – ಕವಾಸಾಕಿ ಪ್ರಿಸಿಷನ್ ಮಷಿನರಿ ಕಂಪನಿಯು ಹಾರೋಹಳ್ಳಿಯ 5ನೇ ಹಂತದ ಕೈಗಾರಿಕಾ ಪ್ರದೇಶದಲ್ಲಿ ತಯಾರಿಕಾ ಘಟಕ ಆರಂಭಿಸಲು ಮುಂದೆ ಬಂದಿದೆ. ಇದಕ್ಕಾಗಿ ಕಂಪನಿಯು 1,000 ಕೋಟಿ ರೂಪಾಯಿ ಹೂಡಿಕೆ ಮಾಡಲಿದ್ದು, ಇದರಿಂದ 1,200 ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ತಿಳಿಸಿದ್ದಾರೆ.

ಖನಿಜ ಭವನದಲ್ಲಿ ತಮ್ಮನ್ನು ಗುರುವಾರ ಭೇಟಿಯಾದ ಕಂಪನಿಯ ಸಿಇಒ ಮಿನೋರು ಹತ್ಸುದ ನೇತೃತ್ವದ ಉನ್ನತ ಮಟ್ಟದ ನಿಯೋಗದ ಜತೆ ಸಚಿವರು ಮಾತುಕತೆ ನಡೆಸಿದರು.

ನಂತರ ಮಾತನಾಡಿದ ಸಚಿವ ಎಂ.ಬಿ ಪಾಟೀಲ್, ಜಪಾನ್ ಮೂಲದ ಕವಾಸಾಕಿ ಕಂಪನಿ, ವಿಪ್ರೊ ಜತೆ ಸೇರಿ 30 ಎಕರೆ ಭೂಮಿ ಕೇಳಿವೆ. ಇದನ್ನು ನಾವು ತ್ವರಿತವಾಗಿ ಒದಗಿಸುತ್ತೇವೆ. ನೂತನ ತಯಾರಿಕಾ ಘಟಕವನ್ನು ಒಂದು ವರ್ಷದಲ್ಲಿ ಕಾರ್ಯಾರಂಭ ಮಾಡಲಿದೆ ಎಂದಿದ್ದಾರೆ. ಕಂಪನಿಯು ಈಗ ಕುಂಬಳಗೋಡಿನಲ್ಲಿ ಬಾಡಿಗೆ ಆಧಾರದಲ್ಲಿ ಒಂದು ತಯಾರಿಕಾ ಘಟಕ ಹೊಂದಿದ್ದು, ಅಲ್ಲಿ ವರ್ಷಕ್ಕೆ 80 ಸಾವಿರ ಹೈಡ್ರಾಲಿಕ್ ಪಂಪ್ ತಯಾರಿಸಲಾಗುತ್ತಿದೆ. ಉದ್ದೇಶಿತ ಘಟಕವು ಕಂಪನಿಯ ತಯಾರಿಕಾ ಚಟುವಟಿಕೆಯ ವಿಸ್ತರಣೆಯಾಗಿದೆ. ಇಲ್ಲಿ ವರ್ಷಕ್ಕೆ 2 ಲಕ್ಷಕ್ಕೂ ಹೆಚ್ಚು ಹೈಡ್ರಾಲಿಕ್ ಪಂಪ್‌ಗಳನ್ನು ತಯಾರಿಸಿ, ಮಾರುಕಟ್ಟೆಗೆ ಪೂರೈಸಲಾಗುವುದು ಎಂದು ಸಚಿವ ಎಂ.ಬಿ ಪಾಟೀಲ್ ಅವರು ತಿಳಿಸಿದ್ದಾರೆ.

ವಿಪ್ರೊ ಕವಾಸಾಕಿ ಕಂಪನಿಯ ಈ ಯೋಜನೆ ಆಕರ್ಷಕವಾಗಿದೆ. ಹೀಗಾಗಿ ಕಂಪನಿಗೆ ಈಗಿನಿಂದಲೇ ಅಗತ್ಯ ಕೆಲಸಗಳನ್ನು ಆರಂಭಿಸುವಂತೆ ಕೋರಲಾಗಿದೆ. ಈ ಹೂಡಿಕೆ ಯೋಜನೆಗೆ ಮುಂದಿನ ಸಭೆಯಲ್ಲಿ ಅಂತಿಮ ಅನುಮೋದನೆ ಕೊಡಲಾಗು ವುದು ಎಂದು ಎಂ.ಬಿ ಪಾಟೀಲ್ ಹೇಳಿದ್ದಾರೆ. ಈ ಹೈಡ್ರಾಲಿಕ್ಸ್ ಪಂಪ್‌ಗಳನ್ನು ಜೆಸಿಬಿ ಸೇರಿದಂತೆ ಇತರ ಭೂ ಸಂಬಂಧಿ ಕಾಮಗಾರಿಗಳನ್ನು ನಡೆಸಲು ಉಪಯೋಗಿಸುವ ಯಂತ್ರಗಳಲ್ಲಿ ಬಳಸಲಾಗುತ್ತದೆ.

# ಪಶುವೈದ್ಯ ನೇಮಕಾತಿ ಹಗರಣ: ಕೆಪಿಎಸ್‌ಸಿ ಮಾಜಿ ಅಧ್ಯಕ್ಷರಿಗೆ ಸಿಐಡಿಯಿಂದ ಮತ್ತೆ ನೋಟಿಸ್

**ಬೆಂಗಳೂರು, ಸೆ.3:** ಕರ್ನಾಟಕ ಲೋಕಸೇವಾ ಆಯೋಗ(ಕೆಪಿಎಸ್‌ಸಿ) ಪಶುವೈದ್ಯರ ಅಕ್ರಮ ನೇಮಕಾತಿ ಪ್ರಕರಣದ ತನಿಖೆಯನ್ನು ತೀವ್ರಗೊಳಿಸಿರುವ ಸಿಐಡಿ ಅಧಿಕಾರಿಗಳು ಮಾಜಿ ಅಧ್ಯಕ್ಷ ಸಾಹುಕಾರ್ ಶಿವಶಂಕರಪ್ಪಗೆ ಮತ್ತೆ ನೋಟಿಸ್ ನೀಡಿದ್ದಾರೆ.

ಪ್ರಕರಣದ ಸಂಬಂಧ ಇಂದು ಇಲ್ಲವೇ ಶುಕ್ರವಾರ ವಿಚಾರಣೆಗೆ ಹಾಜರಾಗುವಂತೆ ನೋಟೀಸ್ ನಲ್ಲಿ ಸೂಚಿಸಲಾಗಿದೆ.

ಸಿಐಡಿ ಅಧಿಕಾರಿಗಳ ಈಗಾಗಲೇ ಒಮ್ಮೆ ಶಿವಶಂಕರಪ್ಪ ವಿಚಾರಣೆ ನಡೆಸಿತ್ತು. ಕೆಲ ದಿನಗಳ ತನಿಖೆ ನಂತರ ಮತ್ತೆ ನೋಟಿಸ್ ನೀಡಲಾಗಿದ್ದು, ಮತ್ತೊಂದೆಡೆ ಹೈಕೋರ್ಟ್‌ನಲ್ಲಿ ಬಂಧನ ರಕ್ಷಣೆ ಕೋರಿ ಶಿವಶಂಕರಪ್ಪ ಸಲ್ಲಿಸಿದ್ದ ಅರ್ಜಿ ಸಂಬಂಧ ಆದೇಶ ಬರುವುದು ಇನ್ನೂ ಬಾಕಿಯಿದೆ.

ಕೆಪಿಎಸ್ಸಿಯಲ್ಲಿ ನಡೆದಿರುವ ಅಕ್ರಮಗಳಿಗೆ ಸಂಬಂಧಿಸಿದಂತೆ ಕೆಲ ದಿನಗಳ ಹಿಂದೆ ಸಿಐಡಿ ಅಧಿಕಾರಿಗಳು ಸಾಹುಕಾರ್ ಶಿವಶಂಕರಪ್ಪ ಅವರನ್ನು ವಿಚಾರಣೆ ಕೈಗೊಂಡಿದ್ದರು.

ಸಿಐಡಿ ಅಧಿಕಾರಿಗಳು ಕೆಪಿಎಸ್ ಸಿಗೆ ಸಂಬಂಧಿಸಿದ ವಿವಿಧ ಸ್ಥಳಗಳ ಮೇಲೆ ಶೋಧ ನಡೆಸಿದ ಬಳಿಕ ನೀಡಿದ್ದ ನೋಟೀಸ್‌ಗೆ ಸಾಹುಕಾರ್ ವಿಚಾರಣೆಗೆ ಹಾಜರಾಗಿದ್ದರು.

400 ಪಶುವೈದ್ಯಾಧಿಕಾರಿಗಳ ನೇಮಕಾತಿ ಪರೀಕ್ಷೆಯ ಅಂತಿಮ ಆಯ್ಕೆ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಗಳ ಹಿನ್ನಲೆಯಲ್ಲಿ ಕೆಪಿಎಸ್ ಸಿ ತೀವ್ರ ಟೀಕೆಗೆ ಗುರಿಯಾಗಿದೆ. ಅಭ್ಯರ್ಥಿಗಳ ಆಯ್ಕೆಗಾಗಿ ಮಧ್ಯವರ್ತಿಗಳು ಕೆಲ ಅಭ್ಯರ್ಥಿಗಳಿಗೆ ಕರೆ ಮಾಡಿ ತಲಾ 70 ಲಕ್ಷದಿಂದ 80 ಲಕ್ಷ ರೂಪಾಯಿಗಳವರೆಗೆ ಲಂಚದ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಧಾನಸೌಧ ಪೊಲೀಸರು





ಎಫ್‌ಐಆರ್‌ಗಳನ್ನು ದಾಖಲಿಸಿದ್ದರು. ಇದಲ್ಲದೆ, ಕೆಪಿಎಸ್‌ಸಿ ಅಧಿಕಾರಿಗಳು ಹಲವು ಅಭ್ಯರ್ಥಿಗಳನ್ನು ರೆಸಾರ್ಟ್‌ಗೆ ಕರೆದೊಯ್ದು, ಉತ್ತರಗಳೊಂದಿಗೆ ಪ್ರಶ್ನೆಪತ್ರಿಕೆ ಗಳನ್ನು ನೀಡಿದ್ದರು ಎಂಬ ಆರೋಪವೂ ಕೇಳಿಬಂದಿದೆ. ಹೆಚ್ಚಿನ ಅಂಕಗಳನ್ನು ಪಡೆದ ಕೆಲ ಅಭ್ಯರ್ಥಿಗಳು ಕೆಪಿಎಸ್ ಸಿಯ ಉನ್ನತ ಹುದ್ದೆಯಲ್ಲಿರುವವರ ಸಂಬಂಧಿಕರು ಎಂದು ಶಂಕಿಸಲಾಗಿದೆ.

**ಜ್ಞಾನೇಂದ್ರ ವಿರುದ್ಧ ಮತ್ತೊಂದು ಕೇಸ್:** ಈ ನಡುವೆ ಕರ್ನಾಟಕ ಲೋಕಸೇವಾ ಆಯೋಗ(ಕೆಪಿಎಸ್‌ಸಿ)ಪಶುವೈದ್ಯರ ಅಕ್ರಮ ನೇಮಕಾತಿ ಪ್ರಕರಣದಲ್ಲಿ ಬಂಧಿತ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಕೇಸ್ ದಾಖಲಿಸಲಾಗಿದೆ. ಸರ್ಕಾರಿ ಹುದ್ದೆ ಮತ್ತು ಕಚೇರಿಯನ್ನು ದುರುಪಯೋಗ ಪಡಿಸಿಕೊಂಡ ಹಿನ್ನೆಲೆಯಲ್ಲಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಹಣದ ಆಮೀಷದಿಂದ ಸರ್ಕಾರದ ಹುದ್ದೆಗೆ ಮೋಸ ಮಾಡಿದ ಹಿನ್ನೆಲೆಯಲ್ಲಿ ಎಫ್‌ಐಆರ್‌ನಲ್ಲಿ ಸಂಬಂಧಿತ ಸೆಕ್ಷನ್ ಸೇರಿಸಲಾಗಿದೆ. ಕೆಪಿಎಸ್‌ಸಿ ಕಚೇರಿಯಲ್ಲಿ ಸಿಐಡಿ ಅಧಿಕಾರಿಗಳು ಇಂದು ಮಹಜರು ನಡೆಸಿದರು.ಪ್ರಶ್ನೆಪತ್ರಿಕೆ ಲೀಕ್ ಆಗಿದ್ದ ಹಿನ್ನೆಲೆ ಗ್ಯಾನೇಂದ್ರ ಕೊಠಡಿಯಲ್ಲಿ ಮಹಜರು ನಡೆಸಲಾಗಿದೆ. ಬಳಿಕ ಜ್ಞಾನೇಂದ್ರ ಅವರನ್ನು ಸಿಐಡಿ ಅಧಿಕಾರಿಗಳು ಕರೆದುಕೊಂಡು ಹೋಗಿದ್ದಾರೆ.

### ಕಾನೂನುಬಾಹಿರವಾಗಿ ಮದರಸಾಗೆ ನೀಡಿರುವ 5 ಲಕ್ಷ ರೂ ಅನುದಾನ ಹಿಂಪಡೆಯಿರಿ

# ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ 2ನೇ ಬಾರಿಗೆ ಹೈಕೋರ್ಟ್ ಆದೇಶ

**ಬೆಂಗಳೂರು, ಸೆ.3:** ಶಿಕ್ಷಣ ಇಲಾಖೆಯಿಂದ ಮಾನ್ಯತೆ ರದ್ದಾಗಿರುವ ಥಣಿಸಂದ್ರದ ಸಾಮರ ಇಂಟರ್ ನ್ಯಾಷನಲ್ ಇಸ್ಲಾಮಿಕ್ ಸ್ಕೂಲ್ ನಡೆಸುತ್ತಿರುವ ಮದರಸಾಗೆ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ನೀಡಿರುವ ಐದು ಲಕ್ಷ ರೂಪಾಯಿ ಅನುದಾನ ವಾಪಸ್ ಪಡೆಯುವ ಕುರಿತು ಕೈಗೊಂಡಿರುವ ಕ್ರಮದ ಬಗ್ಗೆ ವಸ್ತುಸ್ಥಿತಿ ವರದಿ ಸಲ್ಲಿಸುವಂತೆ ರಾಜ್ಯ ಹೈಕೋರ್ಟ್ ನ ವಿಭಾಗೀಯ ಪೀಠ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಗೆ ಆದೇಶಿಸಿದೆ.

ಮುಂದಿನ ವಿಚಾರಣೆ ಸಂದರ್ಭದಲ್ಲಿ ವಂಚನೆಯ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳ ವಿರುದ್ಧ ನಡೆಯುತ್ತಿರುವ ತನಿಖೆಯ ವಸ್ತುಸ್ಥಿತಿ ಮಾಹಿತಿ ಹಾಗೂ ಕೈಗೊಂಡಿರುವ ಕ್ರಮಗಳ ವರದಿಯನ್ನು ಸಲ್ಲಿಸಬೇಕು. ಅಲ್ಪ ಸಂಖ್ಯಾತರ ಇಲಾಖೆಯ ನಿರ್ದೇಶಕರು ಆರೋಪಗಳನ್ನು ರೂಪಿಸುವ ವಿಚಾರಣೆಯ ಸಂದರ್ಭದಲ್ಲಿ ನ್ಯಾಯಾಲಯದ ಮುಂದೆ ಖುದ್ದಾಗಿ ಹಾಜರಾಗಬೇಕು ಎಂದು ನಿರ್ದೇಶನ ನೀಡಿದೆ. ಅಬ್ದುಲ್ ಹಮೀದ್ ಪಾಷ, ಪ್ರದೀಪ್ ಸಿಂಹ ಮತ್ತಿತರರು ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜಯಂತ್ ಬ್ಯಾನರ್ಜಿ ಮತ್ತು ನ್ಯಾಯಮೂರ್ತಿ ಟಿ.ಎಂ. ನದಾಫ್ ನೇತೃತ್ವದ ವಿಭಾಗೀಯ ಪೀಠ ಎರಡನೇ ಬಾರಿಗೆ ಈ ಮಹತ್ವದ ಆದೇಶ ನೀಡಿ, ವಿಚಾರಣೆಯನ್ನು ಸೆಪ್ಟೆಂಬರ್ 24ಕ್ಕೆ ಮುಂದೂಡಿದೆ.

ಇದಕ್ಕೂ ಮುನ್ನ ಮುಖ್ಯನ್ಯಾಯಮೂರ್ತಿ ವಿಭು ಭಕ್ರು ಮತ್ತು ನ್ಯಾಯಮೂರ್ತಿ ಸಿ.ಎಂ. ಜೋಶಿ ನೇತೃತ್ವದ ವಿಭಾಗೀಯಪೀಠ ಕಳೆದ ವರ್ಷದ ಸೆಪ್ಟೆಂಬರ್ ನಲ್ಲಿ ಈ ಕುರಿತಾದ ಅರ್ಜಿ ವಿಚಾರಣೆ ನಡೆಸಿ ಮದರಸಾಗೆ ನೀಡಿರುವ ಹಣದ ಬಗ್ಗೆ ಪರಿಶೀಲನೆ ನಡೆಸಿ ಕ್ರಮ ತೆಗೆದುಕೊಳ್ಳುವಂತೆ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಅವರಿಗೆ ಆದೇಶಿಸಿತ್ತು.

# ಬೆಂಗಳೂರಿನ ಆರೋಗ್ಯ ಸೇವಾ ವ್ಯವಸ್ಥೆಯಲ್ಲಿ ಬದಲಾವಣೆಗೆ ಜಿಬಿಎ ಕ್ರಮ

### ಹೆರಿಗೆ, ಜನರಲ್ ಆಸ್ಪತ್ರೆ, ರೆಫರಲ್ ಕೇಂದ್ರಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಲು ಚಿಂತನೆ

**ಬೆಂಗಳೂರು, ಸೆ.3:** ರಾಜಧಾನಿ ಬೆಂಗಳೂರಿನ ಆರೋಗ್ಯ ಸೇವಾ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಮುಂದಾಗಿದೆ.

ಜಿಬಿಎ ವ್ಯಾಪ್ತಿಯಲ್ಲಿರುವ ಹೆರಿಗೆ ಆಸ್ಪತ್ರೆಗಳು, ರೆಫರಲ್ ಕೇಂದ್ರಗಳು ಹಾಗೂ ಜನರಲ್ ಆಸ್ಪತ್ರೆಗಳನ್ನು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸುಪರ್ದಿಗೆ ಹಸ್ತಾಂತರಿಸುವ ಕುರಿತು ಸರ್ಕಾರ ಚಿಂತನೆ ನಡೆಸಿದೆ. ಬೆಂಗಳೂರು ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರ ನೇತೃತ್ವದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಈ ಕುರಿತು ವಿಸ್ತೃತ ಚರ್ಚೆ ನಡೆದಿದೆ. ಆರೋಗ್ಯ ಸೇವೆಯನ್ನು ಒಂದೇ ವ್ಯವಸ್ಥೆಯಡಿ ತಂದು, ಆಸ್ಪತ್ರೆಗಳ ನಿರ್ವಹಣೆ, ವೈದ್ಯರು ಮತ್ತು ಸಿಬ್ಬಂದಿ ಕೊರತೆ ಹಾಗೂ ಚಿಕಿತ್ಸೆಯಲ್ಲಿ ಉಂಟಾಗುತ್ತಿರುವ ಸಮನ್ವಯದ ಕೊರತೆಯನ್ನು ನಿವಾರಿಸುವ ಉದ್ದೇಶ ದಿಂದ ಈ ಪ್ರಸ್ತಾವನೆ ಮುಂದಿಡಲಾಗಿದೆ.

**38 ಆಸ್ಪತ್ರೆಗಳ ಹಸ್ತಾಂತರ?**

ಜಿಬಿಎ ವ್ಯಾಪ್ತಿಯಲ್ಲಿ 28 ಹೆರಿಗೆ ಆಸ್ಪತ್ರೆಗಳು, 6 ರೆಫರಲ್ ಆಸ್ಪತ್ರೆಗಳು ಹಾಗೂ 2 ಜನರಲ್ ಆಸ್ಪತ್ರೆಗಳಿವೆ. ಇದರ ಜೊತೆಗೆ ಹೊಸದಾಗಿ ನಿರ್ಮಾಣವಾಗುತ್ತಿರುವ ಸುಮಾರು 6 ಆಸ್ಪತ್ರೆಗಳೂ ಇವೆ. ಇವುಗಳ ನಿರ್ವಹಣೆಯನ್ನು ರಾಜ್ಯ ಆರೋಗ್ಯ ಇಲಾಖೆಗೆ ವಹಿಸುವ ಕುರಿತು ಚರ್ಚೆ ನಡೆದಿದೆ. ಆದರೆ ಆಸ್ಪತ್ರೆಗಳಿಗೆ ಸಂಬಂಧಿಸಿದ ಜಾಗ ಮತ್ತು ಕಟ್ಟಡಗಳ ಮಾಲೀಕತ್ವವನ್ನು ಹಸ್ತಾಂತರಿಸುವ ಪ್ರಶ್ನೆ ಇಲ್ಲ. ಸಾವಿರಾರು ಕೋಟಿ ರೂ. ಮೌಲ್ಯದ ಭೂಮಿ ಹೊಂದಿರುವ ಆಸ್ಪತ್ರೆಗಳ ನಿರ್ವಹಣೆ ಮತ್ತು ಆರೋಗ್ಯ ಸೇವೆಯ ಜವಾಬ್ದಾರಿಯನ್ನು ಮಾತ್ರ ಆರೋಗ್ಯ ಇಲಾಖೆಗೆ ವಹಿಸುವ ಬಗ್ಗೆ ಚಿಂತನೆ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.





**ವೈದ್ಯರಿಲ್ಲದೆ ಬಾಗಿಲು ಮುಚ್ಚಿದ ಆಸ್ಪತ್ರೆಗಳು:** ಜಿಬಿಎ ರಚನೆಯಾಗಿ ಐದು ನಗರ ಪಾಲಿಕೆಗಳಾಗಿ ಆಡಳಿತ ವ್ಯವಸ್ಥೆ ಬದಲಾದ ಬಳಿಕ ಆರೋಗ್ಯ ಇಲಾಖೆಯ ಮೇಲೂ ಅದರ ಪರಿಣಾಮ ಬೀರಿದೆ. ಕೆಲವು ಹೆರಿಗೆ ಆಸ್ಪತ್ರೆಗಳು ವೈದ್ಯರು ಹಾಗೂ ಅಗತ್ಯ ಸಿಬ್ಬಂದಿ ಇಲ್ಲದೆ ಕಾರ್ಯನಿರ್ವಹಿಸಲು ಸಾಧ್ಯವಾಗದೆ ತಾತ್ಕಾಲಿಕವಾಗಿ ಬಂದ್ ಆಗಿವೆ. ಇನ್ನೂ ಕೆಲವು ಆಸ್ಪತ್ರೆಗಳು ಕಾಮಗಾರಿ ನೆಪದಲ್ಲಿ ಸೇವೆ ಸ್ಥಗಿತಗೊಳಿಸಿರುವ ಆರೋಪಗಳಿವೆ.

ಕೆಂಪೇಗೌಡನಗರ, ಚಾಮರಾಜ ಪೇಟೆ, ಶಾಂತಿನಗರ, ಅಡುಗೋಡಿ, ಯಡಿಯೂರು, ಯಶವಂತಪುರ ಸೇರಿದಂತೆ 10 ಹೆರಿಗೆ ಆಸ್ಪತ್ರೆಗಳು ತಾತ್ಕಾಲಿಕವಾಗಿ ಬಂದ್ ಆಗಿರುವ ಬಗ್ಗೆ ವರದಿಗಳಿವೆ. ಆಸ್ಪತ್ರೆ ಸಿಬ್ಬಂದಿಗೆ ವೇತನ ಪಾವತಿ ಸೇರಿದಂತೆ ಹಲವು ಆಡಳಿತಾತ್ಮಕ ಸಮಸ್ಯೆಗಳು ಎದುರಾಗಿರುವುದೂ ವ್ಯವಸ್ಥೆಯ ಮೇಲೆ ಪರಿಣಾಮ ಬೀರಿದೆ.

**ಪಿಎಚ್‌ಸಿ, ನಮ್ಮ ಕ್ಲಿನಿಕ್ ಮಾತ್ರ ಜಿಬಿಎ ಬಳಿ:** ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ನಮ್ಮ ಕ್ಲಿನಿಕ್‌ಗಳಂತಹ ಮೂಲಭೂತ ಆರೋಗ್ಯ ಸೇವೆಗಳನ್ನು ಜಿಬಿಎ ವ್ಯಾಪ್ತಿಯಲ್ಲೇ ಉಳಿಸಿಕೊಂಡು, ಹೆರಿಗೆ, ರೆಫರಲ್ ಮತ್ತು ಜನರಲ್ ಆಸ್ಪತ್ರೆಗಳ ನಿರ್ವಹಣೆಯನ್ನು ರಾಜ್ಯ ಆರೋಗ್ಯ ಇಲಾಖೆಗೆ ವಹಿಸುವ ಪ್ರಸ್ತಾವನೆ ಚರ್ಚೆಯಲ್ಲಿದೆ. ಕಳೆದ ಐದಾರು ತಿಂಗಳಿಂದ ಈ ಕುರಿತು ಪ್ರಾಥಮಿಕ ಹಂತದ ಸಿದ್ಧತೆಗಳು ನಡೆಯುತ್ತಿದ್ದು, ಹೊಸ ವ್ಯವಸ್ಥೆಯ ರೂಪುರೇಷೆಗಳನ್ನೂ ಸಿದ್ಧಪಡಿಸಲಾಗಿದೆ ಎನ್ನಲಾಗಿದೆ.

**ಅಧಿಕಾರಿಗಳ ಸಭೆಗೆ ಸೂಚನೆ**

ಆಸ್ಪತ್ರೆಗಳನ್ನು ಒಂದೇ ಆರೋಗ್ಯ ವ್ಯವಸ್ಥೆಯಡಿ ತರುವ ಮೂಲಕ ಸಾರ್ವಜನಿಕರಿಗೆ ಉತ್ತಮ ಹಾಗೂ ನಿರಂತರ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ಜಿಬಿಎ ಆರೋಗ್ಯ ಇಲಾಖೆಯ ಅಧಿಕಾರಿಗಳು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಸಂಬಂಧಪಟ್ಟ ಇತರ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಹಸ್ತಾಂತರದ ಸಾಧಕ–ಬಾಧಕಗಳು ಹಾಗೂ ಆಡಳಿತಾತ್ಮಕ ರೂಪುರೇಷೆಗಳನ್ನು ಅಂತಿಮ ಗೊಳಿಸುವಂತೆ ಸಚಿವ ಕೃಷ್ಣ ಬೈರೇಗೌಡ ಸೂಚಿಸಿದ್ದಾರೆ. ಈ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಮುಂದಿನ ದಿನಗಳಲ್ಲಿ ನೂತನ ವ್ಯವಸ್ಥೆಯನ್ನು ಹಂತ ಹಂತವಾಗಿ ಜಾರಿಗೆ ತರುವ ಸಾಧ್ಯತೆ ಇದೆ.

# ನೈಸ್ ಸಂಸ್ಥೆಗೆ ಭೂಮಿ ನೀಡಿದ 1453 ರೈತರಿಗೆ ನಿವೇಶನ ಒದಗಿಸಲು ತೀರ್ಮಾನ

**ಬೆಂಗಳೂರು, ಸೆ.3** ಬೆಂಗಳೂರು, ಮೈಸೂರು ಕಾರಿಡಾರ್ ಯೋಜನೆಯಡಿ ಹೆದ್ದಾರಿ ನಿರ್ಮಿಸಲು ಭೂಮಿ ನೀಡಿದ್ದ 1453 ರೈತರಿಗೆ ನಿವೇಶನ ನೀಡಲು ರಾಜ್ಯ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ. ಸಭೆಯ ನಂತರ ಮಾಹಿತಿ ನೀಡಿದ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್, ನಾಲ್ಕು ಕಡೆಗಳಲ್ಲಿ ರೈತರಿಗೆ ನಿವೇಶನ ಒದಗಿಸಲಾಗುವುದು. ನೈಸ್ ಸಂಸ್ಥೆ 554 ನಿವೇಶಗಳನ್ನು ನಿರ್ಮಿಸಿದ್ದು, ಇದನ್ನು ಒದಗಿಸುತ್ತೇವೆ. ಉಳಿದಂತೆ ಎಲ್ಲಿ ಜಮೀನು ಲಭ್ಯವಿದೆ ಅಲ್ಲಿ ನೈಸ್ ಸಂಸ್ಥೆ ನಿವೇಶನ ಒದಗಿಸಲಾ ಗುವುದು ಎಂದರು.

ಮೂಲ ಒಪ್ಪಂದ ಮಾಡಿಕೊಂಡಾಗ ರೈತರು ಯಾವುದೇ ರೀತಿಯ ಪ್ರತಿಭಟನೆ ಇಲ್ಲದೇ ನೈಸ್ ರಸ್ತೆಗೆ ಜಮೀನು ನೀಡಿದ್ದರು. ಅವರಿಗೆ ಅಂದಿನ ಜಿಲ್ಲಾಧಿಕಾರಿಗಳು ಮತ್ತು ಜಮೀನು ನೀಡಿದವರಿಗೆ ಒಂದು ಎಕರೆ ಇದ್ದರೆ 30 ಮತ್ತು 40, ಎಕರೆಗೂ ಅಧಿಕ ಇದ್ದರೆ 60 ಮತ್ತು 40 ನಿವೇಶನ ನೀಡಲು ನೈಸ್ ಸಂಸ್ಥೆ ಒಪ್ಪಿಗೆ ನೀಡಿತ್ತು. ಆದರೆ ಮೂಲ ಒಪ್ಪಂದಲ್ಲಿ ಈ ವಿಷಯ ಪ್ರಸ್ತಾಪಿಸಿರಲಿಲ್ಲ. ಸುಪ್ರೀಂ ಕೋರ್ಟ್ ಈ ವಿಚಾರದಲ್ಲಿ ಸಾಧಕ, ಬಾಧಕಗಳನ್ನು ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಬಹುದು ಎಂದರು.

ನೈಸ್ ಸಂಸ್ಥೆ ತನ್ನ ಟೌನ್‌ಶಿಪ್ ಪ್ರದೇಶದಲ್ಲಿ ಎರಡು ತಿಂಗಳಲ್ಲಿ ರೈತರಿಗೆ ನಿವೇಶನ ಒದಗಿಸಲಿದೆ ಎಂದು ಹೇಳಿದರು.

### ಭರತನಾಟ್ಯದಲ್ಲಿ ವಿದ್ವತ್: ದಿವ್ಯಾಂಗ ಚೇತನ ದಿನೇಶ್ ಸಾಧನೆ

# ನಾಳೆ ಜೆ.ಪಿ.ನಗರದ ರಮಣ ಮಹರ್ಷಿ ಅಕಾಡೆಮಿಯ ಪ್ರಾರ್ಥನಾ ಮಂದಿರದಲ್ಲಿ ಏಕವ್ಯಕ್ತಿ ನೃತ್ಯ ಪ್ರದರ್ಶನ

**ಬೆಂಗಳೂರು, ಸೆ.3:** ಭರತನಾಟ್ಯದ ನೃತ್ಯಪರೀಕ್ಷೆಯಲ್ಲಿ ವಿದ್ವತ್ ಪರೀಕ್ಷೆಯನ್ನು ಡಿಸ್ಟಿಂಕ್ಷನ್ ನಲ್ಲಿ ತೇರ್ಗಡೆ ಹೊಂದಿ, ಬೆಂಗಳೂರು ದೂರದರ್ಶನದಲ್ಲಿ ಬಿ ಗ್ರೇಡ್ ನೃತ್ಯ ಕಲಾವಿದರಾಗಿ ಮಾನ್ಯತೆಯನ್ನು ಪಡೆದ ಏಕೈಕ ದಿವ್ಯಾಂಗ ಚೇತನ ನೃತ್ಯ ಕಲಾವಿದನೆಂಬುದು ಶಿಜಿ.ವಿ. ದಿನೇಶ್ ಅವರ ಅಸ್ಮಿತೆ. ದೃಷ್ಟಿ ಸವಾಲನ್ನು ಮೆಟ್ಟಿ ನಿಂತ ಭರತನಾಟ್ಯ ಹಾಗೂ ಕೂಚಿಪುಡಿ ಶಾಸ್ತ್ರೀಯ ನೃತ್ಯ ಸಾಧಕರು ಇವರು ಎಂದರೆ ಅತಿಶಯೋಕ್ತಿಯಲ್ಲ. ಕೃಷಿ ಕುಟುಂಬವೊಂದರಲ್ಲಿ ಗೀತಾ ಮತ್ತು ವಿಶ್ವನಾಥ ರೆಡ್ಡಿ ದಂಪತಿಯ ಹಿರಿಯ ಮಗನಾಗಿ ಜನಿಸಿದ ಶ್ರೀ ಜಿ. ವಿ. ದಿನೇಶ್, ಜನ್ಮಜಾತ ದೃಷ್ಟಿದೋಷವನ್ನು ಮೆಟ್ಟಿ ನಿಂತು ಅದನ್ನೇ ಅಸಾಧಾರಣ ಸಾಧನೆಯ ಮೆಟ್ಟಿಲನ್ನಾಗಿ ಮಾಡಿಕೊಂಡ ಅಪರೂಪದ ಪ್ರತಿಭಾವಂತ ಎನ್ನಬಹುದು. ದಿನೇಶ್ ಶಿಕ್ಷಣವನ್ನು ಬೆಂಗಳೂರಿನ ಶ್ರೀ ರಮಣ ಮಹರ್ಷಿ ಅಂಧರ ಅಕಾಡೆಮಿಯಲ್ಲಿ ಬ್ರೈಲ್ ಶಿಕ್ಷಣದ ಜೊತೆಗೆ ತಮ್ಮಲ್ಲಿ ಸುಪ್ತವಾಗಿದ್ದ ನೃತ್ಯದ ಒಲವನ್ನು ಗುರುತಿಸಿಕೊಂಡು ಅತ್ಯಾಸಕ್ತಿಯಿಂದ ನೃತ್ಯ ಶಿಕ್ಷಣ ಪಡೆದರು.

ಕರ್ನಾಟಕ ಸರ್ಕಾರ ನಡೆಸುವ ಜ್ಯೂನಿಯರ್, ಸೀನಿಂಯರ್



ನೃತ್ಯಪರೀಕ್ಷೆಗಳಲ್ಲಿ ಶ್ರೇಷ್ಠ ಅಂಕಗಳನ್ನು ಪಡೆದು ತೇರ್ಗಡೆ ಹೊಂದಿದ್ದು, ಗುರು ವಿದ್ವಾನ್ ಉಜ್ವಲ್ ಜಗದೀಶ್ ಅವರ ಮಾರ್ಗದರ್ಶನದಲ್ಲಿ ವಿದ್ವತ್ ಪದವಿ ಪಡೆದದ್ದು ದಿನೇಶ್ ವಿಶೇಷ. ಜೊತೆಗೆ ಬಿ.ಎ. ಕಲಾ ಪದವಿ, ವಿಶೇಷ ಶಿಕ್ಷಣದಲ್ಲಿ ಡಿಪ್ಲೊಮಾ ಮತ್ತು ಡಿ.ಎಡ್. ಶೈಕ್ಷಣಿಕ ಅರ್ಹತೆಗಳನ್ನು ಗಳಿಸಿರುವ ಅಗ್ಗಳಿಕೆ ಇವರದು. ಸಾಧನೆಗೆ ಯಾವ ನ್ಯೂನತೆಯೂ ಅಡಿಯಲ್ಲ ಎಂಬುದನ್ನು ಸಾಬೀತುಪಡಿಸಿರುವ ದಿನೇಶ್, ಭರತನಾಟ್ಯ ಮತ್ತು ಕೂಚಿಪುಡಿ ಎರಡು ಶೈಲಿಗಳಲ್ಲಿ ನಿಪುಣರು. ದಿನೇಶ್ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಏಕವ್ಯಕ್ತಿ ಪ್ರದರ್ಶನ ನೀಡಿ ಗಿನ್ನಿಸ್ ವಿಶ್ವ ದಾಖಲೆ ಪಡೆದು ಕಲಾರಸಿಕರ ಮೆಚ್ಚುಗೆಯನ್ನೂ ಗಳಿಸಿದ್ದಾರೆ. ಪ್ರಸ್ತುತ ತಮ್ಮ ವಿದ್ಯಾ ಸಂಸ್ಥೆಯಾದ ಶ್ರೀ ರಮಣ ಮಹರ್ಷಿ ಅಂಧರ ಅಕಾಡೆಮಿಯಲ್ಲಿ ನೃತ್ಯ ಶಿಕ್ಷಕರಾಗಿ, ಬ್ರೈಲ್ ಬೋಧಕರಾಗಿ, ಹಾಸ್ಟಲ್ ವಾರ್ಡನ್ ಆಗಿ ಸೇವೆ ಸಲ್ಲಿಸುತ್ತಿರುವ ಮೂವತ್ತರ ಈ ಯುವಕ, ಇದೇ ತಿಂಗಳ 5 ಶನಿವಾರದಂದು ಬೆಳಗ್ಗೆ 9.30 ಕ್ಕೆ ಜೆ.ಪಿ.ನಗರದ ಶ್ರೀ ರಮಣ ಮಹರ್ಷಿ ಅಕಾಡೆಮಿಯ ಪ್ರಾರ್ಥನಾ ಮಂದಿರದಲ್ಲಿ ವಿಧ್ಯುಕ್ತವಾಗಿ ತಮ್ಮ ಗುರು ವಂದನಾ ಏಕವ್ಯಕ್ತಿ ನೃತ್ಯ ಪ್ರದರ್ಶನ ಕಾರ್ಯಕ್ರಮವನ್ನು ನೆರವೇರಿಸಿಕೊಳ್ಳುವರು.



ಹುಬ್ಬಳ್ಳಿ–ಧಾರವಾಡ ನೂತನ ಪೊಲೀಸ್ ಆಯುಕ್ತ ಬೊರಸೆ ಭೂಷಣ್ ಗುಲಾಬರಾವ್ ಗುರುವಾರ ಹುಬ್ಬಳ್ಳಿಯಲ್ಲಿ ಎನ್.ಶಶಿಕುಮಾರ್ ಅವರಿಂದ ಅಧಿಕಾರ ಸ್ವೀಕರಿಸಿದರು.

# ಕೆಪಿಎಸ್‌ಸಿ ನೇಮಕಾತಿ ಹಗರಣ; ತಪ್ಪಿತಸ್ಥರೆಲ್ಲರಿಗೂ ಕಠಿಣ ಶಿಕ್ಷೆ- ಈಶ್ವರ ಖಂಡ್ರೆ

**ಬೀದರ್, ಸೆ. 3:** ಕೆಪಿಎಸ್ಸಿ ನೇಮಕಾತಿ ಹಗರಣದಲ್ಲಿ ಬಂಧಿತನಾಗಿರುವ ಬಸವರಾಜ ಕನ್ನಾಳೆ ಭಾಲ್ಕಿ ಕ್ಷೇತ್ರದ ಬಿಜೆಪಿ ಕಾರ್ಯಕರ್ತನಾಗಿದ್ದು, ವಿಧಾನಸಭಾ ಚುನಾವಣೆಯಲ್ಲಿ ನನ್ನ ವಿರುದ್ಧವೇ ಸ್ಪರ್ಧಿಸುವುದಾಗಿ ಹೇಳಿಕೊಂಡು ಓಡಾಡುತ್ತಿದ್ದ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಕೆಲವು ತಿಂಗಳ ಹಿಂದೆ ಬೆಂಗಳೂರಿನ ನನ್ನ ಕಚೇರಿಯಲ್ಲಿ ಭೇಟಿಯಾಗಲು ಬಂದಿದ್ದ ಕನ್ನಾಳೆ, ತನಗೆ ಬಿಜೆಪಿ ರಾಜ್ಯ ನಾಯಕರ ಶಿಫಾರಸಿನಿಂದ ರಾಜ್ಯಪಾಲರು ತುಮಕೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯನಾಗಿ ಮಾಡಿದ್ದಾರೆ. ಆಶೀರ್ವಾದ ಮಾಡಿ ಎಂದು ಹೇಳಿ ನನಗೆ ಶಾಲು ಹೊದಿಸಿ ಸಿಹಿ ನೀಡಿದ. ನಾನು ಸಿಹಿ ತಿನ್ನೋದಿಲ್ಲ ಎಂದು ಹೇಳಿ ಅವನಿಗೇ ತಿನ್ನಿಸಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಚಿತ್ರದ ಬಗ್ಗೆ ಸ್ಪಷ್ಟನೆ ನೀಡಿದ್ದಾರೆ.

ನನ್ನ ಕಚೇರಿಯಿಂದ ಹೊರಡುವಾಗ ಬಸವರಾಜ ಕನ್ನಾಳೆ, 'ಸರ್ ನಾನು ನಿಮ್ಮ ವಿರುದ್ಧವೇ ಭಾಲ್ಕಿಯಿಂದ ಸ್ಪರ್ಧಿಸುತ್ತೇನೆ' ಎಂದಿದ್ದ. ನಾನು, 'ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಅವಕಾಶ ಇದೆ. ನಿನ್ನ ಪ್ರಯತ್ನ ನೀನು ಮಾಡು' ಎಂದಿದ್ದೆ ಎಂದೂ ತಿಳಿಸಿದ್ದಾರೆ.

ನನ್ನ ಕ್ಷೇತ್ರದ ಒಬ್ಬ ವ್ಯಕ್ತಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯನಾಗಿದ್ದೇನೆ ಎಂದು ತಿಳಿಸಲು ಬಂದಾಗ ಅವರ ಜೊತೆಯಲ್ಲಿ ಸೌಜನ್ಯದಿಂದ ಮಾತನಾಡುವುದು ಒಬ್ಬ ಜನಪ್ರತಿನಿಧಿಯ ಕರ್ತವ್ಯ. ಈ ಬಗ್ಗೆ ಸ್ಪಷ್ಟ ಮಾಹಿತಿ ಇದ್ದರೂ



ಕೇಂದ್ರದ ಮಾಜಿ ಸಚಿವ ಹಾಗೂ ಪರಾಜಿತ ಸಂಸದರು ರಾಜಕೀಯ ದುರುದ್ದೇಶದಿಂದ ಇಂತಹ ಇಲ್ಲಸಲ್ಲದ ಆರೋಪ ಮಾಡಿ, ಫೋಟೋ ಬಿಡುಗಡೆ ಮಾಡಿದ್ದಾರೆ ಎಂದು ಕೇಂದ್ರದ ಮಾಜಿಸಚಿವ ಭಗವಂತ ಹೆಸರು ಪ್ರಸ್ತಾಪಿಸದೇ ಅವರ ವಿರುದ್ಧ ಕಿಡಿಕಾರಿದ್ದಾರೆ. ಇಂದು ಜೆಡಿಎಸ್ ನವರು ಈ ಫೋಟೋ ಹಾಕಿ ಅಪಪ್ರಚಾರ ಮಾಡಿದ್ದಾರೆ. ಜನರಿಗೆ ಸುಳ್ಳನ್ನೇ ನಿಜ ಎಂದು ನಂಬಿಸುವ ಪ್ರಯತ್ನ ಮಾಡುತ್ತಿದ್ದಾರೆ. ಬಿಜೆಪಿಯ ಚಿಹ್ನೆ ಇರುವ ಶಲ್ಯ ಹೊದ್ದು, ಬಿಜೆಪಿ ನಾಯಕರ ಜೊತೆ ಮುಂದಿನ ಸಾಲಿನಲ್ಲಿ ಕುಳಿತು ಫೋಟೋಗೆ ಫೋಸ್ ನೀಡಿರುವ ಹಾಗೂ ಹಲವು ಬಿಜೆಪಿ ನಾಯಕರೇ ಸಿಹಿ ತನಿಸಿರುವ ಫೋಟೋಗಳೂ ಸಾಮಾಜಿಕ ಜಾಲತಾಣದಲ್ಲಿವೆ. ಈ ಬಗ್ಗೆ ಬಿಜೆಪಿ ಹಾಗೂ ಜೆಡಿಎಸ್ ನವರು ಮಾತನಾಡಲಿ ಎಂದು ಈಶ್ವರ ಖಂಡ್ರೆ ಹೇಳಿದ್ದಾರೆ.

ಖೂಬಾ, ಬಸವರಾಜ ಕನ್ನಾಳ ಜೊತೆ ಅತ್ಯಂತ ಆಪ್ತತೆ ಹೊಂದಿರುವುದು ಇಡೀ ಬೀದರ್‌ಗೆ ತಿಳಿದ ವಿಚಾರ ವಾಗಿದೆ. ತಮ್ಮ ತಪ್ಪು ಮುಚ್ಚಿಕೊಳ್ಳಲು, ತಾವು ಮಾಡಿದ ಪಾಪವನ್ನು ಮತ್ತೊಬ್ಬರ ಹೆಗಲಿಗೆ ಕಟ್ಟುವ ಪ್ರಯತ್ನ ಅತ್ಯಂತ ನೀಚತನದ್ದಾಗಿದ್ದು, ಇದನ್ನು ಖಂಡಿಸುತ್ತೇನೆ ಎಂದು ಪ್ರತಿಕ್ರಿಯಿಸಿದ್ದಾರೆ.

ಕೋತಿ ಮೊಸರನ್ನ ತಿಂದು ಮೇಕೆ ಬಾಯಿಗೆ ಒರೆಸಿತು ಎನ್ನುವಂತೆ ಕೆಲವರು ವರ್ತಿಸುತ್ತಿದ್ದಾರೆ. ಇವರೂ ಕನ್ನಾಳೆ ಜೊತೆಗೆ ಈ ಅಕ್ರಮ ವ್ಯವಹಾರದಲ್ಲಿ ಭಾಗಿಯಾಗಿದ್ದಾರೆಯೇ ಎಂಬ ಶಂಕೆ ಮೂಡುತ್ತಿದೆ. ಈ ಬಗ್ಗೆ ಪಾರದರ್ಶಕ ಹಾಗೂ ಸಮಗ್ರ ತನಿಖೆ ಆಗಬೇಕು. ಯಾರು ಎಷ್ಟೇ ದೊಡ್ಡವರಾಗಿದ್ದರೂ, ಪ್ರತಿಭಾವಂತ ಅಭ್ಯರ್ಥಿಗಳಿಗೆ ವಂಚನೆ ಮಾಡಿದವರಿಗೆ ಕಠಿಣ ಶಿಕ್ಷೆ ಆಗಬೇಕು. ಆ ಕಾರ್ಯವನ್ನು ನಮ್ಮ ಸರ್ಕಾರ ಮಾಡುತ್ತದೆ ಎಂಬ ವಿಶ್ವಾಸವನ್ನು ಈಶ್ವರ ಖಂಡ್ರೆ ವ್ಯಕ್ತಪಡಿಸಿದ್ದಾರೆ.

ನೇಮಕಾತಿ ಹಗರಣದಲ್ಲಿ ಭಾಗಿಯಾಗಿರುವವರ ನಿಕಟವರ್ತಿಗಳ ಬಗ್ಗೆ ಸಮಗ್ರ ತನಿಖೆ ಆದರೆ, ಮಾಜಿ ಸಂಸದರ ನಿಜ ಬಣ್ಣವೂ ಬಯಲಾಗುವ ಸಾಧ್ಯತೆ ಇದೆ ಎಂದೂ ಅವರು ತಿಳಿಸಿದ್ದಾರೆ.

# ಬೀದರ ಸಹಕಾರಿ ಸಕ್ಕರೆ ಕಾರ್ಖಾನೆ: ಹರಾಜಿಗೆ ವಿರೋಧ ಡಿಸಿಸಿ ಬ್ಯಾಂಕಿಗೆ ನುಗ್ಗಿ ಪ್ರತಿಭಟಿಸಿದ ರೈತರು

**ಬೀದರ್, ಸೆ. 3:** ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಯ (ಬಿಎಸ್‌ಎಸ್‌ಕೆ) ಹರಾಜು ಪ್ರಕ್ರಿಯೆ ಕೈಬಿಡುವಂತೆ ಆಗ್ರಹಿಸಿ, ರೈತರು ನಗರದ ಡಿಸಿಸಿ ಬ್ಯಾಂಕಿನ ಪ್ರಾಂಗಣಕ್ಕೆ ನುಗ್ಗಿ ಘೇರಾವ್ ಹಾಕಿ ಪ್ರತಿಭಟನೆ ನಡೆಸಿದ ಘಟನೆ ಇಂದಿಲ್ಲಿ ಜರುಗಿತು.



ನಗರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಬ್ಯಾಂಕಿನ ವರೆಗೆ ಪ್ರತಿಭಟನಾ ರ‍್ಯಾಲಿ ನಡೆಸಿದರು. ನಂತರ ಬ್ಯಾಂಕಿನ ಪ್ರವೇಶ ದ್ವಾರದ ಎದುರು ಘೋಷಣೆಗಳನ್ನು ಹಾಕಿದರು. 'ದಿಕ್ಕಾರ , ದಿಕ್ಕಾರ, ಸಚಿವ ಈಶ್ವರ ಖಂಡ್ರೆಗೆ ದಿಕ್ಕಾರ', 'ಸತ್ತಾನಪ್ಪೋ ಸತ್ತಾನ, ಅಮರ್ ಖಂಡ್ರೆ ಸತ್ತಾನ' ಎಂದು ಬ್ಯಾಂಕಿನ ಅಧ್ಯಕ್ಷರ ವಿರುದ್ಧ ಘೋಷಣೆಗಳನ್ನು ಕೂಗಿದರು.

ಬ್ಯಾಂಕಿನ ಒಳಗೆ ಹೋಗಲು ಅವಕಾಶ ಕಲ್ಪಿಸುವಂತೆ ಪೊಲೀಸರಿಗೆ ಮಾಡಿದ ಮನವಿ ಫಲಕೊಡದ ಕಾರಣ ಬ್ಯಾರಿಕೇಡ್‌ಗಳನ್ನು ತಳ್ಳಿ ಬಲವಂತವಾಗಿ ರೈತರು ಒಳಗೆ ನುಗ್ಗಿದರು. ಈ ವೇಳೆ ರೈತರು ಹಾಗೂ ಪೊಲೀಸರ ನಡುವೆ ನೂಕಾಟ, ತಳ್ಳಾಟ ನಡೆಯಿತು. ಬಳಿಕ ಬ್ಯಾಂಕಿನ ಪ್ರಾಂಗಣದಲ್ಲಿ ನಿಂತು ಘೋಷಣೆಗಳನ್ನು ಕೂಗಿದರು.

ವಿಷಯ ತಿಳಿದು ಡಿಸಿಸಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಂಜುಳಾ ಅವರು ಸ್ಥಳಕ್ಕಾಗಮಿಸಿದರು. 'ಬಿಎಸ್‌ಎಸ್‌ಕೆ ಹರಾಜು ಮಾಡಬಾರದು ಎಂದು ಸರ್ಕಾರವೇ ಆದೇಶ ಹೊರಡಿಸಿದೆ. ಹೀಗಿದ್ದರೂ ಹರಾಜು ಮಾಡುತ್ತಿರುವುದೇಕೆ? ಕೂಡಲೇ ಹರಾಜು ನಿಲ್ಲಿಸಬೇಕು' ಎಂದು ರೈತರು ಆಗ್ರಹಿಸಿದರು.

ಸಕ್ಕರೆ ಕಾರ್ಖಾನೆ ಕೋಟ್ಯಂತರ ಸಾಲದಲ್ಲಿದೆ. ಸಾಲ ತೀರಿಸದೇ 'ಬ್ಯಾಂಕ್ ನಡೆಸಲು ಕಷ್ಟವಾಗುತ್ತಿರುವುದ ರಿಂದ ಈ ನಿರ್ಧಾರಕ್ಕೆ ಬರಲಾಗಿದೆ' ಎಂದು ಮಂಜುಳಾ ಹೇಳಿದರು. 'ಇತರೆ ಕಾರ್ಖಾನೆಗಳು ಕೂಡ ಸಾಲದಲ್ಲಿಲ್ಲವೇ' ಎಂದು ರೈತರು ಮರು ಪ್ರಶ್ನೆ ಹಾಕಿದರು. ಇದಾದ ನಂತರ ನಾರಂಜಾ ಕಾರ್ಖಾನೆಯ ಹರಾಜು ಕೂಡ ನಡೆಯಲಿದೆ ಎಂದು ತಿಳಿಸಿದರು. ಆದರೆ, ರೈತರು ಇದಕ್ಕೊಪ್ಪದೆ ಘೋಷಣೆ ಕೂಗಿದರು.

ಕರ್ನಾಟಕ ರಾಜ್ಯ ರೈತಸಂಘ ಹಾಗೂ ಹಸಿರು ಸೇನೆ ಜಿಲ್ಲಾಧ್ಯಕ್ಷ ಶ್ರೀಮಂತ ಬಿರಾದಾರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಯಾನಂದ ಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಸಿದ್ದಣ್ಣ ಭೂಶೆಟ್ಟಿ, ಶಂಕರೆಪ್ಪ ಪಾರಾ, ಕಮಲನಗರ ತಾಲ್ಲೂಕು ಅಧ್ಯಕ್ಷ ಪ್ರವೀಣ ಕುಲಕರ್ಣಿ, ಬೀದರ್ ತಾಲ್ಲೂಕು ಅಧ್ಯಕ್ಷ ನಾಗಯ್ಯ ಸ್ವಾಮಿ, ಔರಾದ್ ತಾಲ್ಲೂಕು ಅಧ್ಯಕ್ಷ ಪ್ರಕಾಶ್ ಬಾವಗೆ, ಬಸವಕಲ್ಯಾಣ ತಾಲ್ಲೂಕು ಅಧ್ಯಕ್ಷ ಸುಭಾಷ್ ರಗಟೆ, ಹುಮನಾಬಾದ್ ತಾಲ್ಲೂಕು ಅಧ್ಯಕ್ಷ ಸುಭಾಷ ನನ್ನೂರೆ ಮತ್ತಿತರರು ಪಾಲ್ಗೊಂಡಿದ್ದರು.

ಶಾಸಕದ್ವಯರು ಮಾತನಾಡಿ, ಬಿಎಸ್‌ಎಸ್‌ಕೆ ಹರಾಜು ಮಾಡಬಾರದು ಎಂದು ಮನವಿ ಸಲ್ಲಿಸಿದ್ದರಿಂದ ಈಗಾಗಲೇ ಸಕ್ಕರೆ ಸಚಿವರು ಕೂಡ ಸ್ಪಂದಿಸಿದ್ದಾರೆ. 'ಹರಾಜು ಪ್ರಕ್ರಿಯೆ ತಡೆ ಹಿಡಿಯಲಾಗಿದೆ. ಶೀಘ್ರದಲ್ಲೇ ಸಂಪುಟದಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಆಶ್ವಾಸನೆ ನೀಡಿದ್ದಾರೆ. ಆದರೂ ಸಚಿವರ ಮಾತು ಲೆಕ್ಕಿಸದೇ ಹರಾಜಿಗೆ ಮುಂದಾಗಿರುವುದು ಸರಿಯಲ್ಲ ಎಂದು ಹೇಳಿದರು.

ಬೀದರ್‌ನ ಡಿಸಿಸಿ ಬ್ಯಾಂಕಿನಲ್ಲಿ ಬುಧವಾರ ನಡೆಯಬೇಕಿದ್ದ ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಯ (ಬಿಎಸ್‌ಎಸ್‌ಕೆ) ಹರಾಜು ಪ್ರಕ್ರಿಯೆ ನಡೆಯಲಿಲ್ಲ. ಹರಾಜು ಪ್ರಕ್ರಿಯೆಯಲ್ಲಿ ಮೂವರು ಬಿಡ್‌ದಾರರು ಭಾಗವಹಿಸ ಬೇಕಿತ್ತು. ಆದರೆ, ಯಾರೂ ಬರದ ಕಾರಣ ಹರಾಜು ಮುಂದೂಡಲಾಗಿದೆ ಎಂದು ಡಿಸಿಸಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಂಜುಳಾ ಅವರು ತಿಳಿಸಿದರು.

ಪ್ರತಿಭಟನಾನಿರತ ರೈತರ ಬೇಡಿಕೆಗೆ ಬೆಂಬಲ ಸೂಚಿಸಿದ ಮಾಜಿಸಚಿವ ರಾಜಶೇಖರ ಪಾಟೀಲ ಹುಮನಾಬಾದ್ ಅವರು ಬೀದರ್‌ನ ಪ್ರವಾಸಿ ಮಂದಿರದಲ್ಲಿ ರೈತರನ್ನು ಭೇಟಿ ಮಾಡಿದರು.

ನಮ್ಮದೇ ಪಕ್ಷ ಅಧಿಕಾರದಲ್ಲಿದ್ದರೂ ರೈತರ ಹಿತ ನನಗೆ ಬಹಳ ಮುಖ್ಯ. ಬಿಎಸ್‌ಎಸ್‌ಕೆ ಪುನರಾರಂಭಿಸಬೇಕೆನ್ನುವ ಬೇಡಿಕೆಗೆ ನನ್ನ ಸಂಪೂರ್ಣ ಬೆಂಬಲ ಇದೆ.

ಶೀಘ್ರದಲ್ಲೇ ಈ ಸಂಬಂಧ ಮುಖ್ಯಮಂತ್ರಿ ಹಾಗೂ ಸಕ್ಕರೆ ಸಚಿವರನ್ನು ಭೇಟಿ ಮಾಡೋಣ. ರೈತರ ನಿಯೋಗ ಕರೆದೊಯ್ಯಲು ನಾನು ಸಿದ್ಧನಿದ್ದೇನೆ ಎಂದು ಆಶ್ವಾಸನೆ ನೀಡಿದರು.

### ಪ್ರತಿಭಟನೆ ವೇಳೆ ಬೈಕ್ ಸವಾರನ ಹೆಲ್ಮೆಟ್ ಒಡೆದು ಆಕ್ರೋಶ

# ಬಿಜೆಪಿ ಮಾಜಿ ಶಾಸಕ ರಾಜಕುಮಾರ ಪಾಟೀಲ್ ವಿರುದ್ಧ ದೂರು ದಾಖಲು

**ಕಲಬುರಗಿ, ಸೆ.3:** ನಗರದಲ್ಲಿ ನಡೆದ ಪ್ರತಿಭಟನೆ ವೇಳೆ ಬೈಕ್ ಸವಾರರೊಬ್ಬರ ಹೆಲ್ಮೆಟ್ ಒಡೆದು ಆಕ್ರೋಶ ವ್ಯಕ್ತಪಡಿಸಿದ ಘಟನೆಗೆ ಸಂಬಂಧಿಸಿದಂತೆ, ಬಿಜೆಪಿ ಮುಖಂಡ ಹಾಗೂ ಮಾಜಿ ಶಾಸಕ ರಾಜಕುಮಾರ ಪಾಟೀಲ ತೇಲ್ಕೂರ ಮತ್ತು ಬಿಜೆಪಿ ಗ್ರಾಮೀಣ ಜಿಲ್ಲಾಧ್ಯಕ್ಷ ಅಶೋಕ ಬಗಲಿ ವಿರುದ್ಧ ಇಲ್ಲಿನ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.



ರಾಜ್ಯ ಸರ್ಕಾರದ ಬರಪೀಡಿತ ತಾಲ್ಲೂಕುಗಳ ಪಟ್ಟಿಯಲ್ಲಿ ಕಲಬುರಗಿ ಜಿಲ್ಲೆಯ ತಾಲ್ಲೂಕುಗಳನ್ನು ಸೇರಿಸದಿರುವುದನ್ನು ಖಂಡಿಸಿ ಬಿಜೆಪಿ ನಾಯಕರು ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಿದ್ದರು. ಯಾವುದೇ ಪೂರ್ವಾನುಮತಿ ಪಡೆಯದೆ ಸಾರ್ವಜನಿಕ ರಸ್ತೆ ತಡೆದು ಪ್ರತಿಭಟನೆ ನಡೆಸಲಾಗಿದೆ. ಅಲ್ಲದೆ, ಸಾರ್ವಜನಿಕ ವಾಹನ ಸವಾರರನ್ನು ಅಕ್ರಮವಾಗಿ ತಡೆದು ನಿಲ್ಲಿಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿ ಬೆದರಿಕೆ ಹಾಕಲಾಗಿದೆ ಎಂದು ಪೊಲೀಸರು ಎಫ್‌ಐಆರ್‌ನಲ್ಲಿ ಉಲ್ಲೇಖಿಸಿದ್ದಾರೆ. ಪ್ರತಿಭಟನೆಯಿಂದಾಗಿ ನಗರದಲ್ಲಿ ತೀವ್ರ ಸಂಚಾರ ದಟ್ಟಣೆ ಉಂಟಾಗಿತ್ತು. ಇದರಿಂದ ಬೇಸತ್ತ ಸಾರ್ವಜನಿಕರು ಹಾಗೂ ವಾಹನ ಸವಾರರು ಐವಾನ್–ಇ–ಶಾಹಿ ರಸ್ತೆಯತ್ತ ತೆರಳಲು ಯತ್ನಿಸಿದಾಗ, ಮಾಜಿ ಶಾಸಕ ರಾಜಕುಮಾರ ಪಾಟೀಲ ತೇಲ್ಕೂರ್ ಹಾಗೂ ಇತರ ಬಿಜೆಪಿ ಮುಖಂಡರು ಅವರನ್ನು ತಡೆದು ತೀವ್ರ ವಾಗ್ವಾದ ನಡೆಸಿದ್ದರು. ಈ ವೇಳೆ ಆಕ್ರೋಶಗೊಂಡ ತೇಲ್ಕೂರ್ ಅವರು ದ್ವಿಚಕ್ರ ವಾಹನ ಸವಾರರೊಬ್ಬರ ಕೈಯಲ್ಲಿದ್ದ ಹೆಲ್ಮೆಟ್ ಕಸಿದುಕೊಂಡು ರಸ್ತೆಗೆ ಅಪ್ಪಳಿಸಿ ಒಡೆದು ಹಾಕಿದ್ದರು.ಅಷ್ಟಕ್ಕೇ ನಿಲ್ಲದೆ, ಬೈಕ್‌ನ ಚಕ್ರದ ಗಾಳಿ ತೆಗೆದು ಸಾರ್ವಜನಿಕರಿಗೆ ಕಿರುಕುಳ ನೀಡಿದ ಗಂಭೀರ ಆರೋಪ ಕೇಳಿಬಂದಿದೆ.

ಇದೇ ವೇಳೆ ಮಾರ್ಗ ಮಧ್ಯೆ ಬಂದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬಸ್ ಚಾಲಕರೊಂದಿಗೂ ತೇಲ್ಕೂರ್ ಹಾಗೂ ಬೆಂಬಲಿಗರು ಉಗ್ರವಾಗಿ ವಾಗ್ವಾದ ನಡೆಸಿ ಸಂಚಾರಕ್ಕೆ ಅಡ್ಡಿಪಡಿಸಿದ್ದರು. ಈ ಘಟನೆಯ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಬೆನ್ನಲ್ಲೇ ಪೊಲೀಸರು ಕಾನೂನು ಕ್ರಮ ಜರುಗಿಸಿದ್ದಾರೆ.

# ಪಿಎಂ ಗತಿಶಕ್ತಿ ಯೋಜನೆ, ರೈಲುನಿಲ್ದಾಣ ಕಾಮಗಾರಿ ಸಂಸದ ಜಿ.ಕುಮಾರ ನಾಯಕ ಪರಿಶೀಲನೆ

**ರಾಯಚೂರು, ಸೆ. 3:** ಇಲ್ಲಿನ ರೈಲು ನಿಲ್ದಾಣದಲ್ಲಿ ಪಿಎಂ ಗತಿಶಕ್ತಿ ಯೋಜನೆಯಡಿ ನಡೆಯುತ್ತಿರುವ ನಗರದ ರೈಲು ನಿಲ್ದಾಣದ ನವೀಕರಣದ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಸಂಸದ ಜಿ.ಕುಮಾರ ನಾಯಕ ಅವರು ಪರಿಶೀಲಿಸಿದರು.



ಅಭಿವೃದ್ಧಿ ಕಾಮಗಾರಿಗಳು ನಿರೀಕ್ಷಿತ ವೇಗದಲ್ಲಿ ನಡೆಯದಿರುವುದಕ್ಕೆ ಸಂಸದರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಯಾವುದೇ ಕಾರಣಕ್ಕೂ ವಿಳಂಬ ಮಾಡದೆ, ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಗುಣಮಟ್ಟದೊಂದಿಗೆ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಗತಿಶಕ್ತಿ ಯೋಜನೆಯಡಿ ರೈಲು ನಿಲ್ದಾಣದ ಅಭಿವೃದ್ಧಿ ಕಾಮಗಾರಿಗಳನ್ನು ನಾಲ್ಕು ಹಂತಗಳಲ್ಲಿ ಕೈಗೊಳ್ಳಲಾಗುತ್ತಿದೆ. ಮೊದಲ ಹಂತದಲ್ಲಿ ?12 ಕೋಟಿ ಹಾಗೂ ಎರಡನೇ ಹಂತದಲ್ಲಿ ರೂ.17 ಕೋಟಿ ಅನುದಾನದಲ್ಲಿ ಕಾಮಗಾರಿಗಳು ನಡೆಯುತ್ತಿವೆ. ಆದರೆ, ಮೂರನೇ ಮತ್ತು ನಾಲ್ಕನೇ ಹಂತದ ಕಾಮಗಾರಿಗಳು ಇನ್ನೂ ಆರಂಭವಾಗದಿರುವ ಕುರಿತು ಸಂಸದರು ರೈಲ್ವೆ ಕಾರ್ಯನಿರ್ವಾಹಕ ಎಂಜಿನಿಯರ್ ಅವರನ್ನು ಪ್ರಶ್ನಿಸಿ, ಕಾಮಗಾರಿ ಆರಂಭಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

ರೈಲು ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಅಗತ್ಯವಿರುವ ಸ್ವಚ್ಛತೆ, ಕುಡಿಯುವ ನೀರು, ಶೌಚಾಲಯ ಸೇರಿ ಮೂಲ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಬೇಕು. ಪ್ರಯಾಣಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನಿಲ್ದಾಣದ ನಿರ್ವಹಣೆಗೆ ಹೆಚ್ಚಿನ ಆದ್ಯತೆ ನೀಡಬೇಕು. ರೈಲು ನಿಲ್ದಾಣದ ಪ್ಲಾಟ್‌ಫಾರ್ಮ್‌ಗಳು, ಪ್ರಯಾಣಿಕರ ವಿಶ್ರಾಂತಿ ಸ್ಥಳಗಳು, ಕುಡಿಯುವ ನೀರಿನ ಸೌಲಭ್ಯ, ಶೌಚಾಲಯ ಹಾಗೂ ಸ್ವಚ್ಛತಾ ವ್ಯವಸ್ಥೆಗಳನ್ನು ನಿಯಮಿತವಾಗಿ ಪರಿಶೀಲಿಸಿ, ಅಗತ್ಯವಿರುವ ಕಡೆಗಳಲ್ಲಿ ಹೆಚ್ಚುವರಿ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ನಿರ್ದೇಶನ ನೀಡಿದರು.

ರೈಲು ನಿಲ್ದಾಣ ಜಿಲ್ಲೆಯ ಪ್ರಮುಖ ಸಾರಿಗೆ ಕೇಂದ್ರವಾಗಿದ್ದು, ಪ್ರತಿದಿನ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರು ಆಗಮಿಸುತ್ತಾರೆ. ಹೀಗಾಗಿ ನಿಲ್ದಾಣದ ಅಭಿವೃದ್ಧಿ ಕಾಮಗಾರಿಗಳಲ್ಲಿ ಯಾವುದೇ ಲೋಪವಾಗದಂತೆ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

ಸ್ಥಳದಲ್ಲಿಯೇ ರೈಲ್ವೆ ಅಧಿಕಾರಿಗಳೊಂದಿಗೆ ಚರ್ಚಿಸಿದ ಸಂಸದರು, ಕಾಮಗಾರಿಗಳ ಪ್ರಗತಿ ಹಾಗೂ ಎದುರಾಗಿರುವ ತಾಂತ್ರಿಕ ಸಮಸ್ಯೆಗಳ ಕುರಿತು ಮಾಹಿತಿ ಪಡೆದು ಬಳಿಕ ರೈಲ್ವೆ ಜನರಲ್ ಮ್ಯಾನೇಜರ್ ಅವರೊಂದಿಗೆ ದೂರವಾಣಿ ಮೂಲಕ, ರಾಯಚೂರು ರೈಲು ನಿಲ್ದಾಣದ ಅಭಿವೃದ್ಧಿಗೆ ಸಂಬಂಧಿಸಿದ ಬಾಕಿ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕು ಹಾಗೂ ಪ್ರಯಾಣಿಕರಿಗೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಬೇಕು ಎಂದು ಸೂಚಿಸಿದರು.

# ನಶಾಮುಕ್ತ ಕರ್ನಾಟಕಕ್ಕಾಗಿ ವಾಕಥಾನ್ ಡಾ.ಶರಣಪ್ರಕಾಶ ಪಾಟೀಲ್ ಚಾಲನೆ



**ಕಲಬುರಗಿ, ಸೆ. 3:** ನಗರದ ಪೊಲೀಸ್ ಪರೇಡ್ ಮೈದಾನದಲ್ಲಿ ಬೆಳಗು ಎಂದಿನಂತಿರಲಿಲ್ಲ. ಸೂರ್ಯೋದಯದೊಂದಿಗೆ ಹತ್ತಾರು ಕಾಲೇಜುಗಳ ಸಾವಿರಾರು ವಿದ್ಯಾರ್ಥಿಗಳ ಪ್ರವಾಹವೇ ಹರಿದು ಬಂತು. 'ವ್ಯಸನಮುಕ್ತ ಯುವ ಕರ್ನಾಟಕ ಹಾಗೂ ಅಂಗಾಂಗದಾನದ ಮಹತ್ವ ಸಾರುವ ಘೋಷಣೆಗಳು ಮೊಳಗಿದವು.

ಗೃಹ ಇಲಾಖೆ ಮತ್ತು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಬೇಡ ಬ್ರೋ, ಆಪರೇಷನ್ ರೈಸ್, ನಶಾಮುಕ್ತ ಯುವ ಕರ್ನಾಟಕ ಮತ್ತು ಅಂಗಾಂಗ ದಾನ ಅಭಿಯಾನ' ಕುರಿತು ಅರಿವು ಮೂಡಿಸಲು 'ವಾಕಥಾನ್' ಜರುಗಿತು. ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯ ಅಭಿವೃದ್ಧಿ ಸಚಿವ ಡಾ.ಶರಣಪ್ರಕಾಶ ಪಾಟೀಲ ಅವರು, ವಾಕಥಾನ್‌ಗೆ ಚಾಲನೆ ನೀಡಿ ಯುವಕರೊಂದಿಗೆ ಹೆಜ್ಜೆ ಹಾಕಿದರು. ವಾಕಥಾನ್ ಪೊಲೀಸ್ ಪರೇಡ್ ಮೈದಾನದಿಂದ ಕಲಬುರಗಿ ಸರ್ಕಾರಿ ಬಾಲಕಿಯರ ಕಾಲೇಜು, ಹಳೇ ಎಸ್‌ಪಿ ರಸ್ತೆ, ಏಷಿಯನ್ ಮಾಲ್, ಐವಾನ್–ಇ–ಶಾಹಿ ಅತಿಥಿ ಗೃಹ ಎದುರಿನಿಂದ ಕೆಕೆಆರ್‌ಡಿ ಕಚೇರಿ, ಡಿಸಿ ಕಚೇರಿ ಗೇಟ್ ಮೂಲಕ ಸರ್ದಾರ ವಲ್ಲಭಭಾಯಿ ಪಟೇಲ ವೃತ್ತ ತಲುಪಿತು.

# ಶ್ರೀರಾಘವೇಂದ್ರ ಸ್ವಾಮಿಗಳ ಸಪ್ತ ರಾತ್ರೋತ್ಸವ ಸಮಾರೋಪ

**ಮಂತ್ರಾಲಯ, ಸೆ. 3:** ಶ್ರೀ ಗುರು ಸಾರ್ವಭೌಮ ಶ್ರೀ ರಾಘವೇಂದ್ರ ಸ್ವಾಮಿಗಳ 355ನೇ ಆರಾಧನಾ ಮಹೋತ್ಸವದ ಪ್ರಯುಕ್ತ ಆಯೋಜಿಸಿದ್ದ ಸಪ್ತ ರಾತ್ರೋತ್ಸವದ ಕಾರ್ಯಕ್ರಮಗಳ ಕೊನೆಯ ಹಂತವಾದ ಗುರುವಾರ ಮಹಾರಥೋತ್ಸವದೊಂದಿಗೆ ಸಮಾರೋಪಗೊಂಡಿತು.



ಶ್ರೀ ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥರು ಮೂಲರಾಮ ದೇವರಿಗೆ ನಂತರ ರಾಘವೇಂದ್ರ ಸ್ವಾಮಿಗಳ ಮೂಲ ಬೃಂದಾವನಕ್ಕೆ ಪೂಜೆ ಸಲ್ಲಿಸಿ, ದೇವಸ್ಥಾನದ ಆವರಣದಲ್ಲಿ ಮಹಾ ರಥೋತ್ಸವಕ್ಕೆ ಚಾಲನೆ ನೀಡಿದರು.


ಅಹೋಬಿಲ ಶ್ರೀಲಕ್ಷ್ಮಿ ನರಸಿಂಹ ಸ್ವಾಮಿ ದೇವಸ್ಥಾನದ ಅಧಿಕಾರಿಗಳು ಮತ್ತು ಅರ್ಚಕರು ಪವಿತ್ರ ಶೇಷವಸ್ತ್ರ ಮತ್ತು ಪ್ರಸಾದವನ್ನು ತಂದು ಸ್ವಾಮೀಜಿಗೆ ಅರ್ಪಿಸಿದರು.

ಪ್ರಹ್ಲಾದ ರಾಜರ ಮಹಾ ಅಶ್ವವಾಹನೋತ್ಸವ ವೈಭವದಿಂದ ನಡೆಯಿತು. ಅಪಾರ ಸಂಖ್ಯೆಯ ಭಕ್ತರು ಆಚರಣೆಯಲ್ಲಿ ಭಾಗವಹಿಸಿ ಶ್ರೀ ರಾಯರ ಆಶೀರ್ವಾದ ಪಡೆದರು.

ರಾಘವೇಂದ್ರ ಸ್ವಾಮಿ ಮಠದ ಸಿಬ್ಬಂದಿ ತಮ್ಮ ವೇತನ ಹೆಚ್ಚಳದ ನಂತರ 355ನೇ ಆರಾಧನಾ ಮಹೋತ್ಸವದ ಸಂದರ್ಭದಲ್ಲಿ ಕೃತಜ್ಞತೆ ಮತ್ತು ಗೌರವವನ್ನು ವ್ಯಕ್ತಪಡಿಸಿ ಸ್ವಾಮೀಜಿಯವರಿಗೆ ಗುರುವಂದನೆ ಸಲ್ಲಿಸಿದರು.

# ಶ್ರೀ ಕೃಷ್ಣ ಜನ್ಮಾಷ್ಟಮಿಗೆ ಉಡುಪಿ ಸಜ್ಜು, ನಾಳೆ ವಿಟ್ಲಪಿಂಡಿ – ಶ್ರೀಕೃಷ್ಣ ಲೀಲೋತ್ಸವ

**ಉಡುಪಿ, ಸೆ.3:** ಕೃಷ್ಣ ನಾಡು ಉಡುಪಿ ಶ್ರೀಕೃಷ್ಣ ಜನ್ಮಾಷ್ಟಮಿ ಸಂಭ್ರಮಕ್ಕೆ ಸಜ್ಜಾಗಿದೆ. ಸೆಪ್ಟೆಂಬರ್ 4ರಂದು ಶ್ರೀಕೃಷ್ಣ ಜನ್ಮಾಷ್ಟಮಿ ಹಾಗೂ ಅರ್ಘ್ಯ ಪ್ರದಾನ, ಸೆಪ್ಟೆಂಬರ್ 5ರಂದು ವಿಟ್ಲಪಿಂಡಿ – ಶ್ರೀಕೃಷ್ಣಲೀಲೋತ್ಸವ ನಡೆಯಲಿದೆ. ಅಷ್ಟಮಿ ಸಂಭ್ರಮಕ್ಕೆ ದಿನಗಣನೆ ಆರಂಭವಾಗುತ್ತಿದ್ದಂತೆ ಕೃಷ್ಣ ಮಠದ ಸುತ್ತಮುತ್ತ ಹಾಗೂ ರಥಬೀದಿಯಲ್ಲಿ ಸಿದ್ಧತೆಗಳು ಭರದಿಂದ ಸಾಗಿವೆ. ಇದರ ನಡುವೆ ಕರಾವಳಿಯ ಸಾಂಪ್ರದಾಯಿಕ ಹುಲಿವೇಷ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಸ್ಪರ್ಧೆಗಳು ಭಕ್ತರನ್ನು ಸೆಳೆಯಲು ಸಜ್ಜಾಗಿವೆ.



ನಾಳೆ ರಾತ್ರಿ 12:12ಕ್ಕೆ ಶ್ರೀಕೃಷ್ಣನಿಗೆ ಅರ್ಘ್ಯ ಪ್ರದಾನ ನಡೆಯಲಿದ್ದು, ಸೆಪ್ಟೆಂಬರ್ 5ರಂದು ವಿಟ್ಲಪಿಂಡಿ – ಶ್ರೀಕೃಷ್ಣಲೀಲೋತ್ಸವದ ವೈಭವ ಕಣ್ತುಂಬಿಕೊಳ್ಳಲು ಸಾವಿರಾರು ಕೃಷ್ಣ ಭಕ್ತರು ಉಡುಪಿಗೆ ಆಗಮಿಸುವ ನಿರೀಕ್ಷೆಯಿದೆ. ಭಕ್ತರ ಸ್ವಾಗತಕ್ಕೆ ನಗರವೂ ಸಿಂಗಾರಗೊಳ್ಳುತ್ತಿದೆ. ಅಷ್ಟಮಿ ಸಂಭ್ರಮಕ್ಕೆ ಮತ್ತಷ್ಟು ಮೆರುಗು ನೀಡೋದು ಕರಾವಳಿಯ ಸಾಂಪ್ರದಾಯಿಕ ಹುಲಿವೇಷ. ಕೃಷ್ಣ ರಥಬೀದಿಯಲ್ಲಿ ಹುಲಿಗಳ ಘರ್ಜನೆ, ಹೆಜ್ಜೆ ಹಾಗೂ ಕುಣಿತ ಕಂಗೊಳಿಸಲಿದೆ. ನೂರಾರು ಹುಲಿವೇಷ ತಂಡಗಳು ಈಗಾಗಲೇ ತಾಲೀಮು ಆರಂಭಿಸಿವೆ. ಹುಲಿವೇಷ ಸೇವೆಗೆ ಹೆಸರುವಾಸಿಯಾಗಿರುವ ತಂಡಗಲಕು ಅಷ್ಟಮಿಗಾಗಿ ಸಜ್ಜಾಗಿದ್ದು, ತಂಡದ ವತಿಯಿಂದ 11 ಹುಲಿವೇಷ ಸೇವೆಗಳನ್ನು ನಡೆಸಲು ಸಿದ್ಧತೆ ನಡೆದಿದೆ. ಹುಲಿವೇಷದ ಜೊತೆಗೆ ಕರಾವಳಿಯ ವಿವಿಧ ಸಾಂಪ್ರದಾಯಿಕ ವೇಷಗಳು, ಜನಪದ ಕಲಾ ಪ್ರದರ್ಶನಗಳು ಅಷ್ಟಮಿ ಸಂಭ್ರಮಕ್ಕೆ ಮತ್ತಷ್ಟು ಮೆರುಗು ನೀಡಲಿವೆ.

ಅಷ್ಟಮಿ ಪ್ರಯುಕ್ತ ಹುಲಿವೇಷ ಸ್ಪರ್ಧೆ, ಕೃಷ್ಣ ವೇಷ ಸ್ಪರ್ಧೆ ಸೇರಿದಂತೆ ಹಲವು ವೈವಿಧ್ಯಮಯ ಕಾರ್ಯಕ್ರಮಗಳು ನಡೆಯಲಿವೆ. ಮಕ್ಕಳಿಂದ ಹಿಡಿದು ಹಿರಿಯರವರೆಗೆ ಎಲ್ಲರನ್ನೂ ಸೆಳೆಯುವಂತೆ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ರಾಜಾಂಗಣದಲ್ಲಿ ಹುಲಿವೇಷ ಕುಣಿತ ಸೇರಿದಂತೆ ವಿವಿಧ ಸ್ಪರ್ಧೆಗಳು ನಡೆಯಲಿದ್ದು, ಎರಡು ದಿನಗಳ ಕಾಲ ವಿಶೇಷ ವೇದಿಕೆಯಲ್ಲಿ ಹುಲಿವೇಷ ಸ್ಪರ್ಧೆ ನಡೆಯಲಿದೆ. ಸೆ.5 ರಂದು ಬೆಳಗ್ಗೆ ಮಹಾಪೂಜೆ ಹಾಗೂ ಅನ್ನಸಂತರ್ಪಣೆ ನಡೆಯಲಿದೆ. ಮಧ್ಯಾಹ್ನ 3:30ಕ್ಕೆ ಚಿನ್ನದ ರಥದಲ್ಲಿ ಶ್ರೀಕೃಷ್ಣನ ಮೃಣ್ಮಯ ವಿಗ್ರಹದ ಮೆರವಣಿಗೆ ನಡೆಯಲಿದೆ. ವಿಟ್ಲಪಿಂಡಿ–ಶ್ರೀಕೃಷ್ಣಲೀಲೋತ್ಸವದ ಅಂಗವಾಗಿ ರಥಬೀದಿಯ ವಿಶೇಷ ವೇದಿಕೆಯಲ್ಲಿ ಆಹ್ವಾನಿತ ಮಲ್ಲಯುದ್ಧ ಪ್ರವೀಣರಿಂದ ಮಲ್ಲಯುದ್ಧ ಪ್ರದರ್ಶನವೂ ನಡೆಯಲಿದೆ. ಉತ್ಸವದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಲಿರುವ ಈ ಮಲ್ಲಯುದ್ಧ ಪ್ರದರ್ಶನಕ್ಕೆ ಭಕ್ತರು ಸಾಕ್ಷಿಯಾಗಲಿದ್ದಾರೆ. ವಿಶೇಷ ವೇದಿಕೆಯಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಮಕ್ಕಳಿಗಾಗಿ ವಿಶೇಷ ಕಾರ್ಯಕ್ರಮಗಳು ಹಾಗೂ ಅಂತರರಾಷ್ಟ್ರೀಯ ಮಟ್ಟದ ಕಲಾವಿದರಿಂದ ಕಲಾ ಪ್ರದರ್ಶನಗಳನ್ನೂ ಆಯೋಜಿಸಲಾಗಿದೆ. ಸೆ.6ರಂದು ಶ್ರೀಕೃಷ್ಣ ಜನ್ಮಾಷ್ಟಮಿ ಸಂಭ್ರಮದ ಸಮಾರೋಪ ಸಮಾರಂಭ ನಡೆಯಲಿದೆ. ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಗುತ್ತದೆ. ಅಷ್ಟಮಂಗಲ ಪ್ರಶ್ನೆಯ ಅನುಸಾರದಂತೆ ಕೋಟಿ ತುಳಸಿ ಅರ್ಚನೆಯನ್ನೂ ಕೈಗೊಳ್ಳಲಾಗಿದೆ.

# ಬಳ್ಳುಂಡಗಿ ಕಾಲುವೆಗೆ ಹರಿಯದ ನೀರು: ರೈತರ ಪ್ರತಿಭಟನೆ

**ಕಲಬುರಗಿ, ಸೆ. 3:** ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಸೊನ್ನ ಭೀಮ ಏತ ನೀರಾವರಿ ಉಪ ವಿಭಾಗದ ಬಳುಂಡಗಿ ಕಾಲುವೆ ಮೂಲಕ 40 ಗ್ರಾಮಗಳಿಗೆ ನೀರು ಹರಿಯಬೇಕು. ಆದರೆ, ಕಾಲುವೆಗೆ ನೀರು ಬಿಟ್ಟು ತಿಂಗಳಾದರೂ, ಕಾಲುವೆ ಕೊನೇ ಭಾಗದ ರೈತರಿಗೆ ಹನಿ ನೀರು ಸಿಗುತ್ತಿಲ್ಲ ಎಂದು ಆರೋಪಿಸಿ, ಗುರುವಾರ ಬೆಳಿಗ್ಗೆ 9 ರಿಂದಲೇ ತಾಲ್ಲೂಕಿನ ಅತನೂರು ಗ್ರಾಮದ ಬಳಿ ಕಲಬುರಗಿ–ಸೋಲಾಪುರ ರಾಷ್ಟ್ರೀಯ ಹೆದ್ದಾರಿ ತಡೆದು ರೈತ ಮುಖಂಡರು ಹಾಗೂ ಕರ್ನಾಟಕ ರಕ್ಷಣಾ ವೇದಿಕೆಯವರು ಪ್ರತಿಭಟನೆ ಆರಂಭಿಸಿದ್ದಾರೆ.



ಎರಡ್ಮೂರು ಗಂಟೆಯಿಂದ ಹೆದ್ದಾರಿ ತಡೆದಿದ್ದರಿಂದ ನೂರಾರು ವಾಹನಗಳು ಸಾಲುಗಟ್ಟಿ ನಿಂತಿದ್ದು, ವಾಹನಗಳ ಸವಾರರು, ನಾಗರಿಕರು ಪರದಾಡುತ್ತಿದ್ದಾರೆ. ಕಾಲುವೆಗಳಿಗೆ ನೀರು ಬಿಡುವ ಅಧಿಕಾರಿಗಳು, ಅದು ಎಲ್ಲಿತನಕ ಹೋಗುತ್ತಿದೆ ಎಂಬುದನ್ನು ನೋಡುತ್ತಿಲ್ಲ. ಕೊನೆಯ ಭಾಗದ ರೈತರಿಗೆ ಹನಿ ನೀರು ಸಿಗುತ್ತಿಲ್ಲ. ರೈತರು ಅಲ್ಲಲ್ಲಿ ಗೇಟ್‌ಗಳನ್ನು ಒಡೆದು ನೀರು ಪಡೆಯುತ್ತಿದ್ದಾರೆ. ಈ ಕುರಿತು ಅಧಿಕಾರಿಗಳಿಗೆ ದೂರು ನೀಡಿದರೂ ಪ್ರಯೋಜನವಾಗುತ್ತಿಲ್ಲ. ಅಂಥವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲು ಇಲಾಖೆ ಮುಂದೆ ಬರುತ್ತಿಲ್ಲ. ಹೀಗಾಗಿ ಕಾಲುವೆಗಳಿಗೆ ಬಿಟ್ಟಿರುವ ನೀರು ಮಧ್ಯದಲ್ಲೇ ಪೋಲಾಗುತ್ತಿದೆ ಎಂದು ಪ್ರತಿಭಟನೆ ನಡೆಸುತ್ತಿರುವ ರೈತರು ದೂರಿದರು. ಪ್ರತಿಭಟನೆಯಲ್ಲಿ ಅತನೂರಿನ ಅಂಕಲಗಿ ಮಠದ ಗುರುಬಸವ ಶಿವಾಚಾರ್ಯ ಹಾಗೂ ರೈತ ಮುಖಂಡರಾದ ಸಿದ್ದರಾಮ ಧಣ್ಣೂರ, ಲತಿಫ್, ಮೆಹಬೂಬ್ ಸಿದನೂರ, ಸಂತೋಷ್ ಮಲಗೊಂಡ, ರಾಜು ಶೆಟ್ಟಿ, ಅಣ್ಣಾರಾವ್ ಪಾಟೀಲ, ಮಹಾಂತಗೌಡ ಬಿರಾದಾರ, ಶಂಕ್ರಯ್ಯ ಮಠಪತಿ, ಕರ್ನಾಟಕ ರಕ್ಷಣಾ ವೇದಿಕೆ ಮುಖಂಡರಾದ ಶ್ರೀಕಾಂತ್ ದಿವಾನಜಿ ಹಾಗೂ ಮೆಹಬೂಬ್ ನದಾಫ್ ಸೇರಿದಂತೆ ನೂರಾರು ರೈತ ಮುಖಂಡರು ಧರಣಿಯಲ್ಲಿ ಪಾಲ್ಗೊಂಡಿದ್ದಾರೆ.

ಪ್ರತಿಭಟನಾ ನಿರತ ಸ್ಥಳಕ್ಕೆ ತಹಶೀಲ್ದಾರ್ ಸಂಜೀವಕುಮಾರ್ ದಾಸರ್ ಸೇರಿದಂತೆ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ರೈತರ ಮನವೊಲಿಕೆಗೆ ಪ್ರಯತ್ನಿಸಿದರು. ನೀರಾವರಿ ನಿಗಮದ ಅಧಿಕಾರಿಗಳು ಕೂಡ ಸ್ಥಳದಲ್ಲೇ ಠಿಕಾಣಿ ಹೂಡಿ, ಒಂದೆರಡು ದಿನಗಳಲ್ಲಿ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡುತ್ತಿದ್ದಾರೆ. ಆದರೆ ಇದುವರೆಗೂ ನೀಡಿರುವ ಭರವಸೆ ಈಡೇರಿಲ್ಲವಾದ್ದರಿಂದ ಮೊದಲು ನೀರು ಬಿಡುವ ವ್ಯವಸ್ಥೆ ಮಾಡಿದ ನಂತರವೇ ಧರಣಿ ಹಿಂಪಡೆಯುವುದಾಗಿ ಹೋರಾಟಗಾರರು ಪಟ್ಟು ಹಿಡಿದು ಕುಳಿತಿದ್ದಾರೆ.

# ಇರಾನ್‌ಗೆ ನೆರವಾದರೆ ನಿರ್ಬಂಧ: ವಿಶ್ವ ರಾಷ್ಟ್ರಗಳಿಗೆ ಅಮೆರಿಕ ಎಚ್ಚರಿಕೆ

**ವಾಷಿಂಗ್ಟನ್, ಸೆ.3:** ಶಾಂಘೈ ಸಹಕಾರ ಸಂಘಟನೆ (ಎಸ್‌ಸಿಒ) ಶೃಂಗಸಭೆಯ ನೇಪಥ್ಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರನ್ನು ಭೇಟಿಯಾದ ಬೆನ್ನಲ್ಲೇ, ಅಮೆರಿಕವು ಭಾರತ ಸೇರಿದಂತೆ ಜಾಗತಿಕ ರಾಷ್ಟ್ರಗಳಿಗೆ ಕಠಿಣ ಎಚ್ಚರಿಕೆ ರವಾನಿಸಿದೆ. ಇರಾನ್ ಮೇಲಿನ ಅಮೆರಿಕದ ಆರ್ಥಿಕ ದಿಗ್ಬಂಧನಗಳನ್ನು ತಪ್ಪಿಸಲು ಯಾವುದೇ ರಾಷ್ಟ್ರಗಳು ನೆರವಾದರೂ ತಕ್ಕ ಶಾಸ್ತಿ ಅನುಭವಿಸಬೇಕಾಗುತ್ತದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಗುಡುಗಿದ್ದಾರೆ.



ಅಮೆರಿಕದ ನೂತನ ಟ್ರಂಪ್ ಆಡಳಿತವು ಇರಾನ್ ವಿರುದ್ಧ ಆರ್ಥಿಕ ಸಮರವನ್ನು ತೀವ್ರಗೊಳಿಸಿದೆ. ಆಪರೇಷನ್ ಎಕನಾಮಿಕ್ ಔಟ್‌ಕಾಸ್ಟ್ (ಆರ್ಥಿಕ ಬಹಿಷ್ಕಾರ ಕಾರ್ಯಾಚರಣೆ) ಹೆಸರಿನಲ್ಲಿ ಇರಾನ್‌ನ ಆರ್ಥಿಕ ಮೂಲಗಳನ್ನು ಮುಚ್ಚಲು ಅಮೆರಿಕ ಮುಂದಾಗಿದೆ. ಭಾರತ ಮತ್ತು ಇರಾನ್ ನಡುವೆ ಯಾವುದೇ ಹೊಸ ವ್ಯಾಪಾರ ಒಪ್ಪಂದ ನಡೆದಿಲ್ಲ ಎಂಬುದು ನಮಗೆ ತಿಳಿದಿದೆ. ಪ್ರತಿಯೊಂದು ದೇಶಕ್ಕೂ ತನ್ನದೇ ಆದ ವಿದೇಶಾಂಗ ನೀತಿ ಹೊಂದುವ ಹಕ್ಕಿದೆ. ಆದರೆ, ಇರಾನ್ ತನ್ನ ಪರಮಾಣು ಶಸ್ತ್ರಾಸ್ತ್ರ ಯೋಜನೆ ಹಾಗೂ ಭಯೋತ್ಪಾದನೆಗೆ ಸಂಪನ್ಮೂಲ ಕ್ರೋಢೀಕರಿಸಲು ಯಾವುದೇ ದೇಶವು ಹೊಸ ಮಾರ್ಗಗಳನ್ನು ಸೃಷ್ಟಿಸಿಕೊಟ್ಟರೆ, ಆ ದೇಶಗಳ ಮೇಲೂ ನಾವು ಕಠಿಣ ದಿಗ್ಬಂಧನ ಹೇರಲಿದ್ದೇವೆ ಎಂದು ರುಬಿಯೊ ಸ್ಪಷ್ಟಪಡಿಸಿದ್ದಾರೆ.

ಇತ್ತೀಚೆಗಷ್ಟೇ ಬಿಷ್ಕೆಕ್‌ನಲ್ಲಿ ನಡೆದ ಎಸ್‌ಸಿಒ ಶೃಂಗಸಭೆಯಲ್ಲಿ ಪ್ರಧಾನಿ ಮೋದಿ ಮತ್ತು ಇರಾನ್ ಅಧ್ಯಕ್ಷ ಪೆಜೆಶ್ಕಿಯಾನ್ ಮಾತುಕತೆ ನಡೆಸಿದ್ದರು. ಈ ವೇಳೆ ಉಭಯ ನಾಯಕರು ದ್ವಿಪಕ್ಷೀಯ ವ್ಯಾಪಾರ ವಿಸ್ತರಣೆ, ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷ ಮತ್ತು ವಾಣಿಜ್ಯ ಹಡಗುಗಳ ಸುರಕ್ಷತೆ ಕುರಿತು ಸುದೀರ್ಘ ಚರ್ಚೆ ನಡೆಸಿದ್ದರು. ಭಾರತವು ಇರಾನ್ ಜೊತೆಗಿನ ತನ್ನ ಐತಿಹಾಸಿಕ ಹಾಗೂ ದೀರ್ಘಕಾಲದ ಸ್ನೇಹವನ್ನು ವಿವಿಧ ವಲಯಗಳಲ್ಲಿ ಮತ್ತಷ್ಟು ವಿಸ್ತರಿಸಲು ಬದ್ಧವಾಗಿದೆ ಎಂದು ಪ್ರಧಾನಿ ಮೋದಿ ಇದೇ ವೇಳೆ ಪುನರುಚ್ಚರಿಸಿದ್ದರು.

ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದ ಪ್ರಧಾನಿ ಮೋದಿ, ವಿವಾದಗಳನ್ನು ಕೇವಲ ರಾಜತಾಂತ್ರಿಕತೆ ಮತ್ತು ಸಂವಾದದ ಮೂಲಕವೇ ಬಗೆಹರಿಸಿಕೊಳ್ಳಬೇಕು ಎಂದಿದ್ದರು. ವಿಶೇಷವಾಗಿ ಅಂತಾರಾಷ್ಟ್ರೀಯ ಜಲಸಾರಿಗೆ ಮಾರ್ಗದಲ್ಲಿ ವಾಣಿಜ್ಯ ಹಡಗುಗಳು ಮತ್ತು ನಾವಿಕರ ಮೇಲಿನ ದಾಳಿಯನ್ನು ತಡೆಯಬೇಕು ಹಾಗೂ ನಾಗರಿಕ ಮೂಲಸೌಕರ್ಯಗಳಿಗೆ ಯಾವುದೇ ಹಾನಿಯಾಗದಂತೆ ನೋಡಿಕೊಳ್ಳಬೇಕು ಎಂದು ಒತ್ತಾಯಿಸಿದ್ದರು. ಜಾಗತಿಕ ಹಡಗು ಸಂಚಾರದಲ್ಲಿ ತಡೆಯುಂಟಾದರೆ, ಅದು ಆ ಭಾಗದಲ್ಲಿ ವಾಣಿಜ್ಯ ಹಿತಾಸಕ್ತಿ ಹೊಂದಿರುವ ಭಾರತದ ಮೇಲೂ ನೇರ ಪರಿಣಾಮ ಬೀರಲಿದೆ.

ಇದೇ ವೇಳೆ, ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆಗೆ ತನ್ನ ರಾಜತಾಂತ್ರಿಕ ಪ್ರಭಾವ ಬಳಸುವಂತೆ ಇರಾನ್ ಅಧ್ಯಕ್ಷ ಪೆಜೆಶ್ಕಿಯಾನ್ ಭಾರತವನ್ನು ಕೋರಿದ್ದಾರೆ. ಅಮೆರಿಕವು ರಾಜತಾಂತ್ರಿಕತೆಯನ್ನು ಬದಿಗೊತ್ತಿ ಯುದ್ಧ, ಅಭದ್ರತೆ ಮತ್ತು ಬಲವಂತದ ಹಾದಿ ಹಿಡಿದಿದೆ. ಇರಾನ್‌ಗೆ ಯುದ್ಧ ಬೇಕಿಲ್ಲ ಎಂದು ಅವರು ಅಮೆರಿಕದ ನೀತಿಯನ್ನು ಟೀಕಿಸಿದ್ದಾರೆ. ಒಂದು ಕಡೆ ಅಮೆರಿಕದ ಜೊತೆಗಿನ ಬಲಿಷ್ಠ ವ್ಯೂಹಾತ್ಮಕ ಬಾಂಧವ್ಯ, ಮತ್ತೊಂದೆಡೆ ಇರಾನ್ ಜೊತೆಗಿನ ಸಾಂಪ್ರದಾಯಿಕ ವ್ಯಾಪಾರ ಸಂಬಂಧ ಇವೆರಡರ ನಡುವೆ ಸಮತೋಲನ ಸಾಧಿಸಲು ಭಾರತವು ಇದೀಗ ಅತ್ಯಂತ ಸೂಕ್ಷ್ಮ ರಾಜತಾಂತ್ರಿಕ ಹೆಜ್ಜೆಗಳನ್ನಿಡಬೇಕಾದ ಸವಾಲು ಎದುರಾಗಿದೆ.

# ಹಾರ್ಮುಜ್ ಜಲಸಂಧಿಗೆ ನನ್ನ ಹೆಸರಿಡಿ ಡೊನಾಲ್ಡ್ ಟ್ರಂಪ್ ವಿಚಿತ್ರ ಬೇಡಿಕೆ

**ವಾಷಿಂಗ್ಟನ್, ಸೆ.3:** ವಿದೇಶಿ ನಾಯಕರನ್ನು ಟೀಕಿಸಿ ಸುದ್ದಿಯಾಗುತ್ತಿದ್ದ ಟ್ರಂಪ್, ಈ ಬಾರಿ ತಮ್ಮ ಮನ್ನಣೆಯ ದಾಹಕ್ಕೆ ಸುದ್ದಿಯಾಗಿದ್ದಾರೆ. ಎಲ್ಲಾ ರಾಜಕಾರಣಿಗಳಂತೆ ಟ್ರಂಪ್ ಕೂಡಾ ತಮ್ಮ ಹೆಸರಿನಲ್ಲಿ ಗುರುತಿಸಬಹುದಾದ ಪ್ರಸಿದ್ಧ ಸ್ಥಳಗಳಿರಬೇಕು ಎಂದು ಬಯಸುತ್ತಿದ್ದಾರೆ. ಇದಕ್ಕೆ ಅವರು ಆಯ್ಕೆ ಮಾಡಿಕೊಂಡಿದ್ದು ಹಾರ್ಮುಜ್ ಜಲಸಂಧಿ



ಈ ಬಗ್ಗೆ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಸಂದೇಶ ಹಂಚಿಕೊಂಡಿರುವ ಡೊನಾಲ್ಡ್ ಟ್ರಂಪ್, ಹಾರ್ಮುಜ್ ಜಲಸಂಧಿಗೆ ಟ್ರಂಪ್ ಜಲಸಂಧಿ ಎಂದು ಮರುನಾಮಕರಣ ಮಾಡಬಹುದು ಎಂದಿದ್ದಾರೆ. ಇದಕ್ಕಾಗಿ ಅವರು ನೀಡಿರುವ ಕಾರಣ ಕೂಡ ವಿಚಿತ್ರವಾಗಿದೆ. ಟ್ರಂಪ್ ಪ್ರಕಾರ ಒಂದು ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗದೇ ಇದ್ದಲ್ಲಿ, ಕನಿಷ್ಠ ಅದನ್ನು ಮರುನಾಮಕರಣವನ್ನಾದರೂ ಮಾಡಬೇಕು ಎನ್ನುವುದು ಟ್ರಂಪ್ ತರ್ಕವಾಗಿದೆ.

ಟ್ರಂಪ್‌ಗೆ ಮರುನಾಮಕರಣದ ಗೀಳು ಹೊಸದೇನು ಅಲ್ಲ. 2025ರ ಜನವರಿಯಲ್ಲಿ ಗಲ್ಫ್ ಆಫ್ ಮೆಕ್ಸಿಕೋ ಎಂಬ ಪ್ರದೇಶವನ್ನು ಗಲ್ಫ್ ಆಫ್ ಅಮೆರಿಕ ಎಂದು ಮರುನಾಮಕರಣ ಮಾಡಿ ಟ್ರಂಪ್ ಆದೇಶ ಪ್ರಕಟಿಸಿದ್ದರು. ಇಷ್ಟೇ ಅಲ್ಲದೆ. ಕೆನಡಾದವರು ನಮ್ಮನ್ನು ಸರಿಯಾಗಿ ನಡೆಸಿಕೊಳ್ಳಿಲ್ಲ ಎಂದು ಮುನಿಸಿಕೊಂಡು ಲೇಕ್ ಒಂಟಾರಿಯೊವನ್ನು ಲೇಕ್ ಅಮೆರಿಕ ಎಂದು ಮರುನಾಮಕರಣ ಮಾಡಿದ್ದರು. ವಿಚಿತ್ರವೆಂಬಂತೆ ಅಮೆರಿಕ ಅಧ್ಯಕ್ಷರ ತಾಳಕ್ಕೆ ಕುಣಿದಿದ್ದ ಟೆಕ್ ಕಂಪನಿಗಳಾದ ಗೂಗಲ್ ಹಾಗೂ ಆಪಲ್ ಸಂಸ್ಥೆಗಳೂ ತಮ್ಮ ಮ್ಯಾಪ್‌ಗಳಲ್ಲಿ ಹೆಸರು ಮರುನಾಮಕರಣ ಮಾಡಿದ್ದವು. ಇದಕ್ಕೆ ಸಾರ್ವಜನಿಕವಾಗಿ ವ್ಯಾಪಕ ಟೀಕೆ ವ್ಯಕ್ತವಾಗಿತ್ತು.

# ಪಾಕ್‌ನ ಪಂಜಾಬ್ ಪ್ರಾಂತ್ಯದ ಹಳೆಯ ಪುರಾತನ ಹಿಂದು ದೇವಾಲಯ ಧ್ವಂಸ

**ಲಾಹೋರ್, ಸೆ.3:** ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಶತಮಾನಗಳಷ್ಟು ಹಳೆಯದಾದ ಹಿಂದೂ ದೇವಾಲಯವನ್ನು ಧ್ವಂಸಗೊಳಿಸಲಾಗಿದೆ. ಈ ವರದಿ ಬೆನ್ನಲ್ಲೇ ಕೃತ್ಯವನ್ನು ಭಾರತ ತೀವ್ರವಾಗಿ ಖಂಡಿಸಿದೆ. ದೇವಾಲಯದ ಭೂಮಿಯಲ್ಲಿ ಅಥವಾ ಅದರ ಹತ್ತಿರ ಮದರಸಾ ನಿರ್ಮಿಸಲು ಇದನ್ನು ಕೆಡವಲಾಗಿದೆ ಎಂದು ಅಲ್ಪಸಂಖ್ಯಾತ ಪ್ರತಿನಿಧಿಗಳು ಮತ್ತು ಸ್ಥಳೀಯ ನಿವಾಸಿಗಳು ಆರೋಪಿಸಿದ್ದಾರೆ. ಇದು ಅಲ್ಪಸಂಖ್ಯಾತರ ಪೂಜಾಸ್ಥಳದ ಮೇಲಿನ ದಾಳಿ ಮತ್ತು ಧಾರ್ಮಿಕ ಪರಂಪರೆಯನ್ನು ರಕ್ಷಿಸುವಲ್ಲಿ ಅಧಿಕಾರಿಗಳ "ಆತಂಕಕಾರಿ" ವೈಫಲ್ಯದ ಸಂಕೇತವಾಗಿದೆ ಎಂದು ಕರೆದಿದ್ದಾರೆ. ಲಾಹೋರ್‌ನಿಂದ 130 ಕಿಲೋಮೀಟರ್ ದೂರದಲ್ಲಿರುವ ನರೋವಲ್‌ನ ಸಿರಾಜ್ ಗ್ರಾಮದಲ್ಲಿರುವ ದೇವಾಲಯವನ್ನು ಆಗಸ್ಟ್ 21 ರಂದು ಕೆಡವಲಾಗಿದೆ ಎಂದು ವರದಿಯಾಗಿದೆ. ಆದರೆ ಶತಮಾನಕ್ಕೂ ಹೆಚ್ಚು ಹಳೆಯದಾದ ರಚನೆಯು ಧಾರಾಕಾರ ಮಳೆಯ ನಂತರ ಕುಸಿದಿದೆ ಎಂದು ಪಾಕಿಸ್ತಾನಿ ಅಧಿಕಾರಿಗಳು ಹೇಳಿದ್ದಾರೆ. ದುಷ್ಕರ್ಮಿಗಳ ಕೃತ್ಯವನ್ನು ಖಂಡಿಸಿರುವ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಪಾಕಿಸ್ತಾನದ ನರೋವಲ್‌ನ ಸಿರಾಜ್ ಗ್ರಾಮದಲ್ಲಿ ಐತಿಹಾಸಿಕ ಹಿಂದೂ ದೇವಾಲಯವನ್ನು ನಾಶಪಡಿಸಿದ ಬಗ್ಗೆ ನಾವು ತೀವ್ರ ಕಳವಳದಿಂದ ಗಮನಿಸಿದ್ದೇವೆ. ಶತಮಾನಗಳಷ್ಟು ಹಳೆಯದಾದ ಅಲ್ಪಸಂಖ್ಯಾತರ ಪೂಜಾಸ್ಥಳದ ವಿರುದ್ಧದ ಈ ವಿಧ್ವಂಸಕ ಕೃತ್ಯವನ್ನು ನಾವು ನಿಸ್ಸಂದಿಗ್ಧವಾಗಿ ಖಂಡಿಸುತ್ತೇವೆ" ಎಂದು ಜೈಸ್ವಾಲ್ ಹೇಳಿದರು.



ಈ ಸ್ಥಳವನ್ನು ಪಾಕ್‌ನ ಅಧಿಕಾರಿಗಳು ವಿಫಲರಾಗಿರುವುದನ್ನು ಪ್ರಶ್ನಿಸಿದ್ದಾರೆ. ಅಧಿಕಾರಿಗಳ ಸ್ಪಷ್ಟ ನಿರಾಸಕ್ತಿ ಮತ್ತು ಈ ಶತಮಾನಗಳಷ್ಟು ಹಳೆಯ ದೇವಾಲಯವನ್ನು ರಕ್ಷಿಸುವಲ್ಲಿ ವಿಫಲವಾಗಿರುವುದು ಆತಂಕಕಾರಿ ಎಂದಿದ್ದಾರೆ. ಜತೆಗೆ ಈ ಬಗ್ಗೆ ತ್ವರಿತ ಮತ್ತು ಪಾರದರ್ಶಕ ತನಿಖೆ ನಡೆಸುವಂತೆ ಪಾಕಿಸ್ತಾನ ಸರ್ಕಾರವನ್ನು ಕೋರಿದ್ದಾರೆ. "ಅಪವಿತ್ರಗೊಳಿಸಲಾದ" ದೇವಾಲಯವನ್ನು ಪುನಃಸ್ಥಾಪಿಸಲು ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಸುರಕ್ಷತೆ, ಭದ್ರತೆ ಮತ್ತು ಯೋಗಕ್ಷೇಮವನ್ನು ರಕ್ಷಿಸಲು ಮತ್ತು ಅವರ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯೊಂದಿಗೆ ತನ್ನ ಮೂಲಭೂತ ಕರ್ತವ್ಯವನ್ನು ಪೂರೈಸಲು ಇಸ್ಲಾಮಾಬಾದ್ ಅನ್ನು ತಕ್ಷಣ ಕ್ರಮಗಳನ್ನು ತೆಗೆದುಕೊಳ್ಳುವಂತೆಯೂ ಒತ್ತಾಯಿಸಿದ್ದಾರೆ.ಸುದ್ದಿ ಸಂಸ್ಥೆ ಪಿಟಿಐ ಪ್ರಕಾರ, ಪಾಕಿಸ್ತಾನ ಮಸಿಹಾ ಮಿಲ್ಲತ್ ಪಕ್ಷ (ಪಿಎಂಎಂಪಿ), ಹಿಂದೂ ಸಮುದಾಯದ ಪ್ರತಿನಿಧಿಗಳು ಮತ್ತು ಸ್ಥಳೀಯ ನಿವಾಸಿಗಳು ಧಾರ್ಮಿಕ ಮತಾಂಧರು ಉದ್ದೇಶಪೂರ್ವಕವಾಗಿ ದೇವಾಲಯವನ್ನು ಕೆಡವಿದ್ದಾರೆ ಮತ್ತು ಅದರ ಭೂಮಿಯನ್ನು ಪಕ್ಕದ ಮದರಸಾಕ್ಕೆ ಸಂಬಂಧಿಸಿದಂತೆ ಬಳಸಲು ಗುರಿಯಾಗಿಸಲಾಗಿದೆ ಎಂದು ಆರೋಪಿಸಿದ್ದಾರೆ. ಪಿಎಂಎಂಪಿ ಅಧ್ಯಕ್ಷ ಅಸ್ಲಾಂ ಪರ್ವೇಜ್ ಸಹೋತ್ರಾ ಅವರು ಸರ್ಕಾರದ ಹಸ್ತಕ್ಷೇಪವನ್ನು ಕೋರಿದ್ದಾರೆ, ಆಗಸ್ಟ್ 28 ರಂದು ಪಂಜಾಬ್ ಹೆಚ್ಚುವರಿ ಗೃಹ ಕಾರ್ಯದರ್ಶಿಯನ್ನು ಭೇಟಿ ಮಾಡಿ ಹೊಣೆಗಾರರೆಂದು ಹೇಳಲಾದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ದೂರು ಸಲ್ಲಿಸಿದ್ದಾರೆ.

ನಿಷೇಧಿತ ಇಸ್ಲಾಮಿಕ್ ರಾಜಕೀಯ ಪಕ್ಷವಾದ ತೆಹ್ರೀಕ್–ಇ–ಲಬ್ಬೈಕ್ ಪಾಕಿಸ್ತಾನ್ ಸದಸ್ಯರು ಧ್ವಂಸದಲ್ಲಿ ಭಾಗಿಯಾಗಿದ್ದಾರೆ ಎಂದು ಸಹೋತ್ರಾ ಆರೋಪಿಸಿದ್ದಾರೆ. ದೇವಾಲಯದ ಶಿಖರದಿಂದ ಲೋಹದ ಫಿಟ್ಟಿಂಗ್‌ಗಳು, ಇಟ್ಟಿಗೆಗಳು ಮತ್ತು ಇತರ ವಸ್ತುಗಳನ್ನು ರಚನೆಯನ್ನು ಕೆಡವಿದ ನಂತರ ತೆಗೆದುಹಾಕಲಾಗಿದೆ ಎಂದು ಅವರು ಹೇಳಿದ್ದಾರೆ. ದೇವಾಲಯದ ಪಕ್ಕದಲ್ಲಿರುವ ಭೂಮಿಯನ್ನು ಈ ಹಿಂದೆ ಮದರಸಾಕ್ಕಾಗಿ ಇವಾಕ್ಯೂ ಟ್ರಸ್ಟ್ ಪ್ರಾಪರ್ಟಿ ಬೋರ್ಡ್ ಗುತ್ತಿಗೆಗೆ ನೀಡಿತ್ತು, ಆದರೆ ಬಾಡಿಗೆ ಪಾವತಿಸದ ಕಾರಣ ಆಸ್ತಿಯನ್ನು ಅದರ ಉದ್ದೇಶಿತ ಉದ್ದೇಶಕ್ಕಾಗಿ ಬಳಸದ ಕಾರಣ ಗುತ್ತಿಗೆಯನ್ನು ರದ್ದುಗೊಳಿಸಲಾಯಿತು ಎಂದು ಹೇಳಿದ್ದಾರೆ.

**ದಾಖಲೆಗಳಲ್ಲಿ ಪಟ್ಟಿ ಮಾಡದ ದೇವಾಲಯ–ಅಧಿಕಾರಿಗಳು:** ಪಾಕಿಸ್ತಾನಿ ಅಧಿಕಾರಿಗಳ ಹೇಳಿಕೆಗಳು ಇದಕ್ಕೆ ತೀವ್ರವಾಗಿ ಭಿನ್ನವಾಗಿದೆ. ಸುದ್ದಿ ಸಂಸ್ಥೆಯ ಪ್ರಕಾರ, ಇಖಿಕಃ ಹಿರಿಯ ಅಧಿಕಾರಿ ರಾಣಾ ಇಫ್ತಿಕರ್ ಅವರು ಧಾರಾಕಾರ ಮಳೆಯಿಂದಾಗಿ ದೇವಾಲಯ ಕುಸಿದಿದೆ ಎಂದು ಹೇಳಿದರು. ರಚನೆಯು ಒಂದು ಶತಮಾನಕ್ಕೂ ಹೆಚ್ಚು ಹಳೆಯದು ಎಂದು ಅವರು ದೃಢಪಡಿಸಿದರು. ನಮ್ಮ ದಾಖಲೆ ಪುಸ್ತಕಗಳಲ್ಲಿ ದೇವಾಲಯವು ಯಾವುದೇ ಹೆಸರನ್ನು ಹೊಂದಿಲ್ಲ. ಆದಾಗ್ಯೂ, ಇದು ತುಂಬಾ ಹಳೆಯದು... 100 ರಿಂದ 125 ವರ್ಷಗಳಿಗಿಂತ ಹೆಚ್ಚು ಹಳೆಯದು" ಎಂದು ಅವರು ಹೇಳಿದರು. ಪಕ್ಕದ ಭೂಮಿಯನ್ನು ಸೆಮಿನರಿಗಾಗಿ ಗುತ್ತಿಗೆಗೆ ನೀಡಲಾಗಿದ್ದರೂ, ದೇವಾಲಯದ ಸ್ವಂತ ಆಸ್ತಿಯನ್ನು ಗುತ್ತಿಗೆಗೆ ನೀಡಲಾಗಿಲ್ಲ ಎಂದು ಇಫ್ತಿಕರ್ ವಾದಿಸಿದರು.

# ಟ್ರಂಪ್ ಚಿತ್ರವಿರುವ ನಾಣ್ಯ ಬಿಡುಗಡೆ




**ವಾಷಿಂಗ್ಟನ್, ಸೆ.3:** LIBERTY" (ಸ್ವಾತಂತ್ರ್ಯ) ಮತ್ತು "IN GOD WE TRUST" (ನಾವು ದೇವರನ್ನು ನಂಬುತ್ತೇವೆ) ಎಂಬ ಘೋಷಣೆಗಳೊಂದಿಗೆ ಅಮೇರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಭಾವಚಿತ್ರವಿರುವ ನಾಣ್ಯವನ್ನು ಅಮೇರಿಕ ಬಿಡುಗಡೆ ಮಾಡಿದೆ. ನಾಣ್ಯದಲ್ಲಿ ಟ್ರಂಪ್ ಭಾವಚಿತ್ರದ ಕೆಳಗೆ "1776 ~ 2026" ಎಂಬ ದಿನಾಂಕಗಳಿದ್ದು, ಹಿಂಭಾಗದಲ್ಲಿ ಹೆಮ್ಮೆಯ ಹದ್ದು ಇರುವ 'ದಿ ಗ್ರೇಟ್ ಸೀಲ್' (ಅಮೆರಿಕದ ಅಧಿಕೃತ ಮುದ್ರೆ) ಹದ್ದು ಹಿಡಿದಿರುವ ಬ್ಯಾನರ್‌ನಲ್ಲಿ "E PLURIBUS UNUM" (ಅಂದರೆ "ಅನೇಕರಲ್ಲಿ, ಒಂದು") ಎಂಬ ಬರಹವಿದೆ.

ಅಮೆರಿಕನ್ ಪರಂಪರೆಯ 250 ವರ್ಷಗಳ ಗೌರವಾರ್ಥವಾಗಿ ಈ ನಾಣ್ಯವನ್ನು ತಯಾರಿಸಲಾಗಿದೆ ಎಂದು ಯು.ಎಸ್. ಮಿಂಟ್ (US Mint) ತಿಳಿಸಿದೆ. ಈ ವರ್ಷದ ಆರಂಭದಲ್ಲಿ 'ಯು.ಎಸ್. ಕಮಿಷನ್ ಆಫ್ ಫೈನ್ ಆರ್ಟ್ಸ್' ಈ ವಿನ್ಯಾಸಕ್ಕೆ ಅನುಮೋದನೆ ನೀಡಿತ್ತು. ಮತ್ತೊಂದೆಡೆ, ನಾಣ್ಯದ ಮೇಲೆ ತಮ್ಮ ಮುಖವನ್ನು ಮುದ್ರಿಸುವ ಆಲೋಚನೆಯನ್ನು "ಬಹಳ ವಿಶಿಷ್ಟವಾದದ್ದು" ಎಂದು ಬಣ್ಣಿಸಿದ್ದ ಟ್ರಂಪ್, ಇದರಿಂದ ತಮಗೆ ತುಂಬಾ ಗೌರವ ಎನಿಸಿದೆ ಎಂದು ಹಿಂದೆ ಹೇಳಿದ್ದರು.

**ಕೆಲವೇ ಗಂಟೆಗಳಲ್ಲಿ ಮಾರಾಟವಾದ ಟ್ರಂಪ್ ನಾಣ್ಯ:** ಅಮೆರಿಕ ಮಿಂಟ್ ಬುಧವಾರ ಮಧ್ಯಾಹ್ನದಿಂದ ಈ ನಾಣ್ಯಗಳ ಮಾರಾಟವನ್ನು ಪ್ರಾರಂಭಿಸಿತು. ಖರೀದಿದಾರರು ಇವುಗಳನ್ನು 25 ನಾಣ್ಯಗಳ ರೋಲ್‌ಗಳಲ್ಲಿ (ಸುತ್ತು) ಅಥವಾ 100 ನಾಣ್ಯಗಳ ಚೀಲಗಳಲ್ಲಿ ಖರೀದಿಸಲು ಅವಕಾಶ ನೀಡಲಾಗಿತ್ತು.

# ಏಷ್ಯನ್ ಗೇಮ್ಸ್: ಭಾರತ ತಂಡದ ಮುಖ್ಯ ಕೋಚ್ ಆಗಿ ವಿವಿಎಸ್ ಲಕ್ಷ್ಮಣ್ ನೇಮಕ

**ಮುಂಬಯಿ, ಸೆ.3:** ಸೆಪ್ಟೆಂಬರ್ 24ರಂದು ಜಪಾನ್‌ನಲ್ಲಿ ಆರಂಭವಾಗಲಿರುವ ಏಷ್ಯನ್ ಗೇಮ್ಸ್‌ನಲ್ಲಿ ಕ್ರಿಕೆಟ್ ಬಗ್ಗೆ ಹೆಚ್ಚಿನ ಗಮನ ಹರಿಸಲು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ(ಬಿಸಿಸಿಐ) ಭಾರತೀಯ ಪುರುಷರ ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿ ವಿ.ವಿ.ಎಸ್. ಲಕ್ಷ್ಮಣ್ ನೇಮಕ ಮಾಡಿದೆ.



ಭಾರತದ ಮಾಜಿ ಕ್ರಿಕೆಟಿಗ ವಿವಿಎಸ್ ಲಕ್ಷ್ಮಣ್ ಅವರು ಏಷ್ಯನ್ ಕ್ರೀಡಾಕೂಟದಲ್ಲಿ ಭಾರತದ ಮುಖ್ಯ ತರಬೇತು ದಾರರಾಗಿ ಕಾರ್ಯ ನಿರ್ವಹಿಸಲಿದ್ದಾರೆ.

ಗಮನಾರ್ಹ ವಿಚಾರ ಎಂದರೆ, ಏಷ್ಯನ್ ಕ್ರೀಡಾಕೂಟದಲ್ಲಿ ಅಥ್ಲೆಟಿಕ್ಸ್ ನಂತರ ಭಾರತ ಕ್ರಿಕೆಟ್ ತಂಡ 2ನೇ ಅತಿದೊಡ್ಡ ಸಹಾಯಕ ಸಿಬ್ಬಂದಿಯನ್ನು ಹೊಂದಿದೆ. ವಿ.ವಿ.ಎಸ್. ಲಕ್ಷ್ಮಣ್ ಅವರೊಂದಿಗೆ ಮಾಜಿ ಕ್ರಿಕೆಟಿಗರಾದ ಹೃಷಿಕೇಶ್ ಕಾನಿಟ್ಕರ್ (ಬ್ಯಾಟಿಂಗ್ ಕೋಚ್) ಹಾಗೂ ಸುನಿಲ್ ಜೋಶಿ (ಬೌಲಿಂಗ್ ಕೋಚ್) ಅವರನ್ನು ಸಹಾಯಕ ಸಿಬ್ಬಂದಿಯಾಗಿ ನೇಮಕ ಮಾಡಲಾಗಿದೆ ಎಂದು ತಿಳಿದು ಬಂದಿದೆ. ಹೆಚ್ಚುವರಿಯಾಗಿ, ಮರೂಫ್ ಫಜಂದರ್ ಏಷ್ಯನ್ ಕ್ರೀಡಾಕೂಟದಲ್ಲಿ ಸಹಾಯಕ ಸಿಬ್ಬಂದಿಯ ತಂಡದ ನಾಯಕರಾಗಿ ಕಾರ್ಯನಿರ್ವಹಿಸುತ್ತಾರೆ.

ಟೀಂ ಇಂಡಿಯಾದ ನಿಯಮಿತ ಮುಖ್ಯ ಕೋಚ್ ಆಗಿರುವ ಗೌತಮ್ ಗಂಭೀರ್ ಅವರು ಇದೇ ಅವಧಿಯಲ್ಲಿ ತಾಯ್ನಾಡಿನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ನಡೆಯಲಿರುವ ಸರಣಿಯಲ್ಲಿ ನಿರತರಾಗಿರಲಿದ್ದಾರೆ. ಈ ಹಿನ್ನೆಲೆಯಲ್ಲಿ ಬಿಸಿಸಿಐ ಸ್ಪ್ಲಿಟ್ ಕೋಚಿಂಗ್ ಮಾದರಿಯನ್ನು ಅನುಸರಿಸಿದ್ದು, ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ(NCA) ಮುಖ್ಯಸ್ಥರಾಗಿರುವ ವಿ.ವಿ.ಎಸ್. ಲಕ್ಷ್ಮಣ್ ಅವರಿಗೆ ಏಷ್ಯನ್ ಗೇಮ್ಸ್‌ನ ಜವಾಬ್ದಾರಿಯನ್ನು ವಹಿಸಿದೆ. ಏಷ್ಯನ್ ಗೇಮ್ಸ್‌ನಲ್ಲಿ ಶ್ರೇಯಸ್ ಅಯ್ಯರ್ ಅವರ ನಾಯಕತ್ವದಲ್ಲಿ ಕಣಕ್ಕಿಳಿಯಲಿರುವ ಭಾರತ ತಂಡವು ಬಲಿಷ್ಠ ಆಟಗಾರರನ್ನು ಒಳಗೊಂಡಿದೆ. ತಂಡದಲ್ಲಿ ಜಸ್‌ಪ್ರೀತ್ ಬುಮ್ರಾ, ಅಕ್ಷರ್ ಪಟೇಲ್ ಮತ್ತು ಸಂಜು ಸ್ಯಾಮ್ಸನ್ ಅವರಂತಹ ಅನುಭವಿಗಳ ಜೊತೆಗೆ ಯುವ ಆಟಗಾರರಾದ ಅಭಿಷೇಕ್ ಶರ್ಮಾ ಹಾಗೂ 15 ವರ್ಷದ ಯುವಪ್ರತಿಭೆ ವೈಭವ್ ಸೂರ್ಯವಂಶಿ ಸ್ಥಾನ ಪಡೆದಿದ್ದಾರೆ.

# ನೇಪಾಳ ಸಂತ್ರಸ್ತರನ್ನು ತಲುಪುವುದು ದೊಡ್ಡ ಸವಾಲು: ವಿಶ್ವಸಂಸ್ಥೆ

**ಕಠ್ಮಂಡು, ಸೆ.3:** ಆ.26ರಂದು ಸಂಭವಿಸಿದ ಭೀಕರ ಹಿಮಪಾತ ಮತ್ತು ಹಿಮನದಿ ಕುಸಿತದ ನಂತರ, ಹಾನಿಗೊಳಗಾದ ರಸ್ತೆಗಳಿಂದಾಗಿ ಸಂತ್ರಸ್ತ ಹಿಮಾಲಯನ್ ಸಮುದಾಯಗಳನ್ನು ತಲುಪಲು ಕಾರ್ಗೋ ಡ್ರೋನ್‌ಗಳು ಮತ್ತು ಪೋರ್ಟರ್‌ಗಳನ್ನು ಬಳಸಲು ನೆರವು ಸಿಬ್ಬಂದಿ ಯೋಚಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನೇಪಾಳದ ಪ್ರವಾಹ ಸಂತ್ರಸ್ತರನ್ನು ತಲುಪುವುದು ಅತ್ಯಂತ ದೊಡ್ಡ ಸವಾಲಾಗಿದೆ ಎಂದು ವಿಶ್ವಸಂಸ್ಥೆ ಹೇಳಿದೆ.



ಗುರುವಾರದಂದು ಎರಡೂ ದೇಶಗಳು ನೀಡಿದ ಅಧಿಕೃತ ಮಾಹಿತಿಯ ಪ್ರಕಾರ, ಚೀನಾ–ನೇಪಾಳ ಗಡಿಯ ಎರಡೂ ಬದಿಗಳಲ್ಲಿ ಈ ಭೀಕರ ವಿಕೋಪಕ್ಕೆ 1,200ಕ್ಕೂ ಹೆಚ್ಚು ಜನರು ಬಲಿಯಾಗಿದ್ದಾರೆ ಮತ್ತು ಸುಮಾರು 5,600 ಜನರು ನಾಪತ್ತೆಯಾಗಿದ್ದಾರೆ. ಇದು ನಿಜಕ್ಕೂ ನಂಬಲಸಾಧ್ಯ – ಈ ವಿಕೋಪದ ಪ್ರಮಾಣ ಮತ್ತು ವಿನಾಶದ ತೀವ್ರತೆ ಅಪಾರವಾದದ್ದು ಎಂದು ಕಠ್ಮಂಡುವಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ವಿಶ್ವಸಂಸ್ಥೆಯ ನಿವಾಸಿ ಸಂಯೋಜಕಿ ಲಿಲಾ ಪೀಟರ್ಸ್ ಯಾಹಿಯಾ ತಿಳಿಸಿದರು.

ನೇಪಾಳ ಮತ್ತು ಚೀನಾದ ಟಿಬೆಟ್ ಎರಡೂ ಪ್ರದೇಶಗಳಲ್ಲಿ ನಾಪತ್ತೆಯಾದವರಲ್ಲಿ ಕನಿಷ್ಠ 34 ದೇಶಗಳ 800 ಕ್ಕೂ ಹೆಚ್ಚು ವಿದೇಶಿಗರಿದ್ದು, ಇದರಲ್ಲಿ ಪ್ರವಾಸಿಗರು ಮತ್ತು ಯಾತ್ರಿಕರು ಸೇರಿದ್ದಾರೆ. ಕಠ್ಮಂಡುವಿನಲ್ಲಿ, ನಾಪತ್ತೆಯಾಗಿರುವ ಕೆಲವು ವಿದೇಶಿಗರ ಕುಟುಂಬಸ್ಥರು ಮಾಹಿತಿ ಸಂಗ್ರಹಿಸಲು ಆಸ್ಪತ್ರೆಗಳು ಮತ್ತು ಶವಗಾರಗಳನ್ನು ಜಾಲಾಡುತ್ತಿದ್ದಾರೆ ಎಂದು ಹೇಳಿದ್ದಾರೆ.

"ನನಗೆ ತುಂಬಾ ನಿರಾಶೆಯಾಗುತ್ತಿದೆ, ಈಗಾಗಲೇ ಹಲವು ದಿನಗಳು ಕಳೆದಿವೆ," ಎಂದು ತಮ್ಮ ಪತ್ನಿಯನ್ನು ಹುಡುಕಲು ನೇಪಾಳಕ್ಕೆ ಹಾರಿದ 53 ವರ್ಷದ ಅಮೆರಿಕನ್ ಪ್ರಜೆ ಸಂಜೀವ್ ರೈ ಹೇಳಿದರು. ನಾಪತ್ತೆಯಾಗಿರುವ 75 ಅಮೆರಿಕನ್ನರಲ್ಲಿ ಅವರ ಪತ್ನಿಯೂ ಒಬ್ಬರಾಗಿದ್ದಾರೆ. ಚೀನಾದಲ್ಲಿ, ನಾಪತ್ತೆಯಾದವರ ಭಾವಚಿತ್ರಗಳನ್ನು ಸಂಬಂಧಿಕರು ಯಾವುದೇ ಸುಳಿವು ಸಿಗಬಹುದು ಎಂಬ ನಿರೀಕ್ಷೆಯಿಂದ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಬೇಗನೆ ಹಿಂತಿರುಗಿ ಬನ್ನಿ, ನಿಮ್ಮ ಪೋಷಕರು ನಿಮ್ಮನ್ನು ತುಂಬಾ ನೆನಪಿಸಿಕೊಳ್ಳುತ್ತಿದ್ದಾರೆ, ನಮಗೆ ನಿಮ್ಮ ಅಗತ್ಯವಿದೆ," ಎಂದು ಮಹಿಳೆಯೊಬ್ಬರು ಜನಪ್ರಿಯ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ. ಅವರು ನಾಪತ್ತೆಯಾಗಿರುವ ತಮ್ಮ ಸಂಬಂಧಿ ಮತ್ತು ಅವರ ಪತ್ನಿಯ ಚಿತ್ರವನ್ನು ಹಂಚಿಕೊಂಡಿದ್ದಾರೆ. ಬೀಜಿಂಗ್ ಮಾಧ್ಯಮಗಳ ಪ್ರವೇಶ ಮತ್ತು ಮಾಹಿತಿಯ ಮೇಲೆ ಬಿಗಿಯಾದ ನಿಯಂತ್ರಣವನ್ನು ಕಾಯ್ದುಕೊಂಡಿದೆ, ಹಾಗೂ ವಿದೇಶಿ ಪತ್ರಕರ್ತರಿಗೆ ಟಿಬೆಟ್‌ನಲ್ಲಿ ವರದಿ ಮಾಡಲು ನಿರ್ಬಂಧ ವಿಧಿಸಲಾಗಿದೆ. ದುರಂತದ ಕೇಂದ್ರಬಿಂದುವಿನ ಹತ್ತಿರವಿರುವ ಸಮುದಾಯಗಳು ಸಂಪೂರ್ಣವಾಗಿ ಸಂಪರ್ಕ ಕಳೆದುಕೊಂಡಿದ್ದು, ವಿನಾಶಕ್ಕೊಳಗಾದ ಪ್ರದೇಶಗಳಿಗೆ ತುರ್ತು ಸರಬರಾಜು ತಲುಪಿಸಲು ವಿಶ್ವಸಂಸ್ಥೆಯು ನೇಪಾಳ ಸರ್ಕಾರದೊಂದಿಗೆ ಕೆಲಸ ಮಾಡುತ್ತಿದೆ."ಸಂಪರ್ಕ ಸಾಧಿಸುವುದು ತುಂಬಾ, ತುಂಬಾ, ತುಂಬಾ ಕಷ್ಟಕರವಾಗಿದೆ," ಎಂದು ಹೇಳಿದ ಪೀಟರ್ಸ್ ಯಾಹಿಯಾ,

**ಕಾರ್ಗೋ ಡ್ರೋನ್, ಪೋರ್ಟರ್‌ಗಳ ಬಳಕೆಗೆ ಪರಿಹಾರ ಕಾರ್ಯದಲ್ಲಿ ತೊಡಗಿರುವ ಸಿಬ್ಬಂದಿ ಚಿಂತನೆ**

ವಿಶ್ವಸಂಸ್ಥೆಯ ಸಂಸ್ಥೆಗಳು ನೀರು, ನೈರ್ಮಲ್ಯ ಕಿಟ್‌ಗಳು, ಆಹಾರ ಮತ್ತು ಔಷಧಿಗಳನ್ನು ತಲುಪಿಸಿವೆ ಎಂದು ಗಮನಸೆಳೆದರು.

"ವಿಶೇಷವಾಗಿ ದುರಂತದ ಕೇಂದ್ರಬಿಂದುವಿನಲ್ಲಿರುವ ಜನರಿಗೆ ಇವು ಅತ್ಯಂತ ಅತ್ಯಗತ್ಯವಾಗಿವೆ." ಗುರುವಾರ ಕಠ್ಮಂಡುವಿನಲ್ಲಿ ರಾಜತಾಂತ್ರಿಕರಿಗೆ ನೀಡಿದ ಮಾಹಿತಿಯಲ್ಲಿ, ವಿದೇಶಾಂಗ ಸಚಿವ ಶಿಶಿರ್ ಖಾನಾಲ್ ಇದನ್ನು "ಹಿಮಾಲಯನ್ ಸುನಾಮಿ" ಎಂದು ಬಣ್ಣಿಸಿದರು. "ನನ್ನ ಪ್ರತ್ಯಕ್ಷ ಅನುಭವದಿಂದ ನಾನು ಹೇಳಬಲ್ಲೆ, ನೆಲದ ಮೇಲಿನ ವಾಸ್ತವವು ಚಿತ್ರಗಳು ತೋರಿಸುವುದಕ್ಕಿಂತ ಅತ್ಯಂತ ಗಂಭೀರವಾಗಿದೆ," ಎಂದು ಅವರು ಹೇಳಿದರು. "ಇದು ಸಾಮಾನ್ಯ ಪ್ರವಾಹವಲ್ಲ". ವಿದೇಶಾಂಗ ಸಚಿವಾಲಯದ ವಕ್ತಾರ ಲೋಕ್ ಬಹದ್ದೂರ್ ಪೌಡೆಲ್ ಛೇತ್ರಿ ಮಾತನಾಡಿ, ನೇಪಾಳಕ್ಕೆ ಹೆವಿ–ಲಿಫ್ಟ್ ಡ್ರೋನ್‌ಗಳು ಮತ್ತು ತಾತ್ಕಾಲಿಕ ಸೇತುವೆಗಳು ಸೇರಿದಂತೆ ವಿಶೇಷ ಅಂತರರಾಷ್ಟ್ರೀಯ ನೆರವಿನ ಅಗತ್ಯವಿದೆ, ಹಾಗೂ ಮೃತರನ್ನು ಗುರುತಿಸಲು ಬಾಡಿ ಬ್ಯಾಗ್‌ಗಳು ಮತ್ತು ಡಿಎನ್‌ಎ ಪರೀಕ್ಷಾ ಕಿಟ್ಗಳು ಬೇಕಾಗಿವೆ ಎಂದು ಹೇಳಿದರು.

# ಮಹಿಳಾ ಕ್ರಿಕೆಟ್‌ಗೆ ಹೊಸ ಅಧ್ಯಾಯ: ಭಾರತದಲ್ಲಿ ಮೊದಲ ಬಾರಿಗೆ ಚಾಂಪಿಯನ್ಸ್ ಟ್ರೋಫಿ ಆಯೋಜನೆ

**ದುಬೈ, ಸೆ.3:** ಪುರುಷ ಕ್ರಿಕೆಟಿಗರಿಗೆ ಸರಿಸಮಾನವಾಗಿ ವೇತನ ನೀಡಿಕೆ ಘೋಷಣೆ ಮಾಡುವ ಮೂಲಕ ಭಾರತದ ಮಹಿಳಾ ಕ್ರಿಕೆಟಿಗರಿಗೆ ಭರ್ಜರಿ ಸುದ್ದಿ ನೀಡಿದ್ದ ಐಸಿಸಿ ಅಧ್ಯಕ್ಷ ಜಯ್ ಶಾ ಇದೀಗ ಮಹಿಳಾ ಕ್ರಿಕೆಟ್ ಆಟಗಾರ್ತಿಯರಿಗೂ ಮತ್ತೊಂದು ಸಿಹಿ ಸುದ್ದಿ ನೀಡಿದ್ದಾರೆ. ಮಹಿಳಾ ಕ್ರಿಕೆಟ್ ಇತಿಹಾಸದಲ್ಲೇ ಮೊದಲ ಬಾರಿಗೆ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿ ಆಯೋಜಿಸಿದ್ದು ಮಹಿಳಾ ಕ್ರಿಕೆಟ್ ಮತ್ತೊಂದು ಐಸಿಸಿ ಟೂರ್ನಿ ಸೇರ್ಪಡೆಯಾದಂತಾಗಿದೆ.

ಮೊದಲ ಬಾರಿಗೆ ನಡೆಯಲಿರುವ ಐಸಿಸಿ ಮಹಿಳಾ ಚಾಂಪಿಯನ್ಸ್ ಟ್ರೋಫಿ 2027 ಮಹಿಳಾ ಕ್ರಿಕೆಟ್‌ನಲ್ಲಿ ರೋಚಕ ಹೊಸ ಅಧ್ಯಾಯಕ್ಕೆ ನಾಂದಿ ಹಾಡಲಿದೆ ಎಂದು ಜಯ್ ಶಾ ಹೇಳಿದ್ದಾರೆ.

2027ರ ಫೆಬ್ರವರಿಯಲ್ಲಿ ನಡೆಯಲಿರುವ ಈ ಐತಿಹಾಸಿಕ ಟೂರ್ನಿಗೆ ಭಾರತ ಆತಿಥ್ಯ ವಹಿಸಲಿದ್ದು, ಮುಂಬೈ ಮತ್ತು ವಡೋದರಾ ಕ್ರೀಡಾಂಗಣಗಳಲ್ಲಿ ಪಂದ್ಯಗಳು ನಡೆಯಲಿದೆ.

ಟೂರ್ನಿಯ ಮೊದಲ ಆವೃತ್ತಿಯಾಗಿರುವುದರಿಂದ, ವಿಶ್ವದ ಅತ್ಯುತ್ತಮ ತಂಡಗಳು ಇಲ್ಲಿ ತೀವ್ರ ಪೈಪೋಟಿ ಹಾಗೂ ಉತ್ತಮ ಗುಣಮಟ್ಟದ ಕ್ರಿಕೆಟ್‌ನಲ್ಲಿ ಮುಖಾಮುಖಿಯಾಗಲಿವೆ ಎಂದು ಜಯ್ ಶಾ ಹೇಳಿದ್ದಾರೆ.

**ವರ್ಷಕ್ಕೊಂದು ಐಸಿಸಿ ಟೂರ್ನಿ**

ಶ್ರೇಯಾಂಕದಲ್ಲಿ ಮೇಲೇರಲು ಹಾಗೂ ಜಾಗತಿಕ ವೇದಿಕೆಯಲ್ಲಿ ಸ್ಪರ್ಧಿಸಲು ತಂಡಗಳಿಗೆ ಈ ಟೂರ್ನಿ ಮತ್ತಷ್ಟು ಪ್ರೇರಣೆ ನೀಡಲಿದೆ ಎಂದು ಅವರು ಹೇಳಿದ್ದಾರೆ. ಪ್ರತಿ ವರ್ಷ ಐಸಿಸಿ ಮಹಿಳಾ ಕ್ರಿಕೆಟ್‌ನ ಪ್ರಮುಖ ಟೂರ್ನಿಯೊಂದು ನಡೆಯುತ್ತಿರುವುದರಿಂದ, ಮಹಿಳಾ ಕ್ರಿಕೆಟ್‌ಗೆ ಇನ್ನಷ್ಟು ವೇಗ ನೀಡಲು, ನಿರಂತರತೆ ಹೆಚ್ಚಿಸಲು ಹಾಗೂ ವಿಶ್ವದಾದ್ಯಂತ ಆಟಗಾರ್ತಿಯರು ಮತ್ತು ಅಭಿಮಾನಿಗಳಿಗಾಗಿ ಬಲಿಷ್ಠ ವಾತಾವರಣ ನಿರ್ಮಿಸಲು ಮಹತ್ವದ ಅವಕಾಶ ಸಿಗಲಿದೆ ಎಂದು ಜಯ್ ಶಾ ಹೇಳಿದ್ದಾರೆ.




**2027ರ ಫೆ.14ರಿಂದ 28ರವರೆಗೆ ಪಂದ್ಯಾವಳಿ**

ಆರು ತಂಡಗಳ ಈ ಟೂರ್ನಿ 2027ರ ಫೆಬ್ರವರಿ 14ರಿಂದ 28ರವರೆಗೆ ಮುಂಬೈ ಮತ್ತು ವಡೋದರದಲ್ಲಿ ನಡೆಯಲಿದೆ. ಆಸ್ಟ್ರೇಲಿಯಾ, ಇಂಗ್ಲೆಂಡ್, ಭಾರತ, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ ಮತ್ತು ಶ್ರೀಲಂಕಾ ಸೇರಿದಂತೆ ವಿಶ್ವದ ಪ್ರಮುಖ ಆರು ಮಹಿಳಾ ಕ್ರಿಕೆಟ್ ತಂಡಗಳು ಟೂರ್ನಿಯಲ್ಲಿ ಭಾಗವಹಿಸಲಿವೆ. ಬಾಂಗ್ಲಾದೇಶ, ಭಾರತ ಮತ್ತು ದಕ್ಷಿಣ ಆಫ್ರಿಕಾ ಈ ಮೂರು ದೇಶಗಳನ್ನು ಆತಿಥ್ಯಕ್ಕಾಗಿ ಐಸಿಸಿ ನಿಗದಿಪಡಿಸಿರುವ ಮಾನದಂಡಗಳ ಆಧಾರದ ಮೇಲೆ ಪರಿಶೀಲಿಸಲಾಗಿತ್ತು. ಬಳಿಕ ಭಾರತವನ್ನು ಬದಲಿ ಆತಿಥೇಯ ರಾಷ್ಟ್ರವಾಗಿ ಆಯ್ಕೆ ಮಾಡುವಂತೆ ಶಿಫಾರಸು ಮಾಡಲಾಗಿತ್ತು. ಸೆಪ್ಟೆಂಬರ್ 2ರಂದು ಐಸಿಸಿ ಮಂಡಳಿ ಈ ನಿರ್ಧಾರಕ್ಕೆ ಅಂತಿಮ ಅನುಮೋದನೆ ನೀಡಿದೆ.

**ಅಂತಿಮ ಲೆಕ್ಕಾಚಾರ ಹೇಗೆ?**

ಟೂರ್ನಿಯಲ್ಲಿ ಆರು ತಂಡಗಳು ರೌಂಡ್–ರಾಬಿನ್ ಲೀಗ್ ಮಾದರಿಯಲ್ಲಿ ಪರಸ್ಪರ ಸೆಣಸಲಿವೆ. ಲೀಗ್ ಹಂತದ ಅಂತ್ಯದಲ್ಲಿ ಅಗ್ರಸ್ಥಾನ ಪಡೆಯುವ ಎರಡು ತಂಡಗಳು ಫೆ.28ರಂದು ನಡೆಯಲಿರುವ ಅಂತಿಮ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಪುರುಷರ ಚಾಂಪಿಯನ್ಸ್ ಟ್ರೋಫಿಯನ್ನು ಸಾಮಾನ್ಯವಾಗಿ 50 ಓವರ್‌ಗಳ ಮಾದರಿಯಲ್ಲಿ ಆಡಲಾಗುತ್ತದೆ. ಆದರೆ ಮೊದಲ ಮಹಿಳಾ ಚಾಂಪಿಯನ್ಸ್ ಟ್ರೋಫಿಯನ್ನು T20 ಮಾದರಿಯಲ್ಲಿ ಆಯೋಜಿಸಲಾಗುತ್ತಿದೆ. ಕಳೆದ ವರ್ಷ ಭಾರತವೇ ಮಹಿಳಾ ಏಕದಿನ ವಿಶ್ವಕಪ್‌ಗೆ ಆತಿಥ್ಯ ವಹಿಸಿತ್ತು. ಆ ಟೂರ್ನಿಯಲ್ಲಿ ಭಾರತ ಮಹಿಳಾ ತಂಡ ಐತಿಹಾಸಿಕವಾಗಿ ಪ್ರಶಸ್ತಿ ಗೆದ್ದು ಗಮನ ಸೆಳೆದಿತ್ತು.

**ಶ್ರೀಲಂಕಾದಿಂದ ಭಾರತಕ್ಕೆ ಟೂರ್ನಿ ಸ್ಥಳಾಂತರ:** ಇದಕ್ಕೂ ಮುನ್ನ ಶ್ರೀಲಂಕಾದಲ್ಲಿ ನಡೆಯಬೇಕಿದ್ದ ಮೊದಲ ಮಹಿಳಾ ಚಾಂಪಿಯನ್ಸ್ ಟ್ರೋಫಿಯನ್ನು ಭಾರತಕ್ಕೆ ಸ್ಥಳಾಂತರಿಸಲು ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ ಬುಧವಾರ ನಿರ್ಧರಿಸಿದೆ. ಶ್ರೀಲಂಕಾದಲ್ಲಿ ಕ್ರಿಕೆಟ್ ಆಡಳಿತಕ್ಕೆ ಸಂಬಂಧಿಸಿದ ಸಮಸ್ಯೆ ಮುಂದುವರಿದಿರುವ ಹಿನ್ನೆಲೆಯಲ್ಲಿ ಅಲ್ಲಿಂದ ಆತಿಥ್ಯವನ್ನು ಬದಲಾಯಿಸಲಾಗಿದೆ. ಐಸಿಸಿ ಮಂಡಳಿ ಬುಧವಾರ ಭಾರತವನ್ನು ಹೊಸ ಆತಿಥೇಯ ರಾಷ್ಟ್ರವಾಗಿ ಅಧಿಕೃತವಾಗಿ ಅನುಮೋದಿಸಿದೆ.

**ಮುಂಬೈನ ಕ್ರಿಕೆಟ್ ಕ್ಲಬ್ ಆಫ್ ಇಂಡಿಯಾ** (ಸಿಸಿಐ) ಮತ್ತು ವಡೋದರಾ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ಈ ಐತಿಹಾಸಿಕ ಟೂರ್ನಿಯ ಪಂದ್ಯಗಳಿಗೆ ಆತಿಥ್ಯ ವಹಿಸಲಿವೆ. ಜುಲೈ 6ರ ಅರ್ಹತಾ ಗಡುವಿನಂದು ಇದ್ದ ಐಸಿಸಿ ಮಹಿಳಾ ಟಿ20ಐ ತಂಡಗಳ ಶ್ರೇಯಾಂಕದ ಆಧಾರದ ಮೇಲೆ ಈ ಆರು ತಂಡಗಳು ಟೂರ್ನಿಗೆ ಅರ್ಹತೆ ಪಡೆದಿವೆ.